ಕರ್ನಾಟಕ ವಿಧಾನ ಸಭೆ

ಗುರುವಾರ ೮ನೇ ಸೆಪ್ಟೆಂಬರ್ ೧೯೮೩

(ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಸದನವು ಬೆಳಗ್ಗೆ ಹತ್ತು ಗಂಟೆಗೆ ಸಮಾವೇಶಗೊಂಡಿತು)

ಶ್ರೀ ಡಿ. ಬಿ. ಚಂದ್ರೇಗೌಡರವರು (ಅಧ್ಯಕ್ಷ ಪೀಠವನ್ನಲಂಕರಿಸಿದರು)

ಶ್ರೀ ಎಂ. ರಘುಪತಿ (ವಾರ್ತಾ ಪ್ರಚಾರ ಮತ್ತು ಪ್ರವಾಸೋದ್ಯಮ ಮಂತ್ರಿಗಳು) ಕಾರ್ಮಿಕ ಮಂತ್ರಿಗಳ ಪರವಾಗಿ.—ಸನ್ಮಾನ್ಯ ಸಭಾಧ್ಯಕ್ಷರೇ ಕಳೆದ ಎರಡು ಮೂರು ದಿವಸಗಳಿಂದ ಸತತವಾಗಿ ಬಹಳ ಪ್ರಾಮುಖ್ಯವಾದ ಕಾರ್ಮಿಕ ಮತ್ತು ವಕ್ಫ್ ಸಂಬಂಧಪಟ್ಟ ಬೇಡಿಕೆಗಳ ಬಗ್ಗೆ ಚರ್ಚೆ ನಡೆದಿರುತ್ತದೆ. ಈ ಚರ್ಚೆಯಲ್ಲಿ ಕಾರ್ಮಿಕ ಮುಖಂಡರುಗಳಾದ ಶ್ರೀಮಾನ್ ಎಂ. ಎಸ್. ಕೃಷ್ಣನ್‌ರವರು ಪ್ರಾರಂಭಮಾಡಿ ಶ್ರೀಮಾನ್ ಸೂರ್ಯನಾರಾಯಣರಾವ್‌ರವರು, ಶ್ರೀ ಮೈಕೇಲ್ ಬಿ. ಫರ್ನಾಂಡೀಸ್‌ರವರು, ಶ್ರೀಮಾನ್ ನಡಫ್‌ರವರು ಮತ್ತು ಶ್ರೀಮಾನ್ ಮೊಯಲಿಯವರು ಭಾಗವಹಿಸಿದ್ದಾರೆ. ಮತ್ತು ಅಲ್ಲಲ್ಲೇ ಒಂದೆರಡು ಮಾತುಗಳನ್ನಾಡಿದ ಶ್ರೀ ಜೆ. ಡಿ. ಸೋಮಪ್ಪನವರು ಇಲ್ಲಿದ್ದಾರೆ. ವಕ್ಫ್ ಮೇಲೆ ಈಗ ನಾನು ಉತ್ತರವನ್ನು ಹೇಳಿ, ಅನಂತರ ಕಾರ್ಮಿಕ ಇಲಾಖೆಗೆ ಹೋಗುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಸನ್ಮಾನ್ಯ ಸಭಾಧ್ಯಕ್ಷರೇ, ಶ್ರೀಮಾನ್ ನಡಫ್‌ರವರು ತಮ್ಮ ಭಾಷಣದಲ್ಲಿ ವಕ್ಫ್ ಸಮಿತಿಗೆ ಈ ವರ್ಷ ಎಷ್ಟು ಹಣವನ್ನು ಇಟ್ಟಿದ್ದೀರಿ ಎಂದು ಕೇಳಿರುತ್ತಾರೆ. ಅವರ ಅವಗಾಹನೆಗೆ ಹೇಳಬೇಕಾದರೆ ೧೯೮೦-೮೧ರಲ್ಲಿ ೩೧ ಲಕ್ಷ ೫೦ ಸಾವಿರ ರೂಪಾಯಿಗಳನ್ನು ಇಟ್ಟಿದ್ದರು. ೧೯೮೧-೮೨ಕ್ಕೆ ೩೪ ಸಾವಿರ ರೂಪಾಯಿಗಳನ್ನು ಇಟ್ಟಿದ್ದರು. ೧೯೮೨-೮೩ಕ್ಕೆ ೩೭.೫೦ ಅಂದರೆ ೫೦ ಸಾವಿರ ರೂಪಾಯಿಗಳನ್ನು ಇಟ್ಟಿದ್ದರು. ಈಗ ೧೯೮೩-೮೪ಕ್ಕೆ ೩೭ ಸಾವಿರ ರೂಪಾಯಿ ಅಂದರೆ ಅಷ್ಟೇ ಹಣವನ್ನು ನಾವೂ ಇಟ್ಟಿದ್ದೇವೆ. ಅಂದರೆ ಈ ಸಲ ಹಣವನ್ನೇ ಇಟ್ಟಿಲ್ಲವೆಂದು ಯಾರೂ ತಿಳಿದುಕೊಳ್ಳಬಾರದು. ಈ ವಕ್ಫ್ ಪ್ರಾಪರ್ಟಿ ಏನೇನು ಇದೆ ಎಂಬುದರ ಬಗ್ಗೆ ಸರ್ವೆ ಮಾಡುವುದಕ್ಕೆ ಸರ್ವೆಯರನ್ನು ನೇಮಕ ಮಾಡಿದ್ದೇವೆ. ಸರ್ವೆ ಮಾಡಿಸಿದ ಮೇಲೆ ವಕ್ಫ್ ಆಸ್ತಿ ಏನು ಇದೆ, ಅದರ ಆದಾಯ ಎಷ್ಟೆಷ್ಟು ಬರುತ್ತದೆ ಅದನ್ನೆಲ್ಲಾ ತಿಳಿಸಲಾಗುತ್ತದೆ. ಈಗ ೧೯ ಸಾವಿರ ವಕ್ಫ್ ಸಂಸ್ಥೆಗಳು ಇವೆ. ಈ ೧೯ ಸಾವಿರ ವಕ್ಫ್ ಸಂಸ್ಥೆಗಳಿಗೆ ಸಂಬಂಧಪಟ್ಟ ಆಸ್ತಿ ಏನು ಇದೆ ಆ ಆಸ್ತಿಗಳ ಬಗ್ಗೆ ವಿವರಣೆಯನ್ನು ತರಿಸುವುದಕ್ಕೆ ಸರ್ವ ಪ್ರಯತ್ನವನ್ನು ನಾನು ಮಾಡುತ್ತೇನೆ.

ಇದೇ ಸಂದರ್ಭದಲ್ಲಿ ಹೇಳುವುದಾದರೆ ಇವತ್ತು ೧೦ ಸಾವಿರದಿಂದ ೧ ಸಾವಿರದ ರೂಪಾಯಿಗಳ ವರೆಗೆ ಆದಾಯವನ್ನು ತರುವ ಸುಮಾರು ೧೫೦೦ ಸಂಸ್ಥೆಗಳು ಇರುತ್ತವೆ. ೫ ಸಾವಿರದಿಂದ ೧ ಸಾವಿರದವರೆಗೆ ಆದಾಯವನ್ನು ತರುವುದು ಬಹಳ ಕಡಿಮೆ ಇದೆ, ಸುಮಾರು ಎರಡನೂರು. ಮೂರನೂರಕ್ಕೂ ಕಡಿಮೆ ಇರುವ ಸಂಸ್ಥೆಗಳು ೫ ಸಾವಿರ ಸಂಸ್ಥೆಗಳು ಇವೆ. ಸುಮಾರು ಒಂದನೂರು ಆದಾಯವನ್ನು ತರುವ ಹನ್ನೆರಡು ಸಾವಿರ ಸಂಸ್ಥೆಗಳು ಇವೆ. ಈ ಸಂಸ್ಥೆಗಳು ಯಾವುದೇ ವಿಧವಾದ ಕಾರ್ಯಾಚರಣೆಯನ್ನು ಮಾಡುವುದಕ್ಕೆ ಯಾವ ವಿಧದಲ್ಲೂ ಅವರಿಗೆ ಹಣ ಸಾಧ್ಯವಾಗುತ್ತಿಲ್ಲ. ಇನ್ನೂ ಹಲವಾರು ಸಂಸ್ಥೆಗಳು ಬಹಳ ಶೋಚನೀಯವಾದ ಪರಿಸ್ಥಿತಿಯಲ್ಲಿವೆ. ಈ ಎಲ್ಲಾ ಸಂಸ್ಥೆಗಳ ಪ್ರತಿಯೊಂದು ಲೆಕ್ಕಪತ್ರಗಳನ್ನು ಮತ್ತು ಆದಾಯ ಎಷ್ಟಿದೆ, ಖರ್ಚು ಎಷ್ಟು ಇದೆ ಇದೆಲ್ಲವನ್ನು ಪರಿಶೀಲನೆ ಮಾಡುವುದಕ್ಕಾಗಿ ಆಡಿಟರ್‌ಗಳನ್ನು ನಾವು ನೇಮಕ ಮಾಡಿದ್ದೇವೆ. ಅಷ್ಟೇ ಅಲ್ಲ ಪ್ರತಿ ಸಾರಿಯೂ ಮಾನ್ಯ ಜೆ. ಡಿ. ಸೋಮಪ್ಪನವರು ಅವರ ಭಾಷಣದಲ್ಲಿ ಯಾವ ಆಧಾರದ ಮೇಲೆ ಅನುದಾನವನ್ನು ಕೊಡುತ್ತಿದ್ದೀರಿ ಎಂದು ಕೇಳಿರುತ್ತಾರೆ, ಆದಕ್ಕೆ ಅದರ ಜಿಲ್ಲಾ ಸಂಸ್ಥೆಗಳು, ಜಿಲ್ಲಾ

ವಕ್ಫ್ ಮಂಡಲಿಗಳು ಏನು ಇವೆ, ಅವುಗಳು ರಾಜ್ಯ ವಕ್ಫ್ ಮಂಡಲಿಗಳಿಗೆ ಲಿಖಿತ ಮೂಲಕ ಇಷ್ಟು ಮಸೀದಿಗಳು ನಮ್ಮ ಜಿಲ್ಲೆಯಲ್ಲಿ ಇರುತ್ತವೆ, ಇಷ್ಟು ಮಸೀದಿಗಳಿಗೆ ಇಷ್ಟು ಹಣ ಬೇಕಾಗುತ್ತದೆಂದು ಬರೆಯುತ್ತಾರೆ. ಅವರಿಗೆ ವಕ್ಫ್ ಮಂಡಲಿಯವರು ಪರಿಶೀಲನೆ ಮಾಡಿದ ನಂತರ ಸರ್ಕಾರಕ್ಕೆ ಅನುದಾನಕ್ಕೆ ಕಳುಹಿಸಿಕೊಡುತ್ತಾರೆ. ಸರ್ಕಾರ ಅದರ ಗುಣಮಟ್ಟವನ್ನು ನೋಡಿಕೊಂಡು ಎಷ್ಟು ಖರ್ಚಾಗುತ್ತದೆ ನೋಡಿಕೊಂಡು ಅದನ್ನು ಪರಿಶೀಲನೆ ಮಾಡಿ ಆದ್ಯತೆಯ ಮೇರೆಗೆ ಹಣವನ್ನು ಒದಗಿಸುತ್ತದೆ. ಇಷ್ಟೆಲ್ಲ ಆದಮೇಲೆ ಈಗ ವಕ್ಫ್ ಮಂಡಲಿ ಏನು ಇದೆ ಅದರಲ್ಲಿ ಕೆಲವರು ಮುತಾಲಿಗಳು ಹಣದ ದುರುಪಯೋಗ ಮಾಡುತ್ತಿದ್ದಾರೆ ಎಂದು ಶ್ರೀಮಾನ್ ನಡಾಫ್‌ರವರು ಹೇಳಿದರು. ಇಂಥಾದ್ದು ಎಲ್ಲೆಲ್ಲಿ ನಮ್ಮ ಗಮನಕ್ಕೆ ಬಂದಿದೆ ಅಲ್ಲೆಲ್ಲಾ ತನಿಖೆ ಮಾಡುವುದಕ್ಕೆ ಏರ್ಪಾಡು ಮಾಡಿದ್ದೇವೆ. ಒಂದೇ ಒಂದು ಉದಾಹರಣೆ ಹೇಳುವುದಾದರೆ ಗುಲ್ಬರ್ಗಾದ ಖಾಜಿ ಬಂದೆ ನವಾಬ್ ಅಲ್ಲಿಯೂ ಕೂಡ ನಮಗೆ ದೂರು ಬಂದಾಗ ತನಿಖೆ ಮಾಡಲಿಕ್ಕೆ ಏರ್ಪಾಡು ಮಾಡಿದ್ದೇವೆ. ಅಲ್ಲಿ ಹಣದ ದುರುಪಯೋಗವಾಗಿದೆ ಎಂದು ಹೇಳಿ ನಮಗೆ ದೂರು ಬಂದಿದೆ. ದೂರು ಬಂದ ತಕ್ಷಣ ತನಿಖೆ ಮಾಡುವುದಕ್ಕೆ ಎಲ್ಲಾ ಏರ್ಪಾಡು ಮಾಡಿದ್ದೇವೆ. ಜಿಲ್ಲಾಧಿಕಾರಿಗಳಿಗೆ ನಾವು ಈ ಅಧಿಕಾರವನ್ನು ವಹಿಸಿಕೊಟ್ಟಿದ್ದೇವೆ. ಎಲ್ಲೆಲ್ಲಿ ವಕ್ಫ್ ಆಸ್ತಿ ಇದೆ. ತಕರಾರು ಎಲ್ಲೆಲ್ಲಿ ಬರುತ್ತದೆ ಅದನ್ನೆಲ್ಲಾ ವಿಲೇವಾರಿ ಮಾಡುವುದಕ್ಕೆ ಮತ್ತು ಶಿಫಾರಸು ಮಾಡುವುದಕ್ಕೆ ಜಿಲ್ಲಾಧಿಕಾರಿಗಳಿಗೆ ನಾವು ಇವೊತ್ತಿನ ದಿವಸ ಅಧಿಕಾರವನ್ನು ವಹಿಸಿಕೊಟ್ಟಿದ್ದೇವೆ. ಮತ್ತೆ ಈ ಸಂದರ್ಭದಲ್ಲಿ ನಾನು ಒಂದು ವಿಷಯವನ್ನು ಹೇಳ ಬೇಕಾಗಿದೆ. ಅದೇನೆಂದರೆ, ಈ ವಕ್ಫ್ ಸಂಸ್ಥೆಗಳು ಏನಿವೆ, ಇವುಗಳ ಪೈಕಿ ಯಾವುದಾದರೂ ಇವೊತ್ತು ಹಣದ ಅಭಾವದಿಂದ ಏನಾದರೂ ಕಷ್ಟಕ್ಕೆ ಗುರಿಯಾಗಿದ್ದರೆ ಅಂತಹ ವಕ್ಫ್ ಸಂಸ್ಥೆಗಳಿಗೆ ಹೆಚ್ಚು ಹಣವನ್ನು ಒದಗಿಸಿಕೊಡಬೇಕೆಂಬುದೇ ಸರ್ಕಾರದ ನೀತಿಯಾಗಿದೆ. ಮತ್ತೆ ಹೊಸ ಮಸೀದಿ ಗಳನ್ನು ಕಟ್ಟಿಸಲು ಅನುಮತಿ ಕೇಳುತ್ತಿದ್ದಾರೆ. ಇಂತಹ ಸಂದರ್ಭಗಳಲ್ಲಿ ಅನುಮತಿ ಕೊಡಲು ನಾವು ಪ್ರಯತ್ನ ಮಾಡುತ್ತಿದ್ದೇವೆ. ಈ ವರ್ಷದಿಂದ ನಾವು ಈ ಒಂದು ಕಾರ್ಯದಲ್ಲಿ ನಾವು ಕೈ ಹಾಕಿದ್ದೇವೆ. ಏಕೆಂದರೆ, ಈಗ ಹೊಸ ಮಸಿದಿಗಳನ್ನು ಕಟ್ಟುವುದಕ್ಕೆ ಬಹಳ ಬೇಡಿಕೆಗಳು ಬರುತ್ತಿವೆ. ಈಗ ಅವರ ಹತ್ತಿರ ಹಣದ ಅಭಾವವಿರುವುದರಿಂದ ನಮ್ಮ ಪರಿಮಿತಿಯಲ್ಲಿಯೇ ಕಟ್ಟು ವುದಕ್ಕೆ ಏರ್ಪಾಡು ಮಾಡುತ್ತೇವೆಂದು ಹೇಳುತ್ತೇನೆ. ಮಾನ್ಯ ನಡಾಫ್ ಅವರು ವಕ್ಫ್ ಡೆವಲಪ್ ಮೆಂಟ್ ಕಾರ್ಪೊರೇಷನ್ ಬಗ್ಗೆ ಹೇಳಿದ್ದಾರೆ. ಇದಕ್ಕೆ ಸಂಬಂಧಪಟ್ಟಂತೆ ಇರುವ ೫ ಲಕ್ಷ ರೂಪಾಯಿ ಗಳ ಷೇರ್ ಬಂಡವಾಳವನ್ನು ಒಂದು ಕೋಟಿ ರೂಪಾಯಿಗಳಿಗೆ ಹೆಚ್ಚಿಸಬೇಕೆಂಬುದು ನಮ್ಮ ಅಭಿಲಾಷೆ ಯಾಗಿದೆ. ಇದನ್ನು ಹೆಚ್ಚಿಸಲು ನಾವು ಸರ್ವ ಪ್ರಯತ್ನ ಮಾಡುತ್ತಿದ್ದೇವೆ. ಇದಕ್ಕೆ ಸಂಬಂಧ ಪಟ್ಟಂತೆ ಎಲ್ಲಾ ವಿಧವಾದ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಈ ಕಾರ್ಯಕ್ರಮಗಳ ಮೂಲಕ ಏನಾದರೂ ಮಾಡಿ ಇದನ್ನು ಒಂದು ಕೋಟಿ ರೂಪಾಯಿಗಳಿಗೆ ಹೆಚ್ಚಿಸಬೇಕೆಂದಿದ್ದೇವೆ.

ಇನ್ನು ಹಜ್ ಕಮಿಟಿ ಬಗ್ಗೆ ತಮಗೆ ಹೇಳಿದ್ದೇನೆ. ಸುಮಾರು ೪೫೫ ಯಾತ್ರಿಗಳನ್ನು ಈ ಸಲ ಆಯ್ಕೆ ಮಾಡಿದ್ದೇವೆ. ಆಯ್ಕೆ ಮಾಡುವ ವಿಧಾನದಲ್ಲಿ ಕೂಡ ನಾವು ಬದಲಾವಣೆ ಮಾಡಿಲ್ಲ. ಖುರಾ ಪದ್ಧತಿ ಮೂಲಕ ಆಯ್ಕೆ ಮಾಡಿದ್ದೇವೆ. ಈ ಸಲ ಆಯ್ಕೆ ಯಾದವರು ಯಾತ್ರೆಗೆ ಹೋಗಿದ್ದಾರೆ. ಇನ್ನು ಮುಂದೆಯೂ ಇದೇ ಪದ್ಧತಿಯನ್ನು ಮುಂದುವರೆಸುತ್ತೇವೆ. ಈ ಯಾತ್ರೆಗೆ ಹೋಗುವವರ ಅನುಕೂಲಕ್ಕಾಗಿ ಮುಂಬೈನಲ್ಲಿ ಒಂದು ಕಟ್ಟಡ ಕಟ್ಟಲಾಗುತ್ತಿತ್ತು. ಇದರ ಕೆಲಸ ಮುಗಿದಿರುವ ಕಾರಣ ಈ ಸಲ ಇದಕ್ಕೆ ಹಣವನ್ನು ಒದಗಿಸಿಲ್ಲ. ಆದರೆ ೫೦ ಸಾವಿರ ರೂಪಾಯಿಗಳನ್ನು ಬೇರೆ ಕೆಲಸಗಳನ್ನು ಮಾಡುವುದಕ್ಕಾಗಿ ಈ ಹಜ್ ಕಮಿಟಿಯವರಿಗೆ ಕೊಟ್ಟಿದ್ದೇವೆ. ಇಷ್ಟನ್ನು ಬಿಟ್ಟರೆ ಈ ಬಗ್ಗೆ ವಿಶೇಷವಾಗಿ ಹೇಳುವುದೇನೂ ಇಲ್ಲ. ಈ ಒಂದು ಬೇಡಿಕೆ ಸಣ್ಣ ಪ್ರಮಾಣದ್ದು ಆಗಿದೆ. ಈ ಕಾರಣದಿಂದ ಇದಕ್ಕೆ ಒಪ್ಪಿಗೆ ಕೊಡಬೇಕೆಂದು ತಮ್ಮ ಮೂಲಕ ಎಲ್ಲಾ ಮಾನ್ಯ ಸದಸ್ಯರನ್ನು ಕೇಳಿ ಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪಮೊಯ್ಲಿ.—ಸನ್ಮಾನ್ಯ ಸದಸ್ಯರಾದಂಥ ಶ್ರೀ ನಡಾಫ್ ಅವರು ಒಂದು ಮುಖ್ಯವಾದಂಥ ವಿಚಾರ ಹೇಳಿದರು, ಅದೇನೆಂದರೆ. ಯಾವ ಕಾರಣದಿಂದಲೋ ಗೊತ್ತಿಲ್ಲ, ಈ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ವಕ್ಫ್ ಆಸ್ತಿಗಳು ಏನಿವೆ, ಇವುಗಳ ಮೇಲೆ ಬೇರೆಯವರು ಆಕ್ರಮಣ ಮಾಡುತ್ತಿದ್ದಾರೆ, ಇದ್ದಂಥವರ ಸ್ವಾಧೀನವನ್ನು ತಪ್ಪಿಸುತ್ತಿದ್ದಾರೆ, ಈ ಬಗ್ಗೆ ಸಂಬಂಧ ಪಟ್ಟ ಜಿಲ್ಲಾಧಿಕಾರಿಗಳು ಮತ್ತು ತಹಶೀಲ್‌ದಾರರು ಕ್ರಮ ತೆಗೆದುಕೊಳ್ಳದೆ ಸ್ವಲ್ಪ ಸಡಿಲಬಿಟ್ಟಿದ್ದಾರೆ ಮತ್ತು ವಕ್ಫ್ ಆಸ್ತಿಯಲ್ಲಿ ಕಟ್ಟಡಗಳನ್ನು ಕಟ್ಟಲು ಮತ್ತು ಶಾಪಿಂಗ್ ಕಾಂಪ್ಲೆಕ್ಸ್ ಕಟ್ಟಲು ಸಂಬಂಧಪಟ್ಟ ಮುನಿಸಿಪಾಲಿಟಿಯವರು ಲೈಸನ್ಸ್ ಕೊಟ್ಟ ಮೇಲೆ ಮತ್ತೆ ರದ್ದು ಮಾಡುತ್ತಿದ್ದಾರೆ ಹಾಗೂ ಈ ವಕ್ಫ್ ಆಸ್ತಿಯನ್ನು ಸರಿಯಾಗಿ ಉಪಯೋಗ ಮಾಡಿಕೊಳ್ಳಲು ಅಧಿಕಾರಿಗಳು ಮತ್ತು

ಬೇರೆ ಬೇರೆ ಜನರು ತಡೆ ಉಂಟುಮಾಡುತ್ತಿದ್ದಾರೆಂದು ಹೇಳಿದರು. ಆದ್ದರಿಂದ ಈ ಬಗ್ಗೆ ಸರ್ಕಾರದವರು ಕಟ್ಟುನಿಟ್ಟಾದ ಕ್ರಮ ತೆಗೆದುಕೊಳ್ಳಬೇಕು ಮತ್ತು ಅವರ ಆಸ್ತಿಯನ್ನು ಅವರೇ ಉಳಿಸಿಕೊಳ್ಳಲು ಸೂಕ್ತ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಎಂ. ರಘುಪತಿ.—ಈ ಬಗ್ಗೆ ನಾವು ಕಟ್ಟುನಿಟ್ಟಾದ ಆದೇಶ ಕೊಟ್ಟಿದ್ದೇವೆ. ಬಂದಂಥ ತಕರಾರುಗಳನ್ನು ಕೂಡಲೇ ವಿಲೇವಾರಿ ಮಾಡಬೇಕು ಮತ್ತು ಸೂಕ್ತ ಪರಿಹಾರ ಒದಗಿಸಬೇಕೆಂದು ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಆದೇಶ ಕೊಟ್ಟಿದ್ದೇವೆ. ಇದರ ಜೊತೆಗೆ ಇದಕ್ಕೆ ಸಂಬಂಧಪಟ್ಟ ಕೆಲವು ಕೇಸ್‌ಗಳು ಕೋರ್ಟಿಗೆ ಏನು ಹೋಗಿವೆ, ಅವುಗಳನ್ನು ಸಹ ಆದಷ್ಟೂ ಬೇಗ ನಿಖಾಲಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಮಾನ್ಯ ನಡಾಫ್ ಅವರು ಮಾತನಾಡುವಾಗ ಈ ವಕ್ಫ್ ಆಸ್ತಿಯನ್ನು ಮುತವಲ್ಲಿಗಳು ಮತ್ತು ಕೆಲವು ವೆಸ್ಟೆಡ್ ಇಂಟರೆಸ್ಟ್ ಸೇರಿಕೊಂಡು ದುರುಪಯೋಗಪಡಿಸಿಕೊಂಡಿರುವುದನ್ನು ಸರಿಪಡಿಸಬೇಕೆಂದು ಹೇಳಿದ್ದರು. ಈ ದಿಶೆಯಲ್ಲಿ ತಾವು ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ ?

ಶ್ರೀ ಎಂ. ರಘುಪತಿ.—ಎಲ್ಲೆಲ್ಲಿ ದುರುಪಯೋಗವಾಗಿದೆ ಎಂದು ಕಂಡುಬರುತ್ತದೋ ಅಲ್ಲೆಲ್ಲಾ ತನಿಖೆ ಮಾಡಿಸುತ್ತಿದ್ದೇವೆ. ಈ ಬಗ್ಗೆ ಬಂದಂಥ ದೂರುಗಳನ್ನು ಸಹ ತನಿಖೆ ಮಾಡಿಸುತ್ತಿದ್ದೇವೆ.

ಶ್ರೀ ಗೋವಿಂದ ಪಿ. ಒಡೆಯರಾಜ್.—ತಾವು ತನಿಖೆ ಮಾಡಿಸಿದರೆ ಈ ರೀತಿ ದುರುಪಯೋಗವಾಗುವುದನ್ನು ನಿಲ್ಲಿಸುವುದಕ್ಕೆ ಸಾಧ್ಯವಾಗುತ್ತದೆಯೇ ?

ಶ್ರೀ ಎಂ. ರಘುಪತಿ.—ಮುತವಲೀಸ್ ಆಗಲಿ ಅಥವಾ ಬೇರೆ ಯಾರೇ ಆಗಲಿ, ಈ ವಕ್ಫ್ ಆಸ್ತಿಯನ್ನು ದುರುಪಯೋಗಪಡಿಸಿಕೊಂಡರೆ ಅಂತಹವರ ಮೇಲೆ ಕಾನೂನು ಪ್ರಕಾರ ಏನು ಕ್ರಮ ಜರುಗಿಸಬೇಕೋ ಅದನ್ನು ಜರುಗಿಸುತ್ತೇವೆ.

ಶ್ರೀ ಎನ್. ಜಿ. ನಾಯಕ್.—ನಮ್ಮ ಮೊಳಕಾಲ್ಮೂರಿನಲ್ಲಿರುವ ವಕ್ಫ್ ಆಸ್ತಿಯಲ್ಲಿ ಶಾಲಾ ಕಟ್ಟಡವನ್ನು ಕಟ್ಟಲು ಅಲ್ಲಿನ ಅಧಿಕಾರಿಗಳು ತಡೆಹಾಕಿದ್ದಾರೆ. ಈ ಬಗ್ಗೆ ಕಳೆದ ಒಂದೂವರೆ ವರ್ಷದಿಂದ ಪತ್ರ ವ್ಯವಹಾರ ನಡೆದಿದೆ. ಈಗಿನ ಸರ್ಕಾರಕ್ಕೂ ಇವನ್ನು ತಿಳಿಸಲಾಗಿದೆ, ಆದರೂ ಸಹ ಏನೂ ಕ್ರಮ ತೆಗೆದುಕೊಳ್ಳದಿರಲು ಕಾರಣವೇನು ?

ಶ್ರೀ ಎಂ. ರಘುಪತಿ.—ನಾನು ಅದರ ವಿವರಗಳನ್ನು ತರಿಸಿಕೊಂಡು ಅದಕ್ಕೆ ಪರಿಹಾರ ಒದಗಿಸಲು ವ್ಯವಸ್ಥೆ ಮಾಡುತ್ತೇನೆ.

ಶ್ರೀ ಎಂ. ವೀರಪ್ಪಮೊಯ್ಲಿ.—ಇಲ್ಲಿ ಕೆಲವು ಮುಖ್ಯ ಪ್ರಶ್ನೆಗಳಿವೆ. ಈ ವಕ್ಫ್ ಬೋರ್ಡು ಮತ್ತು ಈ ವಕ್ಫ್ ಡೆವಲಪ್‌ಮೆಂಟ್ ಕಾರ್ಪೊರೇಷನ್‌ಗೆ ನಮ್ಮ ಸರ್ಕಾರವಿದ್ದಾಗ ತಾತ್ಕಾಲಿಕವಾಗಿ ಅಧಿಕಾರಿಗಳನ್ನೇ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿತ್ತು. ಆಗ ಜನರಲ್ಲಿ ಒಂದು ರೀತಿಯ ಅತೃಪ್ತಿಯ ಭಾವನೆ ಇರುವುದು ಕಂಡುಬಂತು. ಅಲ್ಪ ಸಂಖ್ಯಾತರ ಆಸ್ತಿಗಳನ್ನು ನೋಡಿಕೊಳ್ಳಲು ಅಧಿಕಾರಿಗಳನ್ನು ನೇಮಕ ಮಾಡುವುದು ಸರಿಯಲ್ಲ, ಅಧಿಕಾರೇತರರನ್ನು ನೇಮಕ ಮಾಡಬೇಕೆಂದು ಸರ್ಕಾರಕ್ಕೆ ಸಾಕಷ್ಟು ಬೇಡಿಕೆಗಳು ಬಂದವು ಮತ್ತು ಸಾಕಷ್ಟು ಚಳುವಳಿಯೂ ಸಹ ನಡೆಯಿತು. ಆದ್ದರಿಂದ ತಮ್ಮ ಕಾಲದಲ್ಲಿಯೂ ಸಹ ಇಲ್ಲಿಗೆ ಅಧಿಕಾರಿಗಳನ್ನೇ ಹಾಕಿದರೆ ಸರಿಯಾಗಿ ಕೆಲಸಗಳಾಗುವುದಿಲ್ಲವಾದ ಕಾರಣ ಅಧಿಕಾರೇತರರನ್ನು ನೇಮಕ ಮಾಡಬೇಕೆಂಬ ಬೇಡಿಕೆ ಇದೆ. ಆದ್ದರಿಂದ ಇಲ್ಲಿಗೆ ಅಧಿಕಾರೇತರರನ್ನು ನೇಮಕ ಮಾಡುತ್ತೀರಾ ?

ಶ್ರೀ ಎಂ. ರಘುಪತಿ.—ಮಾನ್ಯ ವಿರೋಧ ಪಕ್ಷದ ನಾಯಕರು ಇಲ್ಲಿ ಅಧಿಕಾರಿಗಳನ್ನು ನೇಮಕ ಮಾಡಿರುವುದರ ಬಗ್ಗೆ ಆಕ್ಷೇಪಣೆ ವ್ಯಕ್ತಪಡಿಸಿದ್ದಾರೆ. ಈ ಬಗ್ಗೆ ನಾನೂ ಸಹ ಹಿಂದೆ ಆಕ್ಷೇಪಣೆ ಎತ್ತಿದ್ದೆ. ಈಗ ಇಲ್ಲಿ ಅಧ್ಯಕ್ಷರು ಒಬ್ಬರನ್ನು ಬಿಟ್ಟರೆ ಬೇರೆಯವರೆಲ್ಲಾ ಖಾಸಗೀ ಸದಸ್ಯರೇ ಇದ್ದಾರೆ. ಮೊದಲು ಈ ಸದಸ್ಯರುಗಳ ಜಾಗದಲ್ಲಿಯೂ ಸಹ ಅಧಿಕಾರಿಗಳೇ ಇದ್ದರು. ಆದರೆ ಈಗ ಬಹಳ ಮಟ್ಟಿಗೆ ಅಧಿಕಾರೇತರರೇ ಇದ್ದಾರೆ. ಈಗಿನ ಅಧ್ಯಕ್ಷರನ್ನು ಬದಲಾವಣೆ ಮಾಡುವ ಯೋಚನೆ ಈಗ ಇಲ್ಲ. ಮುಂದೆ ಯೋಚನೆ ಮಾಡುತ್ತೇವೆ.

ಶ್ರೀ ಶಂಕರ ರೆಡ್ಡಿ.—ಬಳ್ಳಾರಿ ಜಿಲ್ಲೆಯ ವಕ್ಫ್ ಬೋರ್ಡಿನ ಹಣವು ದುರುಪಯೋಗವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ರಘುಪತಿ.—ಮಾನ್ಯ ಸದಸ್ಯರು ಈ ಬಗ್ಗೆ ಲಿಖಿತ ಮೂಲಕ ಬರೆದುಕೊಟ್ಟರೆ ನಾನು ತನಿಖೆ ಮಾಡಿಸುತ್ತೇನೆ.

ಶ್ರೀ ಎಸ್. ರಾಮಚಂದ್ರರಾವ್.—ಈಗ ಜಿಲ್ಲಾ ವಕ್ಫ್ ಕಮಿಟಿಗಳಲ್ಲಿ ವೆಸ್ಟೆಡ್ ಇಂಟರೆಸ್ಟ್ ಬಲವಾಗಿ ಕಾಲೂರಿರುವುದರಿಂದ ಅಲ್ಲಿ ಸಾಮಾನ್ಯ ಜನರಿಗೆ ಪ್ರಾತಿನಿಧ್ಯ ಇಲ್ಲದಂತೆ ಆಗಿದೆ. ಅಲ್ಲಿ ಯಾವಾಗಲೂ ಕೆಲವೊಂದು ವಿಶಿಷ್ಟ ಶಕ್ತಿಗಳು ಇರುತ್ತವೆ. ಆದ್ದರಿಂದ ಈ ಕಮಿಟಿಗಳನ್ನು ಪುನರ್–ರಚನೆ ಮಾಡುತ್ತೀರಾ ?

ಶ್ರೀ ಎಂ. ರಘುಪತಿ.—ಇದು ಒಳ್ಳೆಯ ಸಲಹೆ. ಅದನ್ನು ನಾನು ನೋಡುತ್ತೇನೆ.

ಶ್ರೀ ಬಿ. ಗಂಗಣ್ಣ.—ಈ ವಕ್ಫ್ ಬೋರ್ಡ್ ಸಲಹಾ ಸಮಿತಿಗಳು ಏನಿವೆ. ಈ ಸಮಿತಿಗಳಲ್ಲಿರುವವರು ವಕ್ಫ್ ಆಸ್ತಿಯ ಬಗ್ಗೆ ಇಲ್ಲದ ತರಲೆ ಮಾಡುವುದರ ಮೂಲಕ ಹಳ್ಳಿಗಳಲ್ಲಿರುವ ಸುಮಧುರ ವಾತಾವರಣವನ್ನು ಹದಗೆಡಿಸುತ್ತಿದ್ದಾರೆ. ಆದ್ದರಿಂದ ಈ ಸಮಿತಿಗಳನ್ನು ಪುನರ್–ರಚಿಸಬೇಕು ಮತ್ತು ಅಲ್ಲಿಗೆ ಒಳ್ಳೆಯ ಮುತವಲ್ಲಿಗಳನ್ನು ನೇಮಕ ಮಾಡುವುದರ ಮೂಲಕ ಅಲ್ಲಿನ ಅಸಂತೋಷ ವಾತಾವರಣವನ್ನು ಸರಿಪಡಿಸುತ್ತೀರಾ ?

ಶ್ರೀ ಎಂ. ರಘುಪತಿ.—ಹಳ್ಳಿಗಳಲ್ಲಿರುವ ಒಳ್ಳೆಯ ವಾತಾವರಣವನ್ನು ಕಲುಷಿತಗೊಳ್ಳುವುದಕ್ಕೆ ನಾವು ಬಿಡುವುದಿಲ್ಲ. ಹಳ್ಳಿಗಳಲ್ಲಿ ಯಾವಾಗಲೂ ಸುಮಧುರ ವಾತಾವರಣವಿರಬೇಕು, ಈ ಬಗ್ಗೆ ಸರ್ಕಾರ ಕಟ್ಟುನಿಟ್ಟಾದ ಕ್ರಮ ಕೈಕೊಳ್ಳುತ್ತದೆ ಮತ್ತು ಈ ಸಲಹಾ ಸಮಿತಿಗಳಿಗೆ ಮುತವಲ್ಲಿಗಳನ್ನು ನೇಮಕ ಮಾಡುವುದರ ಬಗ್ಗೆ ನಾನು ಪರಿಶೀಲನೆ ಮಾಡುತ್ತೇನೆ.

ಶ್ರೀ ಎಂ. ಎಸ್. ಪಾಟೀಲ್.—ವಕ್ಫ್ ಬೋರ್ಡಿನಿಂದ ಪ್ರತಿವರ್ಷವೂ ಹಜ್‌ಗೆ ಕಳುಹಿಸತಕ್ಕದ್ದು ಇದೆ. ಬೇರೆ ವರ್ಗದ ಜನರು ಹೋಗುವುದಕ್ಕೆ ಸಿದ್ಧರಿದ್ದರೆ ಅವರಿಗೂ ಅನುಕೂಲ ಮಾಡಿಕೊಡುತ್ತೀರಾ ?

ಶ್ರೀ ಎಂ. ರಘುಪತಿ.—ನಮಗೆ ಅಂತಹ ಬೇಡಿಕೆ ಯಾವುದೂ ಇದುವರೆಗೂ ಬಂದಿಲ್ಲ. ಬಂದರೆ ನೋಡೋಣ.

ಶ್ರೀ ಬೈರೇಗೌಡ.—ಬೆಂಗಳೂರು ನಗರದಲ್ಲಿ ಕೋಟ್ಯಾಂತರ ರೂಪಾಯಿಗಳ ಬೆಲೆ ಬಾಳತಕ್ಕ ವಕ್ಫ್ ಆಸ್ತಿ ಇದೆ. ಕಂಟೋನ್‌ಮೆಂಟ್ ಏರಿಯಾ, ಮತ್ತು ನಗರ ಪ್ರದೇಶದಲ್ಲಿಯೂ ಇದು ಇದೆ. ಇಲ್ಲಿ ಸಣ್ಣಸಣ್ಣ ವ್ಯಾಪಾರಸ್ಥರು ಅಂಗಡಿಗಳನ್ನು ಹಾಕಿಕೊಂಡು ತಮ್ಮ ಜೀವನ ಮಾಡುತ್ತಿರುತ್ತಾರೆ. ಅಂಥವರನ್ನು ಆ ಪ್ರದೇಶದಲ್ಲಿ ಬಲಾಢ್ಯರಾಗಿರತಕ್ಕವರು ರಾತ್ರೋರಾತ್ರಿ ಹೊರಗೆ ಹಾಕತಕ್ಕ ಕೆಲಸವನ್ನು ಮಾಡುತ್ತಿರುತ್ತಾರೆ. ಉದಾಹರಣೆಗೆ ಹೇಳಬೇಕಾದರೆ, ಎಚ್. ಸಿದ್ದಯ್ಯ ರಸ್ತೆಯಲ್ಲಿ ಕೆಲವರು ಸಣ್ಣಸಣ್ಣ ಅಂಗಡಿಗಳನ್ನು ಇಟ್ಟುಕೊಂಡಿದ್ದಾರೆ. ಅಲ್ಲಿರುವಂಥ ದೊಡ್ಡ ವ್ಯಕ್ತಿ ಇವರನ್ನು ಓಡಿಸುವಂಥ ಪ್ರಯತ್ನ ಮಾಡುತ್ತಿದ್ದಾನೆ. ಇವರು ಬಹಳ ಪ್ರಭಾವಯುತರು ಎಂದು ನಾನು ಕೇಳಿದ್ದೇನೆ. ಎಲ್ಲರ ಮೇಲೆ ಪ್ರಭಾವ ಬೀರುವಂಥವರು, ಇದನ್ನು ತಡೆಗಟ್ಟಿ ಯಾರು ಅಲ್ಲಿ ಸಾಮಾನ್ಯ ಜನರು ಇದ್ದಾರೆ ಅವರನ್ನು ರಕ್ಷಣೆ ಮಾಡುವಂಥ ಕೆಲಸ ಮಾಡಬೇಕು. ಹತ್ತಾರು ವರ್ಷಗಳಿಂದ ಇವರು ಅಲ್ಲಿ ಕೆಲಸ ಮಾಡಿಕೊಂಡಿರುತ್ತಾರೆ ಅವರಿಗೆ ಕಾನೂನು ರೀತ್ಯ ಬಾಡಿಗೆಯನ್ನು ಗೊತ್ತು ಮಾಡುವುದಾಗಲೀ ಮಾಡಿ ಅವರಿಗೆ ರಕ್ಷಣೆ ಕೊಡುವಂಥ ಕೆಲಸವನ್ನು ಮಾಡುತ್ತೀರಾ ?

ಶ್ರೀ ಎಂ. ರಘುಪತಿ.—ಶ್ರೀಮಾನ್ ಬೈರೇಗೌಡರು ಹೇಳುವ ರೀತಿಯಲ್ಲಿ ವಕ್ಫ್ ಆಸ್ತಿಗಳ ಮೇಲೆ ಯಾರು ದಾಳಿ ಮಾಡುತ್ತಿದ್ದಾರೆಂದು ನಮ್ಮ ಅವಗಾಹನೆಗೆ ತಂದಿದ್ದಾರೆ ಮತ್ತು ಸಣ್ಣವರಿಗೆ ರಕ್ಷಣೆ ಕೊಡಬೇಕು ಎಂದು ಹೇಳಿದ್ದಾರೆ, ಅದನ್ನು ನಾವು ಗಮನಿಸುತ್ತೇವೆ. ಸಣ್ಣವರಿಗೆ ರಕ್ಷಣೆ ಕೊಡಬೇಕು ಎನ್ನುವುದೇ ನಮ್ಮ ಸರ್ಕಾರದ ನೀತಿ. ಮಾನ್ಯ ಸದಸ್ಯರು ಇದನ್ನು ನಮಗೆ ಬರೆದು ಕಳುಹಿಸಿದರೆ ಖಂಡಿತವಾಗಿಯೂ ನಾವು ಪರಿಶೀಲನೆ ಮಾಡಿ ವಕ್ಫ್ ಆಸ್ತಿಗಳನ್ನು ಉಳಿಸಿಕೊಳ್ಳುತ್ತೇವೆ. ಇದೇ ರೀತಿಯಾಗಿ ಬೆಂಗಳೂರು ನಗರದಲ್ಲಿ, ಮೈಸೂರು, ಬೆಳಗಾಂ ಮತ್ತು ಧಾರವಾಡ ನಗರಗಳಲ್ಲಿ

ವಕ್ಫ್ ಆಸ್ತಿಗಳ ಮೇಲೆ ಮಳಿಗೆಗಳನ್ನು ಕಟ್ಟಿ ಅದರ ಮೂಲಕ ಸ್ವಲ್ಪ ಹಣವನ್ನು ಹೆಚ್ಚು ಮಾಡಬೇಕು ಎನ್ನುವ ಏರ್ಪಾಡು ಕೂಡ ಮಾಡಿದ್ದೇವೆ. ಮತ್ತು ಇದರ ಆಸ್ತಿಯನ್ನು ರಕ್ಷಣೆ ಮಾಡುವುದಕ್ಕೆ ನಾವು ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ವಿ. ಎಸ್. ಕೌಜಲಗಿ.—ಪ್ರತಿವರ್ಷ ೫೦೦ ಜನರನ್ನು ಹಜ್ ಕಳುಹಿಸುವ ಬದಲು ಇಲ್ಲಿರುವ ಬಡ ಮುಸ್ಲಿಂರಿಗೆ ಅವರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಣೆ ಮಾಡಲಿಕ್ಕೆ ಅವರಿಗೆ ಆರ್ಥಿಕ ನೆರವನ್ನು ಕೊಟ್ಟು ಅವರನ್ನು ಸುಧಾರಣೆ ಮಾಡುವುದಕ್ಕೆ ವಕ್ಫ್ ಬೋರ್ಡಿನ ಮೂಲಕ ಏನಾದರೂ ಯೋಜನೆ ಹಾಕಿಕೊಳ್ಳುತ್ತೀರಾ ?

ಶ್ರೀ ಎಂ. ರಘುಪತಿ.—ಬಡವರಿಗೆ ಅನುಕೂಲ ಮಾಡಬೇಕೆಂದು ವಕ್ಫ್ ಬೋರ್ಡ್ ರಚನೆಯಾಗಿರುವುದು.

ಸನ್ಮಾನ್ಯ ಅಧ್ಯಕ್ಷರೇ, ಕಳೆದ ಮೂರು ದಿವಸಗಳಿಂದ ಶ್ರೀಮಾನ್ ಕೃಷ್ಣನ್ ಅವರು ಸೂರ್ಯನಾರಾಯಣ್ ರಾವ್ ಅವರು, ಮೈಕೇಲ್ ಫರ್ನಾಂಡೀಸ್ ಅವರು ಮತ್ತು ಧನಂಜಯ ಕುಮಾರ್ ಅವರು ಮತ್ತು ಕಾಂತ ಅವರು ಕಾರ್ಮಿಕ ಇಲಾಖೆಯ ಬಗ್ಗೆ ಮಾತನಾಡಿದ್ದಾರೆ ಮಾನ್ಯ ವಿರೋಧಪಕ್ಷದನಾಯಕರೂ ಸಹ ಮಾತನಾಡಿ ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ ಅಧ್ಯಕ್ಷರೇ ನಾನು ಪ್ರಪ್ರಥಮವಾಗಿ ಎಲ್ಲರಿಗೂ ನನ್ನ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಏಕೆಂದರೆ ಎಲ್ಲರೂ ಇದರ ಬಗ್ಗೆ ಉತ್ತಮವಾದ ಸಲಹೆಗಳನ್ನು ಕೊಟ್ಟಿದ್ದಾರೆ ಮತ್ತು ಅರಿತು ನುರಿತ ಧುರೀಣರಾಗಿರತಕ್ಕವರು, ಕಾರ್ಮಿಕರ ಹಿತಚಿಂತನೆ ಮಾಡುವವರು ಕಾರ್ಮಿಕರ ಹಿತಾಸಕ್ತಿಗಳನ್ನು ಕಾಪಾಡುವುದಕ್ಕೋಸ್ಕರ ಹಗಲುರಾತ್ರಿ ದುಡಿಯತಕ್ಕವರು ಇಲ್ಲಿದ್ದಾರೆ. ಕಾರ್ಮಿಕರ ಶೋಷಣೆಯನ್ನು ತಪ್ಪಿಸಬೇಕು ಎಂದು ಹೇಳುವವರು ಇಲ್ಲಿದ್ದಾರೆ. ಈ ವರ್ಗವನ್ನು ಮೇಲಕ್ಕೆ ಎತ್ತಬೇಕು ಎಂದು ಈ ಕಾರ್ಯಕ್ಷೇತ್ರದಲ್ಲಿ ಕೆಲಸ ಮಾಡಿದವರು ಬಹಳ ಉತ್ತಮವಾದ ಸಲಹೆಗಳನ್ನು ಕೊಟ್ಟಿದ್ದಾರೆ.

ಪ್ರಪ್ರಥಮವಾಗಿ ನಾವು ಶಿಕ್ಷಣ ತರಬೇತಿ ಸಂಸ್ಥೆಗಳನ್ನು ಇಲಾಖೆಯ ಮೂಲಕ ತೆರೆಯಬೇಕು ಎಂದು ಯೋಚಿಸಿದ್ದೇವೆ. ಇದರಲ್ಲಿ ಸುಮಾರು ಒಂದು ಲಕ್ಷ ಜನ ವಿದ್ಯಾರ್ಥಿಗಳು ತರಬೇತಿ ಪಡೆಯಬೇಕು ಎಂದು ಇದೆ. ಇದರಲ್ಲಿ ಹೆಚ್ಚಾಗಿ ಗ್ರಾಮಾಂತರ ಪ್ರದೇಶದ ಜನ ಹಿಂದುಳಿದವರು ಇದಕ್ಕೆ ಹೆಚ್ಚಿನ ಆಸಕ್ತಿ ತೋರಿಸಿ ಅವರಿಂದ ಹೆಚ್ಚಿನ ಬೇಡಿಕೆ ಬಂದಿದೆ. ಈ ತರಬೇತಿಯನ್ನು ಪಡೆಯಲಿಕ್ಕೆ ಹಳ್ಳಿಗಾಡಿನ ವಿದ್ಯಾರ್ಥಿಗಳು ಮುಂದೆ ಬಂದಿದ್ದಾರೆ ಎಂದರೆ ಇದಕ್ಕೆ ಎಷ್ಟು ಬೇಡಿಕೆ ಎನ್ನುವುದು ನಮಗರ್ಥವಾಗುತ್ತದೆ. ನಾವು ಇವತ್ತು ಒಂದು ಐ. ಟಿ. ಐ.ನ್ನು ಸ್ಥಾಪನೆ ಮಾಡಬೇಕಾದರೆ ಸುಮಾರು ೪೦ ಲಕ್ಷ ರೂಪಾಯಿಗಳು ಬೇಕಾಗುತ್ತದೆ. ಇದೇ ಐ. ಟಿ. ಐ.ನ್ನು ಸರ್ಕಾರದವರು ಸ್ಥಾಪನೆ ಮಾಡಬೇಕಾದರೆ ಆರೂವರೆ ಲಕ್ಷ ರೂಪಾಯಿಗಳು ಬೇಕಾಗುತ್ತದೆ. ಈ ವರ್ಷ ನಾವು ೨೪ ತರಬೇತಿ ಸಂಸ್ಥೆಗಳನ್ನು ಸ್ಥಾಪನೆ ಮಾಡುವುದಕ್ಕೆ ಪರವಾನಿಗೆಯನ್ನು ಕೊಟ್ಟಿದ್ದೇವೆ. ಇದನ್ನು ಖಾಸಗಿಯವರಿಗೆ ಕೊಟ್ಟಿದ್ದೇವೆ ಏಕೆಂದರೆ ನಮ್ಮಲ್ಲಿ ಹಣದ ಅಭಾವ ಇರುವುದರಿಂದ ಅವರಿಗೆ ಕೊಟ್ಟಿದ್ದೇವೆ. ಇವುಗಳನ್ನು ಮುಂದಿನ ಶೈಕ್ಷಣಿಕ ವರ್ಷದಿಂದ ಸ್ಥಾಪನೆ ಮಾಡಬೇಕು ಎಂದು ಹೇಳಿದ್ದೇವೆ. ಇದರಲ್ಲಿ ಹೆಣ್ಣು ಮಕ್ಕಳಿಗೆ ವಿಶೇಷವಾದಂತ ತರಬೇತಿಯನ್ನು ಕೊಡುವಂತೆ ಏರ್ಪಾಡು ಮಾಡಿದ್ದೇವೆ. ಇದನ್ನು ಸರ್ಕಾರಿ ಕ್ಷೇತ್ರದಲ್ಲಿ ಸ್ಥಾಪನೆ ಮಾಡಬೇಕು ಎಂದು ನಾವು ಯೋಜನೆಯನ್ನು ಹಾಕಿಕೊಂಡಿದ್ದೇವೆ. ಈ ಸಂಸ್ಥೆಯನ್ನು ಸ್ಥಾಪನೆ ಮಾಡಬೇಕಾದರೆ ಸೆಪ್ಟೆಂಬರ್ ತಿಂಗಳಲ್ಲಿ ಪ್ರಕಟಣೆಯ ಮೂಲಕ ತಿಳಿಸುತ್ತೇವೆ, ಯಾರು ಯಾರು ಇವುಗಳನ್ನು ಸ್ಥಾಪನೆ ಮಾಡಬೇಕು ಎಂದು ಇದ್ದಾರೋ ಅವುರುಗಳು ಅರ್ಜಿಗಳನ್ನು ಸಲ್ಲಿಸಬೇಕು. ಅರ್ಜಿಗಳನ್ನು ಸಲ್ಲಿಸಿದ ಮೇಲೆ ಅವುಗಳನ್ನು ಪರಿಶೀಲನೆ ಮಾಡುವುದಕ್ಕೆ ಒಂದು ಸಮಿತಿ ಇದೆ. ಅವರು ಇದನ್ನು ಪರಿಶೀಲನೆ ಮಾಡುತ್ತಾರೆ. ಆ ಸಮಿತಿಯಲ್ಲಿ ಕೇಂದ್ರ ಸರ್ಕಾರದ ಪ್ರತಿನಿಧಿ, ಕೈಗಾರಿಕಾ ಶಿಕ್ಷಣ ತರಬೇತಿ ಸಂಸ್ಥೆಯ ಪ್ರತಿನಿಧಿ ಮತ್ತು ಇದಕ್ಕೆ ಸಂಬಂಧಪಟ್ಟ ರಾಜ್ಯಸರ್ಕಾರದ ಒಬ್ಬ ಪ್ರತಿನಿಧಿ ಇರುತ್ತಾರೆ. ಮತ್ತು ಮಾಲೀಕರ ಪ್ರತಿನಿಧಿಯೂ ಸಹ ಇದರಲ್ಲಿರುತ್ತಾರೆ. ಕಾರ್ಮಿಕರ ಪ್ರತಿನಿಧಿಯೂ ಇರುತ್ತಾರೆ. ಇದಕ್ಕೆ ಸಂಬಂಧಪಟ್ಟ ತಜ್ಞರು ಇರುತ್ತಾರೆ, ಇಷ್ಟು ಜನರನ್ನು ಒಳಗೊಂಡು ಸಮಿತಿಯು ಕೆಲಸ ಮಾಡುತ್ತದೆ. ಸಮಿತಿಯವರು ಅರ್ಜಿಗಳನ್ನು ಪರಿಶೀಲನೆ ಮಾಡಿ ಸಂಬಂಧಪಟ್ಟ ಸ್ಥಳದಲ್ಲಿ ತರಬೇತಿಯ ಸಂಸ್ಥೆಯನ್ನು ಸ್ಥಾಪನೆ ಮಾಡುವುದೇ ಸರಿಯಾಗಿದೆಯೋ ಇಲ್ಲವೇ ಎನ್ನುವುದನ್ನು ನೋಡುತ್ತಾರೆ. ಇದಕ್ಕೆ ಸರ್ಕಾರದವರು ಕೆಲವೊಂದು ಕಂಡೀಷನ್ಸ್ ಕೂಡ ಹಾಕಿರುತ್ತಾರೆ. ಅರ್ಜಿಗಳು ಸೂಕ್ತವಾಗಿ ಕಂಡಲ್ಲಿ

ಅವುಗಳಿಗೆ ಪರವಾನಿಗೆಯನ್ನು ಕೊಡುತ್ತಾರೆ. ಇಂಥ ಒಂದು ನೀತಿಯನ್ನು ನಾವು ಹಾಕಿಕೊಂಡಿದ್ದೇವೆ. ಕೇರಳ ರಾಜ್ಯದಲ್ಲಿ ಸುಮಾರು ೯೦ ಕೈಗಾರಿಕಾ ತರಬೇತಿ ಸಂಸ್ಥೆಗಳು ಇವೆ. ಕೇರಳ ಸಣ್ಣ ರಾಜ್ಯವಾಗಿದ್ದರೂ ಕೂಡ ಕೈಗಾರಿಕಾ ತರಬೇತಿಯನ್ನು ಪಡೆಯತಕ್ಕದ್ದರಲ್ಲಿ ಬಹಳ ಅನುಕೂಲವನ್ನು ಅವರು ಮಾಡಿಕೊಂಡಿದ್ದಾರೆ. ಅದೇ ರೀತಿಯಲ್ಲ ಕರ್ನಾಟಕ ರಾಜ್ಯದಲ್ಲಿಯೂ ಸಹ ಐದು ವರ್ಷಗಳಲ್ಲಿ ಪ್ರತಿ ತಾಲ್ಲೂಕಿನಲ್ಲಿಯೂ ಒಂದೊಂದು ತರಬೇತಿ ಸಂಸ್ಥೆಯನ್ನು ಮಾಡಬೇಕು ಎಂದು ಸರ್ಕಾರದವರು ಒಂದು ನೀತಿಯನ್ನು ಹಾಕಿಕೊಂಡಿದ್ದಾರೆಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಈ ಒಂದು ನೀತಿಯ ಪ್ರಕಾರ ಮುಂದಿನ ಶೈಕ್ಷಣಿಕ ವರ್ಷದಿಂದ ಇದನ್ನು ಪ್ರಾರಂಭ ಮಾಡಿ ಐದು ವರ್ಷದಲ್ಲಿ ಈ ಒಂದು ಕಾರ್ಯಕ್ರಮವನ್ನು ಪೂರೈಸಬೇಕು ಎಂದು ಹೇಳಿ, ಇವುಗಳನ್ನು ಹಿಂದುಳಿದ ಪ್ರದೇಶಗಳು ಏನು ಇವೆ, ಕೈಗಾರಿಕಾ ಕ್ಷೇತ್ರಗಳು ಎಲ್ಲಿವೆ ಅಲ್ಲಿ ಸ್ಥಾಪನೆ ಮಾಡಬೇಕು ಎಂದು ಹೇಳಿದ್ದೇವೆ. ಅಂಥ ಸ್ಥಳಗಳಲ್ಲಿ ಈ ಸಂಸ್ಥೆಗಳನ್ನು ತೆಗೆಯಬೇಕು ಎನ್ನುವ ಏರ್ಪಾಡು ಮಾಡಿದ್ದೇವೆ. ಮಾನ್ಯ ಸಭಾಧ್ಯಕ್ಷರೇ ನಾವು ಈ ವರ್ಷದಿಂದ ತರಬೇತಿ ಸಂಸ್ಥೆಗಳನ್ನು ಸ್ಥಾಪನೆ ಮಾಡಬೇಕೆಂದು ಒಂದು ನಿರ್ಣಯವನ್ನು ತೆಗೆದುಕೊಂಡಿದ್ದೇವೆ. ಈ ಸಂಸ್ಥೆಯನ್ನು ತೆರೆಯುವುದರಿಂದ ಸುಮಾರು ೨೪೦ ಜನ ವಿದ್ಯಾರ್ಥಿಗಳಿಗೆ ಅನುಕೂಲವಾಗಬಹುದೆಂದು ನಾವು ನಿರೀಕ್ಷೆ ಮಾಡಿದ್ದೇವೆ. ನಾಲ್ಕು ವಿಭಾಗಗಳಲ್ಲಿ ಇಂಥ ಸಂಸ್ಥೆಗಳನ್ನು ತೆರೆಯಬೇಕೆಂದೇ ಸರ್ಕಾರದವರು ಯೋಚನೆ ಮಾಡಿದ್ದೇವೆ. ಈ ಸಂಸ್ಥೆಗಳಿಂದ ತರಬೇತಿ ಪಡೆದಂಥ ವಿದ್ಯಾರ್ಥಿಗಳು ಬಿ.ಟಿ.ಎಸ್. ಅಥವಾ ಕೆ. ಎಸ್. ಆರ್. ಟಿ. ಸಿ ಅಥವಾ ಖಾಸಗಿ ಬಸ್ಸುಗಳಲ್ಲಿ ಹೋಗಿ ಸೇರಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಈ ವರ್ಷದಿಂದಲೇ ಈ ಶಾಲೆಯನ್ನು ಪ್ರಾರಂಭ ಮಾಡಬೇಕೆಂದು ಕೂಡ ಸರ್ಕಾರದವರು ನಿರ್ಧಾರ ಮಾಡಿದ್ದೇವೆ. ಸೆಪ್ಟೆಂಬರ್ ತಿಂಗಳ ಕೊನೆಯ ವೇಳೆಗೆ ಅಪ್ಲಿಕೇಷನ್ಸ್ ಕರೆಯುತ್ತೇವೆ. ನಾಲ್ಕು ಕೇಂದ್ರಗಳಲ್ಲಿಯೂ ಕೂಡ ಅಪ್ಲಿಕೇಶನ್ಸ್ ಕರೆದು ನಾಲ್ಕು ಕೇಂದ್ರದ ಅಭ್ಯರ್ಥಿಗಳಲ್ಲಿ ಸಹ ಆಯ್ಕೆ ಮಾಡಿಕೊಳ್ಳುವಂಥ ಒಂದು ವ್ಯವಸ್ಥೆಯನ್ನು ಸರ್ಕಾರದವರು ಮಾಡುತ್ತೇವೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ಉದ್ಯೋಗ ವಿನಿಮಯದ ಕೇಂದ್ರದ ಬಗ್ಗೆ ನಾನು ಪ್ರಸ್ತಾಪ ಮಾಡುವುದಾದರೆ ಹೋದ ವರ್ಷಕ್ಕಿಂತ ಈ ವರ್ಷ ದೊಡ್ಡ ಪ್ರಮಾಣದಲ್ಲಿ ಏನೂ ನಿರುದ್ಯೋಗಿಗಳ ಸಂಖ್ಯೆ ಬೆಳೆದಿಲ್ಲ. ಆದರೆ ನಮ್ಮ ಸರ್ಕಾರದವರು ರೂಪಿಸಿಕೊಂಡಿರತಕ್ಕಂಥ ಈ ಹೊಸ ಕೈಗಾರಿಕಾ ನೀತಿಯಿಂದ ಕೆಲವಾರು ಜನರಿಗೆ ಉದ್ಯೋಗಾವಕಾಶಗಳು ದೊರೆಯಬಹುದು ಎನ್ನುವ ಒಂದು ಆಶಾಭಾವನೆಯನ್ನು ನಾನು ಇಟ್ಟುಕೊಂಡಿದ್ದೇನೆ. ಆದರೆ ಅನೇಕ ಜನ ಮಾನ್ಯ ಸದಸ್ಯರು ಮಾತನಾಡುವಾಗ ಹೇಳಿದರು ಈ ಉದ್ಯೋಗ ವಿನಿಮಯ ಕಚೇರಿಗಳಲ್ಲಿ ಸರಿಯಾದ ರೀತಿಯಲ್ಲಿ ಕೆಲಸಕಾರ್ಯಗಳು ನಡೆಯುತ್ತಿಲ್ಲವೆಂದು ಮತ್ತು ಸೀನಿಯಾರಿಟಿ ಮೈಂಟೇನ್ ಮಾಡುತ್ತಿಲ್ಲವೆಂದು ಸಹ ಹೇಳಿದ್ದಾರೆ, ಅದು ಸತ್ಯಾಂಶವೆಂದು ನಾನು ಕೂಡ ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಆದರೆ ಈ ಎಲ್ಲಾ ರೀತಿಯ ನ್ಯೂನತೆಗಳನ್ನು ಹೋಗಲಾಡಿಸುವುದಕ್ಕಾಗಿ ನಾವು ಕಂಪ್ಯೂಟರ್ ಸಿಸ್ಟಂನ್ನು ಜಾರಿಗೆ ತರಬೇಕೆಂದು ಸರ್ಕಾರದವರು ಯೋಚನೆ ಮಾಡುತ್ತಿದ್ದೇವೆ. ಈ ಯೋಜನೆಯನ್ನು ನಾವು ಡಿಸೆಂಬರ್ ಅಥವಾ ಜನವರಿ ತಿಂಗಳೊಳಗಾಗಿ ಜಾರಿಗೆ ತರುತ್ತೇವೆ. ಈ ಒಂದು ಯಂತ್ರವನ್ನು ತರಿಸುವುದಕ್ಕಾಗಿ ನಾವು ಈಗಾಗಲೇ ಟೆಂಡರ್‌ನ್ನು ಕರೆದಿದ್ದೇವೆ. ಜನವರಿ ತಿಂಗಳಲ್ಲಿ ಇದನ್ನು ಜಾರಿಗೆ ತರಬೇಕೆಂದು ನಾವು ಆದೇಶವನ್ನು ಸಹ ಕೊಟ್ಟಿದ್ದೇವೆ. ಆ ರೀತಿಯ ಒಂದು ವ್ಯವಸ್ಥೆಯನ್ನು ಸರ್ಕಾರದವರು ಮಾಡಿದರೆ ಆಗ ಜನತೆಯಲ್ಲಿ ಒಂದು ನಂಬಿಕೆ ಈ ಉದ್ಯೋಗ ವಿನಿಮಯ ಕೇಂದ್ರದ ಮೇಲೆ ಬರುತ್ತದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇವತ್ತು ಜನರಿಗೆ ಏನು ಭಾವನೆ ಬಂದಿದೆಯೆಂದರೆ ನಾವು ಎಂಪ್ಲಾಯಿಮೆಂಟ್ ಎಕ್ಸ್‌ಛೇಂಜ್‌ನಲ್ಲಿ ಹೆಸರನ್ನು ರಿಜಿಸ್ಟರ್ ಮಾಡಿದರೆ ನಮಗೆ ಇನ್ನು ೫ ವರ್ಷಗಳಿಗೂ ಉದ್ಯೋಗ ಸಿಗುತ್ತದೆಯೋ ಇಲ್ಲವೋ ಎನ್ನತಕ್ಕಂಥ ಒಂದು ಅನುಮಾನ ಬಂದಿದೆ. ಈ ರೀತಿಯ ಒಂದು ಅನುಮಾನವನ್ನು ಹೋಗಲಾಡಿಸುವುದಕ್ಕಾಗಿ ನಾವು ಈಗ ಕಂಪ್ಯೂಟರ್ ಸಿಸ್ಟಂನ್ನು ಜಾರಿಗೆ ತರುತ್ತಿದ್ದೇವೆ. ನಮ್ಮ ರಾಜ್ಯದಲ್ಲಿ ಈ ವರ್ಷ ಎಷ್ಟು ಜನ ನಿರುದ್ಯೋಗಿಗಳು ಇದ್ದಾರೆ ಎನ್ನುವ ಬಗ್ಗೆ ನಾನು ಒಂದು ಪಟ್ಟಿಯನ್ನು ಕೊಡುತ್ತೇನೆ. ಬಿ. ಇ. ಪದವಿಯನ್ನು ಪಡೆದಿರತಕ್ಕಂಥವರು ಒಟ್ಟು ೮೩ ಜನರು ಇದ್ದಾರೆ. ಇದರಲ್ಲಿ ಎಸ್.ಸಿ. ೫ ಜನರು ಮತ್ತು ಎಸ್. ಟಿ. ೧ ಇದ್ದಾರೆ. ಮೆಡಿಕಲ್ ಪದವೀದರರು ೫ ಜನರು ಇದ್ದಾರೆ. ಇದರಲ್ಲಿ ಎಸ್. ಸಿ. ೧ ಮತ್ತು ಎಸ್. ಟಿ. ೧ ಇದ್ದಾರೆ. ಪದವೀದರರು ೪೪೧ ಜನರು ಇದ್ದಾರೆ. ಇದರಲ್ಲಿ ೮೧ ಜನರು ಎಸ್.ಸಿ. ೬೫ ಎಸ್. ಟಿ. ಜನರು ಇದ್ದಾರೆ ಪೋಸ್ಟ್ ಗ್ರಾಜುಯೇಟ್ಸ್ ೩೧೦ ಜನರು ಇದ್ದಾರೆ. ಇದರಲ್ಲಿ ೪೨ ಜನ ಎಸ್.ಸಿ ಮತ್ತು ಎಸ್. ಟಿ. ಜನರು ಇದ್ದಾರೆ, ಮತ್ತೆ ಇದರ ಜೊತೆಗೆ ಎಸ್. ಎಸ್. ಎಲ್. ಸಿ. ಪಾಸು

ಮಾಡಿದವರು ೭೯೬೦ ಜನರು ಇದ್ದಾರೆ. ಇವರಲ್ಲಿ ಸುಮಾರು ೫೦೦ ಜನರು ಎಸ್. ಸಿ. ಮತ್ತು ೭೫ ಜನರು ಎಸ್.ಟಿ. ಇದ್ದಾರೆ. ಮತ್ತೆ ಡಿಪ್ಲೋಮಾ ಪಾಸು ಮಾಡಿರುವಂಥವರು ೨೨೦ ಇದರಲ್ಲಿ ಎಸ್.ಸಿ. ೫೦ ಜನರು ಇದ್ದಾರೆ ಮತ್ತು ೧೫ ಜನರು ಎಸ್.ಟಿ. ಇದ್ದಾರೆ ಮತ್ತು ಐ.ಟಿ.ಐ. ಪಾಸು ಮಾಡಿರುವಂಥವರು ಸುಮಾರು ೩೦೧ ಜನರು ಇದ್ದಾರೆ. ಇದರಲ್ಲಿ ೬೦ ಮಂದಿ ಎಸ್. ಸಿ. ಮತ್ತು ೨೩ ಜನರು ಎಸ್.ಟಿ. ಇದ್ದಾರೆ. ಇದರ ಜೊತೆಗೆ ಎಸ್.ಎಸ್.ಎಲ್.ಸಿ. ಫೇಲ್ ಆಗಿರುವಂಥವರು ಸುಮಾರು ೩೨೦೦ ಜನರು ಇದ್ದಾರೆ. ಇದರಲ್ಲಿ ಸುಮಾರು ೯೦೦ ಜನರು ಎಸ್. ಸಿ ಮತ್ತು ೧೬೦ ಜನರು ಎಸ್.ಟಿ. ಇದ್ದಾರೆ. ಇದರ ಪ್ರಕಾರ ನಾವು ಲೆಕ್ಕಾಚಾರ ಹಾಕಿ ನೋಡಿದರೆ ದಿನೇ ದಿನೇ ನಿರುದ್ಯೋಗ ಸಮಸ್ಯೆ ಎಂಬುದು ಬೃಹದಾಕಾರವಾಗಿ ಬೆಳೆಯುತ್ತಿದೆಯೇ ವಿನಹ ಕಡಿಮೆಯಾಗುತ್ತಿಲ್ಲ ಮತ್ತೆ ನಮ್ಮ ರಾಜ್ಯ ಸರ್ಕಾರದವರು ಈಗಾಗಲೇ ಕೇಂದ್ರ ಸರ್ಕಾರಕ್ಕೆ ಒಂದು ಪತ್ರವನ್ನು ಬರೆದಿದ್ದೇವೆ. ಅದು ಏನೆಂದರೆ ಇನ್ನು ಮುಂದೆ ಕೇಂದ್ರ ಸರ್ಕಾರದ ಉದ್ದಿಮೆಗಳಿಗೆ ಅಭ್ಯರ್ಥಿಗಳನ್ನು ಭರ್ತಿ ಮಾಡಿಕೊಳ್ಳುವಾಗ ಅವರನ್ನು ಕೂಡ ಈ ಎಂಪ್ಲಾಯಿಮೆಂಟ್ ಎಕ್ಸ್‌ಚೇಂಜ್‌ನಿಂದ ತೆಗೆದು ಕೊಳ್ಳಬೇಕು ಎಂದು. ಅವರೂ ಕೂಡ ಈ ಎಂಪ್ಲಾಯಿಮೆಂಟ್ ಎಕ್ಸ್‌ಚೇಂಜ್‌ನಿಂದ ತೆಗೆದುಕೊಂಡರೆ ಸುಮಾರು ೨೫ ಪರ್ಸೆಂಟ್ ನಿರುದ್ಯೋಗ ಸಮಸ್ಯೆ ಕಡಿಮೆಯಾಗುತ್ತದೆ. ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇದಕ್ಕೆ ಕೇಂದ್ರ ಸರ್ಕಾರದ ಕಾಯ್ದೆಯಲ್ಲಿ ಅನುಕೂಲ ಇಲ್ಲ. ಆದ್ದರಿಂದ ನಾವು ಇದಕ್ಕೆ ಸಂಬಂಧಪಟ್ಟಂತೆ ಒಂದು ಕಾಯ್ದೆಯನ್ನು ಸಹ ಮಾಡಬೇಕೆಂದು ನಾವು ಒತ್ತಾಯ ಸಹ ಮಾಡುತ್ತಿದ್ದೇವೆ. ಇದರಿಂದ ನಿರುದ್ಯೋಗ ಸಮಸ್ಯೆ ಕಡಿಮೆಯಾಗುತ್ತದೆ ಎನ್ನುವ ಭರವಸೆ ನನಗೆ ಇದೆ.

ಶ್ರೀ ಕೆ. ಎಚ್. ರಂಗನಾಥ್.—ಸ್ವಾಮಿ ಎಂಪ್ಲಾಯಿಮೆಂಟ್ ಎಕ್ಸ್‌ಚೇಂಜ್ ಮುಖಾಂತರ ತೆಗೆದುಕೊಳ್ಳುವುದು ಒಳ್ಳೆಯದು ಆದರೆ ಕಡ್ಡಾಯವಾಗಿ ಎಂಪ್ಲಾಯಿಮೆಂಟ್ ಎಕ್ಸ್‌ಚೇಂಜ್ ಮುಖಾಂತರವೇ ತೆಗೆದುಕೊಳ್ಳಬೇಕೆಂದು ಮಾಡಿದ್ದೀರಾ ?

ಶ್ರೀ ಎಂ. ರಘುಪತಿ.—ಸ್ವಾಮಿ ನಾವು ಕೇಂದ್ರ ಸರ್ಕಾರಕ್ಕೆ ಕಾಗದವನ್ನು ಬರೆದಿದ್ದೇವೆ. ಅವರು ಅವರ ಕಾಯ್ದೆಯಲ್ಲಿ ಅಮೆಂಡ್‌ಮೆಂಟ್ ಮಾಡಬೇಕಾಗುತ್ತದೆ. ನಾವು ನಮ್ಮ ರಾಜ್ಯದಿಂದ ಒಂದು ಸಲಹೆಯನ್ನು ಕೊಟ್ಟಿದ್ದೇವೆ. ಅವರು ಅದನ್ನು ಪರಿಶೀಲನೆ ಮಾಡಿ ನಮಗೆ ಪತ್ರ ಬರೆಯ ಬಹುದು. ಮಾನ್ಯ ಅಧ್ಯಕ್ಷರೇ ಇವತ್ತು ನಮ್ಮ ಕಾರ್ಮಿಕರಿಗೆ ಕಲ್ಪಿಸಿಕೊಟ್ಟಿರತಕ್ಕಂಥ ಇ.ಎಸ್.ಐ. ಬಗ್ಗೆ ಪ್ರಸ್ತಾಪ ಮಾಡುವುದಾದರೆ ಮಾನ್ಯ ಅಧ್ಯಕ್ಷರೇ, ಈ ಇ.ಎಸ್.ಐ ನಿಂದ ನಮ್ಮ ಕಾರ್ಮಿಕರು ಸಹಾಯವನ್ನು ಪಡೆಯುತ್ತಿದ್ದಾರೆ. ಅಂದರೆ ವೈದ್ಯಕೀಯ ಸೌಕರ್ಯ. ೧೯೮೦ನೇ ಇಸವಿಯಲ್ಲಿ ಸುಮಾರು ೩ ಲಕ್ಷ ೨೧ ಸಾವಿರಜನರು ಈ ಸೌಕರ್ಯವನ್ನು ಪಡೆಯುತ್ತಿದ್ದರು. ಮತ್ತೆ ೧೯೮೧ರಲ್ಲಿ ೩ ಲಕ್ಷ ೨೮ ಸಾವಿರ ಜನರು ಈ ಸೌಕರ್ಯವನ್ನು ಪಡೆಯುತ್ತಿದ್ದರು. ಮತ್ತೆ ೧೯೮೨ ರಲ್ಲಿ ೩ ಲಕ್ಷ ೬೦ ಸಾವಿರ ಜನರು ಈ ಸೌಕರ್ಯವನ್ನು ಪಡೆಯುತ್ತಿದ್ದಾರೆ. ಆದರೂ ಕೂಡ ಈ ಇ.ಎಸ್.ಐ ಆಸ್ಪತ್ರೆಗಳ ಸಂಖ್ಯೆ ಬಹಳ ಕಡಿಮೆ ಎನ್ನತಕ್ಕಂಥ ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ. ಇವತ್ತು ಈ ಆಸ್ಪತ್ರೆಗಳ ಕಟ್ಟಡಗಳು ಕೂಡ ಇಲ್ಲ. ಈ ಆಸ್ಪತ್ರೆಗಳ ಸಂಖ್ಯೆಯನ್ನು ಹೆಚ್ಚಿಸಬೇಕೆಂದು ಸರ್ಕಾರಕ್ಕೂ ಕೂಡ ಆಸೆ ಇದೆ. ಈಗ ನಮ್ಮ ಬೆಂಗಳೂರು ನಗರದಲ್ಲಿ ಈ ಆಸ್ಪತ್ರೆಗಳು ಇಂದಿರಾನಗರ ಮತ್ತು ರಾಜಾಜಿನಗರದಲ್ಲಿ ಇವೆ.

ಶ್ರೀ ಪಂಪಾಪತಿ.—ಸ್ವಾಮಿ, ಮಾನ್ಯ ಮಂತ್ರಿಗಳು ಬರೀ ಇಂದಿರಾನಗರ, ರಾಜಾಜಿನಗರ, ಚಾಮರಾಜನಗರ ಎಂದು ಹೇಳುತ್ತಿದ್ದಾರೆಯೇ ಹೊರತು, ಕರ್ನಾಟಕ ರಾಜ್ಯದಲ್ಲಿರುವ ಇತರೇ ಭಾಗಗಳಲ್ಲಿ ಇಎಸ್ಐ. ಹೋಲ್ಡರ್ಸ್ ಇಲ್ಲವೇ? ಅವರಿಗೆ ಈ ಆಸ್ಪತ್ರೆ ಸೌಕರ್ಯ ಮತ್ತಿತರ ಸೌಲಭ್ಯ ಗಳು ಬೇಡವೇ, ಅದನ್ನು ಆಲೋಚನೆ ಮಾಡಬೇಡವೇ?

ಶ್ರೀ ಕೆ.ಎಸ್. ನಾಗರತ್ನಮ್ಮ.—ಚಾಮರಾಜನಗರ ಎಂದು ಹೇಳಬೇಡಿ, ಚಾಮರಾಜಪೇಟೆ ಎಂದು ಹೇಳಿ.

ಶ್ರೀ ಎಂ. ರಘುಪತಿ.—ಇತರೇ ಭಾಗಗಳಲ್ಲೂ ಕೂಡ ಈ ಸೌಲಭ್ಯವನ್ನು ಕೊಡುವುದಕ್ಕೆ ಏರ್ಪಾಡು ಮಾಡಿದ್ದೇವೆ. ನಾನು ಈ ಹೆಸರು ಹೇಳಿದಕ್ಕೆ ಕಾರಣ ಏನು ಎಂದರೆ ಬೆಂಗಳೂರಿನಲ್ಲಿ ಹೆಚ್ಚು ಕಾರ್ಮಿಕರು ಇರುವುದರಿಂದ ಆ ಹೆಸರು ಹೇಳಿದೆ. ಮಾನ್ಯ ಸದಸ್ಯರ ಗಮನಕ್ಕೆ ತರ

ಬೇಕಾದರೆ ದಾಂಡೇಲಿಯಲ್ಲೂ ಕೊಡುವುದಕ್ಕೆ ಏರ್ಪಾಡು ಮಾಡಿದ್ದೇವೆ, ಬೆಳಗಾಂನಲ್ಲೂ ಕೂಡ ಕೊಡುವುದಕ್ಕೆ ಏರ್ಪಾಡು ಮಾಡಿದ್ದೇವೆ, ಹಾಗೆಯೇ ದಾವಣಗೆರೆಯಲ್ಲೂ ಹೆಚ್ಚಿನ ಕಾರ್ಮಿಕರ ಸಂಖ್ಯೆ ಇರುವುದು ತಮಗೂ ಗೊತ್ತಿದೆ, ನನಗೂ ಗೊತ್ತಿದೆ. ಆದುದರಿಂದ ಈ ಒಂದು ಸೌಕರ್ಯ ಕೊಡುವುದು ಕೇವಲ ಬೆಂಗಳೂರಿಗೇ ಸೀಮಿತವಾಗಿಲ್ಲ, ಬೆಂಗಳೂರಿನಲ್ಲಿ ಎಲ್ಲಕ್ಕಿಂತ ಹೆಚ್ಚು ಕಾರ್ಮಿಕರು ಇರುವುದರಿಂದ ಇಲ್ಲಿಗೆ ಹೆಚ್ಚಿನ ಒಂದು ಆಧ್ಯತೆ ಕೊಡಬೇಕಾಗುತ್ತದೆ, ಈ ಬಗ್ಗೆ ಒಂದು ಯೋಜನೆಯನ್ನು ಈ ವರ್ಷ ತಯಾರುಮಾಡಿ ಇಟ್ಟುಕೊಂಡಿದ್ದರೆ ಬರುವ ವರ್ಷ ಅದನ್ನು ಪೂರೈಸುವುದಕ್ಕೆ ಸಾಧ್ಯವಾಗುತ್ತದೆ. ಮಾನ್ಯ ಸದಸ್ಯರ ಗಮನಕ್ಕೆ ತರಬೇಕಾದರೆ ಬೆಂಗಳೂರಿನ ಕಿದ್ವಾಯಿ ಮೆಮೋರಿಯಲ್ ಹಾಸ್ಪಿಟಲ್‌ಗೆ ೩೬ ಹಾಸಿಗೆಗಳನ್ನು ಹೆಚ್ಚು ಮಾಡಬೇಕಾಗಿದೆ, ಹಾಗೆಯೇ ಕ್ಯಾನ್ಸರ್ ರೋಗದವರು ಹೆಚ್ಚು ಸಂಖ್ಯೆಯಲ್ಲಿ ಬರುತ್ತಾ ಇರುವುದರಿಂದ ಅಲ್ಲಿಯೂ ಹೆಚ್ಚು ಹಾಸಿಗೆಗಳನ್ನು ಕೊಡಬೇಕಾಗುತ್ತದೆ, ಹಾಗೆಯೇ ಟಿ.ಬಿ. ಸ್ಯಾನಿಟೋರಿಯಂನಲ್ಲೂ ಸಹ ಹಾಸಿಗೆಗಳನ್ನು ಹೆಚ್ಚಿಸಬೇಕಾಗುತ್ತದೆ. ಇಎಸ್ಐ. ಮುಖಾಂತರ ಈ ಕಾರ್ಮಿಕರಿಗೆ ಏನೇನು ಸೌಕರ್ಯಗಳನ್ನು ಕೊಡಬೇಕೆನ್ನುವ ಕಾರ್ಯಕ್ರಮವನ್ನು ನಾವು ಈಗಾಗಲೇ ತೆಗೆದುಕೊಂಡಿದ್ದೇವೆ. ಹಾಗಿದ್ದರು ಕೂಡ ಹಲವಾರು ದೂರುಗಳು ಬಂದಿವೆ, ಬಂದಿಲ್ಲ ಎಂದು ನಾನು ಹೇಳುವುದಿಲ್ಲ. ತಮಗೆ ಈ ಒಂದು ವಿಷಯವನ್ನು ತಿಳಿಸಬೇಕಾಗಿದೆ, ಇದು ದುರಾದೃಷ್ಟವೋ, ದುರ್ದೈವವೋ ಈ ಆಸ್ಪತ್ರೆಗೆ ಬರುವಂಥಾ ಡಾಕ್ಟರ್ಸ್ ಏನು ಇದ್ದಾರೆ ಅವರು ಸಸ್ಪೆಂಡ್ ಆದಮೇಲೆ ಇಲ್ಲಿಗೆ ಬರುತ್ತಾರೆ, ಇಲ್ಲವೇ ಇಲ್ಲಿಗೆ ಬಂದಮೇಲೆ ಅವರು ಸಸ್ಪೆಂಡ್ ಆಗುತ್ತಾರೆ. ಹೀಗೆ ೨ ತರಹ ಇದೆ, ಇದು ದುರ್ದೈವ, ಕಾರ್ಮಿಕರ ಒಂದು ಶಾಪದಿಂದ ಹೀಗೆ ಆಗುತ್ತದೆಯೋ ಗೊತ್ತಿಲ್ಲ. ಅವರಿಗೆ ನಾವು ಒಂದು ಪತ್ರ ಬರೆದಿದ್ದೇವೆ. ಏನೆಂದರೆ ಇಲ್ಲಿಗೆ ಒಳ್ಳೆಯ ತಜ್ಞರನ್ನು ಹಾಕಿ ಏತಕ್ಕೆಂದರೆ ಕಾರ್ಮಿಕರ ಪ್ರಾಣ ಎನ್ನುವುದು ಅಷ್ಟೇ ಮುಖ್ಯವಾದುದು, ಆದುದರಿಂದ ಸಸ್ಪೆಂಡ್ ಆಗದೇ ಇರುವವರನ್ನು ಹಾಕಿ ಎಂದು ಬರೆದಿದ್ದೇವೆ.

ಶ್ರೀ ಎಸ್. ಸೂರ್ಯನಾರಾಯಣರಾವ್.—ತಾವು ಎಲ್ಲಾ ಡಾಕ್ಟರುಗಳ ಬಗ್ಗೆ ಸಾರಾಸಗಟಾಗಿ ಹೇಳುವುದು ಸರಿಯಲ್ಲ. ಅದರಲ್ಲಿ ಕೆಲವರು ಇರಬಹುದು.

ಶ್ರೀ ಎಂ. ರಘುಪತಿ.—ನಾನು ಸಾರಾಸಗಟಾಗಿ ಹೇಳುತ್ತಾ ಇಲ್ಲ. ಅದರಲ್ಲಿ ಕೆಲವರು ಇದ್ದಾರೆ. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಅವರು ಒಳ್ಳೆಯ ಡಾಕ್ಟರ್ ಅನ್ನು ಈ ಇಎಸ್ಐ. ಆಸ್ಪತ್ರೆಗೆ ಒದಗಿಸಲಿ ಎನ್ನುವ ದೃಷ್ಟಿಯಿಂದ ಹೇಳುತ್ತಿದ್ದೇನೆ.

ಶ್ರೀ ಎಂ.ಎಸ್. ಕೃಷ್ಣನ್.—ಅಧ್ಯಕ್ಷರೇ, ಕರ್ನಾಟಕದ ಇಎಸ್ಐ. ಆಸ್ಪತ್ರೆಯ ಡಾಕ್ಟರ್ಸ್‌ಗೆ ಒಂದು ಸಪರೇಟ್ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ಮಾಡಬೇಕು ಎಂದು ಸಜೆಷನ್ ಕೊಟ್ಟಿದ್ದಾರೆ ಇದರ ಬಗ್ಗೆ ಸರ್ಕಾರ ಏನು ಮಾಡುತ್ತಿದೆ ಎನ್ನುವುದನ್ನು ಹೇಳುತ್ತೀರಾ?

ಶ್ರೀ ಧನಂಜಯಕುಮಾರ್.—ಅಧ್ಯಕ್ಷರೇ ಮಾನ್ಯ ಸಚಿವರು ಅವರು ಭಾಷಣ ಮುಗಿಸಿದ ಮೇಲೆ ಏನು ಬೇಕಾದರೂ ಕ್ಲಾರಿಫಿಕೇಷನ್ ಕೇಳಲಿ? ಹೀಗೆ ಮಧ್ಯೆ ಮಧ್ಯೆ ಮಾನ್ಯ ಸಚಿವರು ಎದ್ದು ನಿಂತುಕೊಂಡು ಕಾಮೆಂಟ್ ಮಾಡಬಹುದೇ? ಅಥವಾ ಅವರು ಕಾಮೆಂಟ್ ಮಾಡುವುದಕ್ಕೆ ಬಂದಿದ್ದಾರೆಯೋ?

ಶ್ರೀ ಎಂ.ಎಸ್. ಕೃಷ್ಣನ್.—ನಾವು ಕಾಮೆಂಟ್ ಮಾಡುವುದಕ್ಕೆ ಇಲ್ಲಿಗೆ ಬಂದಿಲ್ಲ. ಬಹುಶಃ ಅವರೇನಾದರು ಇಲ್ಲಿಗೆ ಕಾಮೆಂಟ್ ಮಾಡುವುದಕ್ಕೆ ಬಂದಿರಬಹುದು.

ಶ್ರೀ ಪಂಪಾಪತಿ.—ಮಾನ್ಯ ಸದಸ್ಯರು ಕಾಮೆಂಟ್ ಮಾಡಬೇಡಿ ಎಂದು ಹೇಳುವುದಕ್ಕೆ ಯಾರಿಗೂ ಹಕ್ಕಿಲ್ಲ. ಯಾರು ಬೇಕಾದರೂ ಮಾತನಾಡಬಹುದು.

(ಗೊಂದಲ)

ಶ್ರೀ ಎಂ.ಎಸ್. ಕೃಷ್ಣನ್.—This is objectionable. The Hon'ble Member must know as to how to speak.

ಡಾ. ವಿ.ಎಸ್. ಆಚಾರ್.—ಮಾನ್ಯ ಸದಸ್ಯರಾದ ಶ್ರೀ ಧನಂಜಯಕುಮಾರ್‌ರವರು ಯಾವ ಸದಸ್ಯರನ್ನೂ ಕುರಿತು ಮನನೋಯಿಸಲು ಹೇಳಲಿಲ್ಲ. ಕೊನೆಗೆ ಕ್ಲಾರಿಫಿಕೇಷನ್ ಕೇಳಲು ಅವಕಾಶ ಇದೆ ಎಂದು ಅಭಿಪ್ರಾಯಪಟ್ಟು ಹೇಳಿದ್ದಾರೆ. ಈ ಬಗ್ಗೆ ಯಾರೂ ಸಹ ತಪ್ಪು ತಿಳಿಯಬಾರದು.

ಶ್ರೀ ಧನಂಜಯಕುಮಾರ್.—ಇದೇ ರೀತಿ ಮುಂದುವರೆದರೆ ಸಂಜೆ ೫ ಗಂಟೆಯವರೆಗೆ ಇದೆ ವಿಷಯದ ಮೇಲೆ ಚರ್ಚೆಯಾಗುತ್ತದೆ, ಅದ್ದರಿಂದ ಹೇಳಿದ್ದು.

MR. SPEAKER.—I am here to regulate the business in the House. I know as to how and when the Member is to be pulled up. You can make suggestions: But please don t try to intence.

ಪಂಪಾಪತಿ.—ಸ್ವಾಮಿ, ಕನ್ನಡದಲ್ಲಿ ಹೇಳಿ.

ಡಾ|| ವಿ.ಎಸ್. ಆಚಾರ್.—ಸ್ವಾಮಿ, ಮಾನ್ಯ ಸದಸ್ಯರೂ ಸಹ ಸುಮಾರು ೨೭ ಕಾರ್ಮಿಕ ಕ್ಷೇತ್ರಗಳಲ್ಲಿ ಅಧ್ಯಕ್ಷರಾಗಿದ್ದಾರೆ. ಆದುದರಿಂದ ಅವರಿಗೂ ಸಾಕಷ್ಟು ಕಾರ್ಮಿಕರ ವಿಚಾರದಲ್ಲಿ ತಿಳುವಳಿಕೆ ಇದೆ. ಇದನ್ನು ಸದಸ್ಯರು ಲಘುವಾಗಿ ತಿಳಿದುಕೊಳ್ಳಬಾರದು.

ಶ್ರೀ ಎಸ್. ಸೂರ್ಯನಾರಾಯಣರಾವ್.—ನಾವು ಇಲ್ಲಿ ಕಾಮೆಂಟರಿ ಮಾಡುವುದಕ್ಕೆ ಬರಲಿಲ್ಲ, ಮಾನ್ಯ ಮಂತ್ರಿಗಳನ್ನು ಕ್ಲಾರಿಫಿಕೇಷನ್ ಕೇಳುತ್ತಾ ಇದ್ದೇವೆ ಅಷ್ಟೆ.

ಅಧ್ಯಕ್ಷರು.—ಸಂಸದೀಯ ವ್ಯವಸ್ಥೆಗಳಲ್ಲಿ ಇಂತಹ ಸಂಪ್ರದಾಯಗಳು ಸಾಮಾನ್ಯವಾಗಿ ಇದ್ದೇ ಇರುತ್ತವೆ. ಈಗ ಮಾನ್ಯ ಮಂತ್ರಿಗಳು ತಮ್ಮ ಉತ್ತರವನ್ನು ಮುಂದುವರೆಸಬಹುದು.

ಶ್ರೀ ಎಂ. ರಘುಪತಿ.—ಶ್ರೀಮಾನ್ ಎಂ.ಎಸ್. ಕೃಷ್ಣನ್‌ರವರು ಈ ಇಎಸ್ಐ. ಆಸ್ಪತ್ರೆಯ ಡಾಕ್ಟರ್ಸ್ ಬಗ್ಗೆ ಸೆಪರೇಟ್ ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ಮಾಡುವ ಯೋಚನೆ ಇದೆಯೋ ಎಂದು ಕೇಳಿದರು, ಹೌದು ಅದನ್ನು ಮಾಡಬೇಕು, ಅದು ಸರ್ಕಾರದ ಗಮನದಲ್ಲಿ ಇದೆ. ಆ ಕೆಲಸ ಬಹುತೇಕವಾಗಿ ಆಗಲೇ ಬೇಕು ಎನ್ನುವ ದೃಷ್ಟಿಯಿಂದ ನಾವು ಆ ಬಗ್ಗೆ ಯೋಚನೆ ಮಾಡಿದ್ದೇವೆ ಹಾಗೆ ಮಾಡಿದರೆ ಉತ್ತಮವಾಗುತ್ತದೆಂದು ಸರ್ಕಾರಕ್ಕೆ ಮನವರಿಕೆಯಾಗಿದೆ. ಏತಕ್ಕೆಂದರೆ ದಿನೇ ದಿನೇ ಕಾರ್ಮಿಕರ ಕ್ಷೇತ್ರ ಬೆಳೆಯುತ್ತಾ ಇದೆ, ಆದುದರಿಂದ ಅಷ್ಟೇ ಸಂಖ್ಯೆಯಲ್ಲಿ ವೈದ್ಯಕೀಯ ಸೌಲಭ್ಯಗಳೂ ಸಹ ಬೇಕಾಗುತ್ತದೆ. ಈ ಬೇಡಿಕೆ ಇರುವುದರಿಂದ ಇದಕ್ಕೆ ಒಂದು ಪ್ರತ್ಯೇಕವಾಗಿಯೇ ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ರೂಲ್ಸನ್ನು ಮಾಡಬೇಕೆನ್ನುವ ನಿರ್ಣಯ ತೆಗೆದುಕೊಂಡಿದ್ದೇವೆ. ಈ ವಿಚಾರ ಸರ್ಕಾರದ ಮಟ್ಟದಲ್ಲಿ ಇದೆ. ಈ ನಿರ್ಣಯ ಈಡೇರಬಹುದೆಂದು ಈ ಸಂದರ್ಭದಲ್ಲಿ ನಾನು ಆಶಾಭಾವನೆಯನ್ನು ಇಟ್ಟುಕೊಂಡಿದ್ದೇನೆ.

ಮಾನ್ಯ ಅಧ್ಯಕ್ಷರೇ, ಈ ಕಾರ್ಮಿಕರ ನೀತಿ ಬಗ್ಗೆ ಬಹಳ ಜನ ಮಾತನಾಡಿದ್ದಾರೆ. ಇದರ ಬಗ್ಗೆ ಮಾನ್ಯ ಎಂ.ಎಸ್. ಕೃಷ್ಣನ್‌ರವರು ಮಾತನಾಡುತ್ತಾ ಕೆಲವು ಸಲಹೆಗಳನ್ನು ಕೊಟ್ಟರು. ಒಂದೊಂದಕ್ಕೂ ಕೂಡ ಉತ್ತರ ಹೇಳಬೇಕಾದರೆ ಸ್ವಲ್ಪ ಕಾಲ ಹಿಡಿಯುತ್ತದೆ. ಅದರಲ್ಲಿ ಪ್ರಮುಖವಾದ ವಿಚಾರವನ್ನು ಮಾತ್ರ ನಾನು ಪ್ರಸ್ತಾಪ ಮಾಡುತ್ತೇನೆ, ಅವರು ''ಮೇಡೇ'' ಈ ಮೇ ದಿನಾಚರಣೆಗೆ ರಜಾವನ್ನು ಘೋಷಣೆ ಮಾಡುವ ವಿಚಾರದಲ್ಲಿ ಹೇಳಿದರು. ನಾವು ಈಗಾಗಲೇ ಕೇಂದ್ರ ಸರ್ಕಾರಕ್ಕೆ ಬರೆದಿದ್ದೇವೆ. ಈ ವಿಚಾರದಲ್ಲಿ ನಾವು ಜನವರಿ ೫ನೇ ತಾರೀಖು ನಿರ್ಣಯ ತೆಗೆದುಕೊಂಡಿದ್ದೇವೆ. ಮೇ ದಿನಾಚರಣೆ ದಿವಸ ರಜಾವನ್ನು ಆಗ ಘೋಷಣೆ ಮಾಡಬೇಕೆಂದು ಅದೇ ದಿನ ಬರೆದಿದ್ದೇವೆ, ಕಾರಣ ಅವೊತ್ತಿನ ದಿವಸ ಈ ಕಾರ್ಮಿಕರನ್ನು ಗುರುತಿಸಬಹುದು ಅಲ್ಲದೆ ಈ ಕಾರ್ಮಿಕ ದಿನಾಚರಣೆಗೆ ನಾವು ಮನ್ನಣೆ ಕೊಟ್ಟಂತಾಗುತ್ತದೆ ಅಲ್ಲದೆ ಕಾರ್ಮಿಕರ ನೀತಿಗನುಗುಣವಾಗಿ ನಾವು ನಡೆದಂತಾಗುತ್ತದೆ, ಆದುದರಿಂದ ಅವೊತ್ತಿನ ದಿವಸ ರಜಾವನ್ನು ಘೋಷಣೆ ಮಾಡಬೇಕು ಎಂದು ನಾವು ಕೇಂದ್ರಕ್ಕೆ ಬರೆದಿದ್ದೇವೆ. ನಾವು ಈ ವಿಚಾರದಲ್ಲಿ ಕೇಂದ್ರ ಸರ್ಕಾರಕ್ಕೆ ಬರೆದ ಮೇಲೆ ಇದರ ಬಗ್ಗೆ ಅಮೆಂಡ್‌ಮೆಂಟ್ ಮಾಡಬೇಕಾಗಿದೆ ಇದಕ್ಕೆ ಕೆಲವು ವಿವರಗಳು ಬೇಕು ಎಂದು ಪತ್ರ ಬರೆದಿದ್ದರು. ಮತ್ತೆ ಅವರಿಗೆ ಬೇಕಾದ ವಿವರಗಳನ್ನು ಪೂರೈಸಿ ಕಳುಹಿಸಿದ್ದೇವೆ. ಇನ್ನು ಇಲ್ಲಿಂದ ನಮಗೆ ಉತ್ತರ ಬರಬೇಕು ಅಷ್ಟೆ. ಆ ದಿನ ಕಾರ್ಮಿಕರ ಹತ್ತಿರ ಸಂಬಳವನ್ನು ಹಿಡಿದಿದ್ದಾರೆ ಎಂದು ಕೃಷ್ಣನ್‌ರವರು ಹೇಳಿದ್ದಾರೆ. ಅವರಿಗೆ ಆ ದಿನದ ಪೂರ್ತಿ ಸಂಬಳವನ್ನು ಕೊಡಿಸುವುದಕ್ಕೆ ಸರ್ವ ಪ್ರಯತ್ನವನ್ನೂ ಸಹ ಮಾಡಿದ್ದೇನೆ, ಕೊಡಿಸುವ ಹಾಗೆ ಮುಂದೂ ಮಾಡುತ್ತೇನೆ. ಒಂದುವೇಳೆ ಯಾರಿಗಾದರೂ ಸಂಬಳ ಆ ದಿನದ್ದು ನಿಂತು ಹೋಗಿದ್ದರೆ ನಮ್ಮ ಗಮನಕ್ಕೆ ತಾವು ತನ್ನಿ ನಾನು ಅವರಿಗೆ ಸಂಬಳವನ್ನು ಕೊಡಿಸುವ ಪ್ರಯತ್ನ ಮಾಡುತ್ತೇನೆ, ನಾನು ಈ ಮಾತನ್ನು ಏತಕ್ಕೆ

ಹೇಳುತ್ತಿದ್ದೇನೆಂದರೆ ಈ 'ಮೇ' ದಿನಾಚರಣೆ ಏನು ಇದೆ ಇದು ಒಂದು ಪವಿತ್ರವಾದ ದಿನ. ಕಾರ್ಮಿಕರ ಮತ್ತು ದುಡಿಯುವವರ ದಿನ, ಇಡೀ ವಿಶ್ವದಲ್ಲೇ ಇದಕ್ಕೆ ರಜಾದಿನವನ್ನಾಗಿ ಘೋಷಣೆ ಮಾಡಿ ಈ ದಿನಾಚರಣೆ ಮಾಡುತ್ತಿದ್ದಾರೆ. ಇದು ಕಾರ್ಮಿಕರ ಸರ್ಕಾರ ಅಲ್ಲದೆ ಇದು ಕಾರ್ಮಿಕ ನೀತಿಯೂ ಹೌದು. ಆದುದರಿಂದ ಈ ಕಾರ್ಮಿಕರ ಬಗ್ಗೆ ನಾವು ಹೆಚ್ಚಿನ ನೆರವು ಕೊಡಬೇಕಾಗುತ್ತದೆ, ಈ ಸರ್ಕಾರ ಈ ಒಂದು ದೃಷ್ಟಿಯನ್ನಿಟ್ಟುಕೊಂಡು 'ಮೇ' ದಿನಾಚರಣೆಯನ್ನು ರಜಾ ದಿನವನ್ನಾಗಿ ಮಾಡಬೇಕೆಂದು ನಿರ್ಣಯ ಮಾಡಿದೆ. ಅವರಿಂದ ಇದಕ್ಕೆ ಪರವಾನಗಿ ಬರುತ್ತದೆ ಎನ್ನುವ ನಂಬಿಕೆ ನನಗೆ ಇದೆ.

ಶ್ರೀ ಎಂ.ಎಸ್. ಕೃಷ್ಣನ್.—ಮಾನ್ಯ ಮಂತ್ರಿಗಳು ಕೇಂದ್ರದಿಂದ ಬರಬೇಕು, ಕೇಂದ್ರ ಸರ್ಕಾರದವರು ಅಬ್ಜೆಕ್ಷನ್ ಮಾಡಿದ್ದಾರೆ ಎಂದು ಹೇಳಿದರು. ಅವರು ಏನು ಅಬ್ಜಕ್ಷನ್ ಮಾಡಿದ್ದಾರೆ ಎನ್ನುವುದನ್ನು ಹೇಳುತ್ತೀರಾ?

ಅಧ್ಯಕ್ಷರು.—ಅವರು ಬರೆದ ಕಾಗದಕ್ಕೆ ಉತ್ತರವೇ ಬಂದಿಲ್ಲ, ಅದರಲ್ಲಿ ಏನು ಅಬ್ಜಕ್ಷನ್ ಇದೆ ಎನ್ನುವುದು ಹೇಗೆ ಗೊತ್ತಾಗುತ್ತದೆ.

ಶ್ರೀ ಎಂ. ರಘುಪತಿ.—ಸನ್ಮಾನ್ಯ ಸಭಾಧ್ಯಕ್ಷರೇ, ಶ್ರೀಮಾನ್ ಎಂ.ಎಸ್. ಕೃಷ್ಣನ್‌ರವರು ಮಾತನಾಡುವಾಗ ಹೇಳಿದರು ಏನೆಂದರೆ ಈ ಸರ್ಕಾರ ಮೊದ ಮೊದಲು ಸಭೆ ಸೇರಿದಾಗ ಇದರ ಬಗ್ಗೆ ಇರತಕ್ಕಂಥ ವಿಚಾರದ ಬಗ್ಗೆ ನಮ್ಮನ್ನೆಲ್ಲಾ ಕರೆದು ಮಾತನಾಡುತ್ತಿದ್ದರು, ಆಮೇಲೆ ಏನೂ ಮಾತನಾಡಲಿಲ್ಲ ಎಂದು. ಅವರಿಗೆ ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಈ ತಿಂಗಳು ೨೨ನೇ ತಾರೀಖು ಒಂದು ಸಭೆ ಕರೆಯುತ್ತೇನೆ. ಆ ಸಭೆಗೆ ಕಾರ್ಮಿಕರನ್ನೂ, ಕಾರ್ಮಿಕ ಪ್ರತಿನಿಧಿಗಳನ್ನು ಮತ್ತು ಮುಖಂಡರನ್ನೂ ಕರೆಯುತ್ತೇನೆ. ಈವೊತ್ತಿನ ದಿವಸ ಎಲ್ಲಾ ಕಾರ್ಮಿಕರ ವಿಷಯದಲ್ಲೂ ಚರ್ಚೆ ಮಾಡಿದ್ದೇನೆ, ಹಾಗೂ ಸರ್ಕಾರ ಕಾರ್ಮಿಕರ ಜೊತೆಯಲ್ಲಿ ಸಂಪರ್ಕ ಇಟ್ಟುಕೊಳ್ಳಬೇಕು ಎನ್ನುವ ಉದ್ದೇಶವೂ ಇದೆ ಮತ್ತು ಕಾರ್ಮಿಕರ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಸುಮಧುರ ವಾತಾವರಣವನ್ನು ಸೃಷ್ಟಿ ಮಾಡಿದರೆ ಅದರಿಂದ ಅವರ ಸಮಸ್ಯೆಗಳು ನಿವಾರಣೆಯಾಗಿ ಇದರಿಂದ ಒಳ್ಳೆಯದಾಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ಆ ಉದ್ದೇಶದಿಂದ ಈ ಸಭೆ ಕರೆದಿದ್ದೇನೆ. ಈ ಒಂದು ಸಭೆಯಲ್ಲಿ ತಾವು ಏನೇನು ಇದರ ಬಗ್ಗೆ ಸಲಹೆಗಳನ್ನು ಕೊಡಬೇಕೆಂದಿದ್ದೀರೋ ಅವನ್ನು ಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ತಮ್ಮನ್ನು ಕೇಳಿಕೊಳ್ಳುತ್ತೇನೆ. ಮಾನ್ಯ ಅಧ್ಯಕ್ಷರೇ, ಮಾನ್ಯ ಎಂ.ಎಸ್. ಕೃಷ್ಣನ್‌ರವರು ಮತ್ತು ಮಾನ್ಯ ಎಸ್. ಸೂರ್ಯನಾರಾಯಣ ಅವರು ಮಾತನಾಡುತ್ತಾ ಹೇಳಿದರು ಈ ಬಗ್ಗೆ ಕೆಲವು ವರ್ಷಗಳ ಹಿಂದೆ ಬೆಂಗಳೂರಿನಲ್ಲಿ ಕೇಂದ್ರ ಉದ್ದಿಮೆಗಳ ನೌಕರರು ೧೦೦ ದಿವಸದ ಒಂದು ಐತಿಹಾಸಿಕ ಚಳುವಳಿ ಏನು ನಡೆಯಿತು. ಆ ಸಂದರ್ಭದಲ್ಲಿ ಅವರು ಏನು ಮುಷ್ಕರ ನಡೆಸಿದರು ಅದಕ್ಕೆ ಸಂಬಂಧಪಟ್ಟಂತೆ ಏನೇನು ಕೇಸುಗಳು ಇವೆ, ಮತ್ತು ಯಾರ್ಯಾರು ಆ ಸಂದರ್ಭದಲ್ಲಿ ಸಸ್ಪೆಂಡ್ ಆಗಿದ್ದರು, ಡಿಸ್ಮಿಸ್ ಆಗಿದ್ದರು ಅವೆಲ್ಲಾ ಹಾಗೆಯೇ ಇವೆ ಇನ್ನೂ ಕೂಡ ಇತ್ಯರ್ಥವಾಗಿಲ್ಲ ಎನ್ನುವ ಮಾತನ್ನು ಹೇಳಿದರು.

ಮತ್ತೆ ಈ ಸಂದರ್ಭದಲ್ಲಿ ಹೇಳಬೇಕಾಗಿದ್ದರೆ ನಾವು ಸುಮಾರು ೨೯-೯-೮೨ರಲ್ಲಿ ಒಂದು ಪತ್ರವನ್ನು ಬರೆದಿದ್ದೇವೆ. ಮತ್ತೆ ಕೂಡ ಒಂದು ಪತ್ರವನ್ನು ಬರೆದಿದ್ದೇವೆ. ಯಾವಾಯಾವ ಕೇಸುಗಳು ಇವೆ ಅವೆಲ್ಲವನ್ನೂ ವಾಪಾಸ್ಸು ಪಡೆಯಬೇಕೆಂದು ಕೇಂದ್ರಸರ್ಕಾರಕ್ಕೆ ಬರೆದಿದ್ದೇವೆ. ಬರೆಯುವುದು ಒಂದೇ ಅಲ್ಲ, ಆ ಕೇಸುಗಳೆಲ್ಲವನ್ನೂ ವಾಪಾಸ್ಸು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಕೂಡ ಮಾಡುತ್ತಿದ್ದೇವೆ. ರಾಜ್ಯಮಟ್ಟದಲ್ಲಿ ಯಾವ ಕೇಸುಗಳೂ ಇಲ್ಲ. ಕೆಲವು ಮಾತ್ರ ಇರಬಹುದು. ಅದರ ಬಗ್ಗೆ ಕಾನೂನಿನ ರೀತಿಯಲ್ಲಿ ಪರಿಶೀಲನೆ ಮಾಡಿ, ಏನೇನು ಕೇಸುಗಳು ಇವೆ ಅವುಗಳನ್ನು ವಾಪಾಸ್ಸು ಪಡೆಯುವುದಕ್ಕೆ ಪ್ರಯತ್ನ ಮಾಡುತ್ತೇವೆ ಎಂದು ಈ ಸಂದರ್ಭದಲ್ಲಿ ನಾನು ಹೇಳ ಬಯಸುತ್ತೇನೆ.

ಇನ್ನು ಕನಿಷ್ಟ ವೇತನದ ಬಗ್ಗೆ ಶ್ರೀಮಾನ್ ಕೃಷ್ಣನ್‌ರವರು, ಸೂರ್ಯನಾರಾಯಣರವರೂ ಮತ್ತು ಎಲ್ಲಾ ಸದಸ್ಯರೂ ಕೂಡ ಮಾತನಾಡಿದ್ದಾರೆ. ವಿರೋಧ ಪಕ್ಷದ ನಾಯಕರಾದ ಶ್ರೀ ವೀರಪ್ಪ ಮೊಯಿಲಿಯವರೂ ಕೂಡ ಇದರ ಬಗ್ಗೆ ಮಾತನಾಡಿದ್ದಾರೆ. ಮಾನ್ಯ ಅಧ್ಯಕ್ಷರೇ, ತಮಗೆ ಗೊತ್ತಿರುವಂತೆ ಹಿಂದಿನ ಸರ್ಕಾರದವರು ಒಂದು ಆಜ್ಞೆಯನ್ನು ಹೊರಡಿಸಿದ್ದರು. ಈ ಆಜ್ಞೆಯನ್ನು ಹೊರಡಿಸಿದ ಮೇಲೆ ಇದು ಹೈಕೋರ್ಟಿಗೆ ಹೋದಾಗ ಒಂದು ತೀರ್ಪನ್ನು ಅವರು ಕೊಟ್ಟರು. ಇದು ಇತ್ಯರ್ಥವಾಗುವವರೆಗೆ ಶೇಕಡಾ ೫೦ ರಷ್ಟು ಸಂಬಳ ಕೊಡಬೇಕೆಂದು ಹೇಳಿ

ದ್ದಾರೆ. ಈ ತೀರ್ಪನ್ನು ಕೊಟ್ಟಮೇಲೆ ಅದು ಈಗ ಡಿವಿಜನ್ ಬೆಂಚಿನ ಎದುರುಗಡೆ ಇದೆ ಇದರ ಬಗ್ಗೆ ನಾವು ಒಂದು ಸಲಹಾ ಮಂಡಳಿಯನ್ನೂ ಸಹ ರಚನೆ ಮಾಡಿದ್ದೇವೆ. ಅದರ ಮೂಲಕ ಯಾವ ಕಾರ್ಮಿಕರೇ ಇರಲೀ, ಬೀಡಿ ಕಾರ್ಮಿಕರೇ ಇರಲಿ, ಗೇರು ಬೀಜ ಕಾರ್ಮಿಕರೆ ಇರಲಿ, ಕೈಮಗ್ಗ ಮತ್ತು ಪವರ್‌ಲೂಮ್ ಕೆಲಸಗಾರರು ಯಾರು ಇರುತ್ತಾರೆ ಅವರೆಲ್ಲರನ್ನೂ ಇದರೊಳಗೆ ಅಳವಡಿಸು ತ್ತಿದ್ದೇವೆ. ಈ ಸಮಿತಿಯು ಸುಮಾರು ಎರಡು ತಿಂಗಳ ಒಳಗಡೆ ತನ್ನ ವರದಿಯನ್ನು ಕೊಡಬೇಕೆಂದು ಸರ್ಕಾರ ಈಗಾಗಲೇ ನಿರ್ಣಯವನ್ನು ತೆಗೆದುಕೊಂಡಿದೆ. ಅದರ ಪ್ರಕಾರ ನಾವು ಏನು ತೀರ್ಮಾನ ತೆಗೆದು ಕೊಳ್ಳಬೇಕೋ ಅದು ಮಾಡುವವರಿದ್ದೇವೆ. ಶ್ರೀಮಾನ್ ಮೈಖೆಲ್ ಫರ್ನಾಂಡೀಸ್ ಅವರು ಒಂದು ವಿಷಯವನ್ನು ಪ್ರಸ್ತಾಪ ಮಾಡಿದರು. ಅದೇನೆಂದರೆ ಹೋಟೇಲ್‌ಗಳಲ್ಲಿ ಹಿಂದೆ ಊಟದ ವ್ಯವಸ್ಥೆ ಇಲ್ಲದ ಕಾರ್ಮಿಕರಿಂದ ತಿಂಗಳಿಗೆ ೪೦ ರೂಪಾಯಿಗಳನ್ನು ಹಿಡಿಯುತ್ತಿದ್ದರು. ಈಗ ೯೦ ರೂಪಾಯಿಗಳನ್ನು ಹಿಡಿಯುತ್ತಿದ್ದಾರೆ ಎಂದು ಅವರು ಹೇಳಿದ್ದಾರೆ. ನಾನು ತಕ್ಷಣ ಹೋಟೇಲ್ ಮಾಲೀಕರನ್ನು ಕರೆದು ಈದರ ಬಗ್ಗೆ ಮಾತನಾಡುತ್ತೇನೆ. ಅಷ್ಟೇ ಅಲ್ಲ ಕಾರ್ಮಿಕ ಇಲಾಖೆ ಕೂಡ ಇದರ ಬಗ್ಗೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಏರ್ಪಾಡು ಮಾಡುತ್ತೇನೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಕಾರ್ಮಿಕರಿಗೆ ಸಂಬಂಧಪಟ್ಟ ಹಾಗೆ ಹಲವಾರು ವಾದ ವಿವಾದಗಳು ಇದ್ದವು. ಇತ್ತಿನ ದಿವಸ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಯಾವ ತರಹ ನಮ್ಮ ನೀತಿಯಿದೆಯೆಂದು ಹೇಳಬೇಕಾಗಿದೆ. ಶ್ರೀಮಾನ್ ಮೊಯಿಲಿ ಯವರು ಒಂದು ಮಾತನ್ನು ಹೇಳಿದರು, ಮುಖ್ಯಮಂತ್ರಿಗಳು ಮಾತನಾಡುವಾಗ ಅವರು ಬಳಸಿದ ಅಣಿಮುತ್ತುಗಳು ಮಾತನಾಡುವಾಗ ಕೆಳಗಡೆ ಬಿದ್ದುಹೋದವು ಎಂದು ಹೇಳಿದರು. ಅವರ ಹಾಗೆ ಸಾಹಿತ್ಯದ ಭಾಷೆಯಲ್ಲಿ ನನಗೆ ಹೇಳುವುದಕ್ಕೆ ಬರುವುದಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಶ್ರೀ ಮೊಯಿಲಿಯವರು ಕವಿಗಳು.

ಶ್ರೀ ಎಂ. ರಘುಪತಿ.—ಹೌದು ಪುಸ್ತಕಗಳನ್ನು ಬರೆದಿದ್ದಾರೆ. ಸಿನೀಮಾ ಕೂಡ ತೆಗೆಯು ತ್ತಿದ್ದಾರೆ.

ಶ್ರೀ ಎಂ. ವೀರಪ್ಪಮೊಯಿಲಿ.—ನಾನು ಸಿನೆಮಾ ತೆಗೆಯುತ್ತಿಲ್ಲ.

ಶ್ರೀ ಎಂ. ರಘುಪತಿ.—ನೀವು ತೆಗೆಯುತ್ತಿಲ್ಲ. ನಿಮ್ಮ ಪುಸ್ತಕವನ್ನು ಆಧರಿಸಿ ಬೇರೆಯವರು ತೆಗೆಯುತ್ತಿದ್ದಾರೆ ಕಾರ್ಮಿಕರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಅಪಾರವಾದ ಅನುಕಂಪ ವನ್ನು ಇಟ್ಟುಕೊಂಡಿದ್ದಾರೆ. ಅವರ ಬಗ್ಗೆ ಇರುವ ವಾದ ವಿವಾದಗಳನ್ನು ಪರಿಹಾರ ಮಾಡ ಬೇಕೆಂದು ಅವರಿಗೆ ಆಸಕ್ತಿ ಇದೆ. ಈ ಕೆಲವು ಅಂಕಿ ಅಂಶಗಳನ್ನು ತಮ್ಮ ಎದುರಿಗೆ ಇಡುತ್ತೇನೆ. ೧೯೮೧–೮೨ರಲ್ಲಿ ಎಷ್ಟು ಮುಷ್ಕರಗಳು ನಡೆದವು ಎಂದರೆ ೫೩, ೧೯೮೨–೮೩ರಲ್ಲಿ ೪೪. ೧೯೮೧–೮೨ರಲ್ಲಿ ನಡೆದ ಲಾಕ್‌ಔಟ್‌ಗಳ ಸಂಖ್ಯೆ ೯೦, ೧೯೮೨–೮೦ರಲ್ಲಿ ೬. ಇವತ್ತು ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ನಡೆದಿರುವ ಮುಷ್ಕರಗಳ ಸಂಖ್ಯೆ ೧೫ ಮತ್ತು ಲಾಕ್‌ಔಟ್ ಒಂದೇ ಒಂದು ಆಗಿದೆ. ನಂಬರ್ ಆಫ್ ವರ್ಕರ್ಸ್ ಇನ್ವಾಲ್ವ್ಡ್ ೧೯೮೦–೮೧ರಲ್ಲಿ ಒಂದು ಲಕ್ಷ, ೨೬ ಸಾವಿರ ಮತ್ತು ೧೯೮೨–೮೩ರಲ್ಲಿ ೫೦ ಸಾವಿರ ೯೧೬. ಆದರೆ ಇವತ್ತು ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ೭ ಸಾವಿರದ ೬೭೩ ಜನ ಮಾತ್ರ ಮುಷ್ಕರಗಳಿಂದ ತೊಂದರೆಗೊಳಪಟ್ಟಿದ್ದಾರೆ. ಇನ್ನು ವೇತನ ನಷ್ಟ ಎಷ್ಟಾಗಿದೆ ಎಂದರೆ, ಅದು ಕೋಟಿಗಟ್ಟಲೆ ಆಗುತ್ತದೆ. ನಮ್ಮ ಸರ್ಕಾರದ ಒಳ್ಳೆಯ ನೀತಿ ಯಿಂದಾಗಿ ನಾವು ಮುಷ್ಕರಗಳನ್ನು ತಡೆಗಟ್ಟುವುದಕ್ಕೆ ಮತ್ತು ಆಗಿರುವ ತೊಂದರೆಗಳನ್ನು ಪರಿಹಾರ ಮಾಡುವುದಕ್ಕೆ ಸರ್ವಪ್ರಯತ್ನಗಳನ್ನು ಮಾಡುತ್ತಿದ್ದೇವೆ. ಮುಷ್ಕರಗಳನ್ನು ತಡೆ ಗಟ್ಟಬೇಕು. ಎಂದರೆ ಮುಷ್ಕರಗಳನ್ನು ಆಗದಂತೆ ನಿಲ್ಲಿಸಬೇಕೆಂದು ಅಲ್ಲ, ಸರ್ಕಾರದ ಈ ಒಂದು ನೀತಿಯಿಂದ ಕಾರ್ಮಿಕರು ಮತ್ತು ಮಾಲೀಕರ ನಡುವೆ ಸೌಹಾರ್ದ ಮನೋಭಾವ ಇರಬೇಕು ಮತ್ತು ಕಾರ್ಮಿಕರಲ್ಲಿ ಶಿಸ್ತು ನೆಲೆಸುವಂತೆ ಪ್ರಯತ್ನ ಮಾಡುತ್ತಿದ್ದೇವೆ. ಕಾರ್ಮಿಕರು ಹೆಚ್ಚಿನ ಉತ್ಪಾದನೆಗೆ ಸಹಕಾರ ಕೊಡಬೇಕು, ಅವರಿಗೆ ಒದಗಿಸಿಕೊಡಬೇಕಾಗಿರುವ ಸೌಲಭ್ಯಗಳಿಗೆ ಮಾಲೀ ಕರು ಯಾವ ವಿಧದಲ್ಲೂ ಅಡ್ಡಿ ಬರಬಾರದು. ಅದೇ ಪ್ರಕಾರವಾಗಿ ಮಾಲೀಕರು ಕಾರ್ಮಿಕರನ್ನು ತಮ್ಮ ಮನೆಯ ಸದಸ್ಯರನ್ನು ನೋಡಿಕೊಳ್ಳುವ ಹಾಗೆ ನೋಡಿಕೊಳ್ಳಬೇಕು. ಅವರ ಕಷ್ಟದ ಫಲವಾಗಿ ಹೆಚ್ಚು ಉತ್ಪಾದನೆ ಕಾರ್ಖಾನೆಗಳಲ್ಲಿ ಆಗುತ್ತದೆ. ಈ ಕಾರಣದಿಂದ ಕಾರ್ಮಿಕರನ್ನು ತಮ್ಮ ಮನೆಯ ಒಬ್ಬ ಸದಸ್ಯನನ್ನು ನೋಡಿಕೊಂಡ ಹಾಗೆ ನೋಡಿಕೊಳ್ಳಬೇಕೆಂದು ಕೂಡ ನಾನು ಮಾಲೀಕರಿಗೆ ಹೇಳುತ್ತಿದ್ದೇನೆ. ಈ ಸಂದರ್ಭದಲ್ಲಿ ಈ ವೇದಿಕೆಯನ್ನು ಉಪಯೋಗಿಸಿ

ಕೊಂಡು ನಾನು ಕೇಳಿಕೊಳ್ಳುವುದೇನೆಂದರೆ, ಬಂಡವಾಳಶಾಹಿ ವ್ಯವಸ್ಥೆ ನಮ್ಮ ದೇಶದಲ್ಲಿ ಇದೆ. ಈ ವ್ಯವಸ್ಥೆಯನ್ನು ಒಂದೇ ದಿನದಲ್ಲಿ ಬದಲಾವಣೆ ಮಾಡುವುದಕ್ಕೆ ಯಾರಿಂದಲೂ ಸಾಧ್ಯವಿಲ್ಲ. ಆದರೆ ಈ ಬದಲಾವಣೆಗೆ ನಾವು ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತಿದ್ದೇವೆ. ಈ ದಿಸೆಯಲ್ಲಿ ನಾವು ದಿಟ್ಟ ಹೆಜ್ಜೆಯನ್ನು ಇಟ್ಟಿದ್ದೇವೆ. ಉದಾಹರಣೆಗೆ ಹೇಳುವುದಾದರೆ ನಾವು ಅಧಿಕಾರಕ್ಕೆ ಬಂದಮೇಲೆ ಹಲವು ಕಾರ್ಖಾನೆಗಳಲ್ಲಿ ಹಾಕಲಾಗಿದ್ದ ಬೀಗಮುದ್ರೆಯನ್ನು ತೆರೆಯುವುದಕ್ಕೆ ಸರ್ವ ಪ್ರಯತ್ನ ಮಾಡಿದ್ದೇವೆ. ಕಾರ್ಮಿಕ ಮುಖಂಡರು ಏನು ಇದ್ದಾರೆ, ಅವರು ಬಹಳ ಜವಾಬ್ದಾರಿಯಿಂದ ನಡೆದುಕೊಳ್ಳುತ್ತಿದ್ದಾರೆ. ಈ ಕಾರಣದಿಂದಾಗಿ ಬಹುತೇಕ ಮುಷ್ಕರಗಳನ್ನು ಪರಿಹಾರ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಈ ಸಂದರ್ಭದಲ್ಲಿ ಈ ಕಾರ್ಮಿಕ ಮುಖಂಡರಿಗೆ ನಾವು ನಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರೆ ಅದು ತಪ್ಪಾಗಲಾರದು. ಕಾರ್ಮಿಕ ಮುಖಂಡರಲ್ಲಿ ನಾನು ಬೇಡಿಕೊಳ್ಳುವುದೇನೆಂದರೆ ಅವರು ಕಾರ್ಮಿಕರಲ್ಲಿ ಶಿಸ್ತನ್ನು ಬೆಳೆಸಬೇಕು. ಶಾಂತಿಯುತವಾದ ವಾತಾವರಣದಲ್ಲಿ ಮತ್ತು ಸುಮಧುರ ವಾತಾವರಣದಲ್ಲಿ ಕಾರ್ಮಿಕರು ಕಾರ್ಖಾನೆಗಳಲ್ಲಿ ಕೆಲಸ ಮಾಡಿದರೆ ಮಾತ್ರ ದೇಶದಲ್ಲಿ ಹೆಚ್ಚು ಉತ್ಪಾದನೆಯಾಗುತ್ತದೆ, ಹೆಚ್ಚಿನ ಉದ್ಯೋಗಾವಕಾಶ ಸೃಷ್ಟಿಯಾಗುತ್ತದೆ, ಹೆಚ್ಚಿನ ಸಂಸ್ಥೆಯಲ್ಲಿ ಕಾರ್ಖಾನೆಗಳು ನಿರ್ಮಾಣವಾಗಲು ಸಾಧ್ಯವಾಗುತ್ತವೆ. ಕಾರ್ಖಾನೆಗಳು ಹೆಚ್ಚಾಗುವುದರಿಂದ ಉತ್ಪಾದನೆ ಜಾಸ್ತಿಯಾಗುತ್ತದೆ ಮತ್ತು ಹೆಚ್ಚು ಉದ್ಯೋಗ ಅವಕಾಶಗಳು ಸೃಷ್ಟಿ ಆಗುವುದಕ್ಕೆ ಸಾಧ್ಯವಾಗುತ್ತದೆ.

ಕೃಷಿ ಕಾರ್ಮಿಕರ ಬಗ್ಗೆ ಮಾನ್ಯ ಸದಸ್ಯರುಗಳಾದ ಕೃಷ್ಣನ್ ಮತ್ತು ಸೂರ್ಯನಾರಾಯಣ ರಾವ್ ಅವರು ಹೇಳಿದ್ದಾರೆ. ಇದರ ಬಗ್ಗೆ ನಮ್ಮ ಸರ್ಕಾರ ನಾಲ್ಕು ಕಾನೂನುಗಳನ್ನು ತರಬೇಕೆಂದು ಯೋಚನೆ ಮಾಡಿದೆ. ಇದು ಇಂಗ್ಲೀಷನಲ್ಲಿ ಇರುವುದರಿಂದ ಇಂಗ್ಲೀಷನಲ್ಲೇ ಓದುತ್ತೇನೆ.

> "Legislation to provide for payment of subsistence allowance to workmen placed under suspension pending enquiry"

ಈ ಒಂದು ಕಾಯಿದೆಯನ್ನು ತರಬೇಕು. ಈ ಕಾನೂನನ್ನು ತರುವುದರ ಮೂಲಕ ಸಸ್ಪೆನ್ಷನ್ ನಲ್ಲಿರುವ ಕಾರ್ಮಿಕರಿಗೆ ಸಂಬಳ ಏನು ಕೊಡಬೇಕು ಎಂಬ ನೀತಿಯನ್ನು ಅದರಲ್ಲಿ ಅಳವಡಿಸಿದ್ದೇವೆ. ಮತ್ತೆ Recognition of Trade Unions and Prevention of Unfair Labour Practices Act, and Code of Descipline verifying and Ballot System. ಇದನ್ನೆಲ್ಲಾ ಅಳವಡಿಸಿ ಇನ್ನೊಂದು ಕಾಯಿದೆಯನ್ನು ತರಬೇಕೆಂದಿದ್ದೇವೆ. ಮತ್ತೆ Legislation regarding closure of Factories. ಕಾರ್ಖಾನೆಗಳು ಮುಚ್ಚುವ ವಿಷಯದಲ್ಲಿ ಒಂದು ನೀತಿಯನ್ನು ಅನುಸರಿಸಬೇಕು ಯಾವ ಯಾವ ಕಾರಣಗಳಿಗಾಗಿ ಕಾರ್ಖಾನೆಯನ್ನು ಮುಚ್ಚಬೇಕು, ಈ ಒಂದು ಕಾಯಿದೆಯನ್ನು ಸಹ ತರುತ್ತಿದ್ದೇನೆ. ಮತ್ತೆ ಇಷ್ಟೇ ಅಲ್ಲ ಇನ್ನೊಂದು ಹೊಸ ಮಸೂದೆ ಅಂದರೆ Karnataka Agricultural and Farm Workers Employment Welfare and Social Security Measures Act, 1983. ಎನ್ನುವ ಮಸೂದೆಯನ್ನು ತರಬೇಕು ಎಂದು ಇದ್ದೇವೆ. ಈ ೪ ಮಸೂದೆಗಳ ಕರಡನ್ನು ಈಗಾಗಲೇ ತಯಾರು ಮಾಡುತ್ತಿದ್ದೇವೆ. ಅವುಗಳನ್ನು ತಯಾರು ಮಾಡಿ ಈ ಸದನದಲ್ಲೇ ಮಂಡಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಇಲ್ಲದಿದ್ದರೆ ಬರುವ ಅಧಿವೇಶನದಲ್ಲಾದರೂ ತಮ್ಮ ಒಪ್ಪಿಗೆಯನ್ನು ಪಡೆಯುವುದಕ್ಕಾಗಿ ಆ ಕರಡುಗಳನ್ನು ಮಂಡಿಸುತ್ತೇವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಏಕೆಂದರೆ ಈ ನಾಲ್ಕು ಕಾಯಿದೆಗಳನ್ನು ಜಾರಿಗೆ ತಂದರೆ ಕಾರ್ಮಿಕರಿಗೆ ಹೆಚ್ಚಿನ ಸೌಲಭ್ಯಗಳನ್ನು ಒದಗಿಸತಕ್ಕಂತಹದ್ದು ಮತ್ತು ಮಾಲೀಕರಿಗೂ ಯಾವ ವಿಧವಾದ ತೊಂದರೆಯಾಗದಂತೆ, ಕಾರ್ಮಿಕರಿಗೆ ತೊಂದರೆಯಾಗದಂತಹ ನೀತಿಯನ್ನು ಅಳವಡಿಸಬೇಕೆಂಬ ಕಾರ್ಯಕ್ರಮವನ್ನೂ ಹಾಕಿಕೊಂಡಿದ್ದೇವೆ. ಅಧ್ಯಕ್ಷರೇ ನಾನು ಇನ್ನು ಅರ್ಧ ಗಂಟೆ ಸಮಯದಲ್ಲಿ ನನ್ನ ಉತ್ತರ ಮುಗಿಸುತ್ತೇನೆ.

ಅಧ್ಯಕ್ಷರು.—ಈಗಾಗಲೇ ಸಾಕಷ್ಟು ವೇಳೆಯಾಗಿದೆ.

ಶ್ರೀ ಸೂರ್ಯನಾರಾಯಣ ರಾವ್.—ಅವರಿಗೆ ಇನ್ನಷ್ಟು ಸಮಯವನ್ನು ತಾವು ಕೊಡಬೇಕು. ಅನೇಕ ವಿಚಾರಗಳ ಬಗ್ಗೆ ಅವರು ವಿವರಣೆಯನ್ನು ಕೊಡಬೇಕಾಗಿದೆ. ಅವರು ಸುಮ್ಮನೆ ಜನರಲ್ಲಾಗಿ ಹೇಳುತ್ತಿದ್ದಾರೆ. ಮಕ್ಕಳು—ಕುಟುಂಬ, ತಂದೆ—ಮಕ್ಕಳು ಇದು ಸಾವಿರಾರು ವರ್ಷಗಳಿಂದ ಇದೆ. ಇದು ವರ್ಗ ಸಂಘರ್ಷ.

ಶ್ರೀ ಎಂ. ರಘುಪತಿ.—ವರ್ಗ ಸಂಘರ್ಷ ನಡೆಯಬೇಕೆಂದು ಹೇಳುತ್ತೇನೆ. ಅಸಂಘಟಿತ ಕಾರ್ಮಿಕರಿಗೆ ಸಹಾಯ ಮಾಡಬೇಕೆಂಬ ಉದ್ದೇಶದಿಂದ ಅಸಂಘಟಿತ ಕಾರ್ಮಿಕರ ಸಹಾಯದ ಯೋಜನೆ ಎಂದು ಒಂದು ಮಸೂದೆಯನ್ನು ನಾವು ತರುತ್ತಿದ್ದೇವೆ.

ಈ ಕಾರ್ಖಾನೆಗಳು ಎಂದರೆ ದೀಪಕ್ ಇನ್‌ಸುಲೇಟೆಡ್ ಕೇಬಲ್ಸ್ ಕಾರ್ಖಾನೆ ಮುಚ್ಚಿ ಹೋಗಿದ್ದು, ಅದರ ಕಾರ್ಮಿಕರ ವಿವಾದವನ್ನು ಇತ್ಯರ್ಥ ಮಾಡಲು ೧೧ನೇ ತಾರೀಖು ಇಟ್ಟು ಕೊಂಡಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್.—ಮುಚ್ಚಿಲ್ಲ. ಮುಷ್ಕರ ನಡೆಯುತ್ತಿದೆ.

ಶ್ರೀ ಎಂ. ರಘುಪತಿ.—ಅದು ನನಗೆ ಗೊತ್ತಿದೆ. ಮುಚ್ಚಿದೆ ಎಂದು ಹೇಳಿದರೂ ತಪ್ಪೇನೂ ಇಲ್ಲ, ಕಾರ್ಮಿಕರು ಆಚೆ ಇದ್ದಾರೆ. ಈ ಒಂದು ವಿವಾದವನ್ನು ಪರಿಹಾರ ಮಾಡಬೇಕೆಂದು ಒಂದು ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಅದೇ ರೀತಿ ಗಾಯಿತ್ರಿ ಮಹಿಳಾ ಕಲ್ಯಾಣ ಸಂಸ್ಥೆಯಲ್ಲಿ ಏನೊಂದು ವಿವಾದ ಇದೆ, ಅದನ್ನು ಪರಿಹಾರ ಮಾಡುವುದಕ್ಕಾಗಿ ಇವತ್ತು ಸಂಜೆ ಸಭೆಯನ್ನು ಕರೆದಿದ್ದೇನೆ. ''ಮೈಕೋ''ದ ವಿವಾದವನ್ನೂ ಪರಿಹಾರ ಮಾಡುವುದಕ್ಕಾಗಿ ಇವತ್ತು ಸಂಜೆ ಸಭೆಯನ್ನು ಕರೆದಿದ್ದೇನೆ. ಎಸ್ಕಾರ್ಟ್‌ದ್ದು ತಮಗೆ ಗೊತ್ತಿದೆ. ಅದು ಪರಿಹಾರವಾಗಿದೆ. ಮೈಸೂರಿನಲ್ಲಿರುವ ವಿಕ್ರಾಂತ್ ಟೈರ್ಸ್ ಅದು ಕೂಡ ಪರಿಹಾರವಾಗಿದೆ. ಅದೇ ರೀತಿ ಇನ್ನು ಯಾವುದೇ ಕಾರ್ಖಾನೆಗಳಲ್ಲಿ ಕಾರ್ಮಿಕರ ವಿವಾದ ಏನು ಇದೆ ಅದನ್ನು ಪರಿಹಾರ ಮಾಡುವುದಕ್ಕೆ ಸರ್ವ ಪ್ರಯತ್ನ ಮಾಡುತ್ತೇನೆ. ಮತ್ತೆ ಕಾರ್ಮಿಕರಿಗೆ ಇನ್ನು ಕೆಲವು ಸೌಲಭ್ಯಗಳನ್ನು ಕೈಗೊಳ್ಳುವುದಕ್ಕಾಗಿ ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆಂಬುದನ್ನು ಹೇಳಬೇಕಾಗಿದೆ. ಅದರ ಒಂದು ಪಟ್ಟಿಯನ್ನು ಎಲ್ಲಾ ಸದಸ್ಯರಿಗೂ ಕೊಡಿಸುವಂತಹ ವ್ಯವಸ್ಥೆಯನ್ನು ಮಾಡುತ್ತೇನೆ. ಕಾರ್ಮಿಕ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಇಂಡಸ್ಟ್ರಿಯಲ್ ಟ್ರಿಪಾರ್ಟೈಟ್ ಸಮಿತಿಯನ್ನು ರಚನೆ ಮಾಡಿದ್ದೇವೆ. ಅದೇ ರೀತಿ ಶ್ರೀಮಾನ್ ಪಿ. ಎಲ್ ಕುಮಾರಸ್ವಾಮಿಯವರ ಅಧ್ಯಕ್ಷತೆಯಲ್ಲಿ ಕರ್ನಾಟಕ ರಾಜ್ಯ ಮಿನಿಮಮ್ ವೇಜಸ್ ಅಡ್ವೈಜರಿ ಬೋರ್ಡ್‌ನ್ನು ರಚನೆ ಮಾಡಿದ್ದೇವೆ. ಟ್ರಿಪಾರ್ಟೈಟ್ ವೇಜ್ ಕಮಿಟಿ ಫಾರ್ ಶುಗರ್ ಇಂಡಸ್ಟ್ರೀಸ್ ಎಂಬುದಾಗಿ ಕಾರ್ಮಿಕ ಮಂತ್ರಿಗಳ ಅಧ್ಯಕ್ಷತೆಯಲ್ಲಿ ರಚನೆ ಮಾಡಿದ್ದೇವೆ. ಸ್ಟೇಟ್ ಇಂಡಸ್ಟ್ರಿಯಲ್ ರಿಲೇಷನ್ಸ್ ಇಂಪ್ಲಿಮೆಂಟೇಷನ್ ಮತ್ತೆ ಇವಾಲ್ಯುವೇಷನ್ ಕಮಿಟಿಯನ್ನು ಕಾರ್ಮಿಕರ ಮಂತ್ರಿಗಳ ಅಧ್ಯಕ್ಷತೆಯಲ್ಲಿ ರಚನೆ ಮಾಡಿದ್ದೇವೆ. ಕರ್ನಾಟಕ ಲೇಬರ್ ವೆಲ್‌ಫೇರ್ ಫಂಡ್ ಬೋರ್ಡ್‌ನ್ನು ರಚನೆ ಮಾಡಿದ್ದೇವೆ. ಕರ್ನಾಟಕ ಸ್ಟೇಟ್ ಕಾಂಟ್ರಾಕ್ಟ್ ಲೇಬರ್ (ರೆಗ್ಯುಲೇಷನ್ ಅಂಡ್ ಅಬಾಲಿಷನ್) ಅಡ್ವೈಜರಿ ಬೋರ್ಡ್ ರಚನೆ ಮಾಡಿದ್ದೇವೆ. ಅಸಂಘಟಿತ ಗ್ರಾಮಾಂತರ ಕಾರ್ಮಿಕರ ಕಲ್ಯಾಣ ಸಮಿತಿಯನ್ನು ಕಾರ್ಮಿಕ ಮಂತ್ರಿಗಳ ಅಧ್ಯಕ್ಷತೆಯಲ್ಲಿ ರಚನೆ ಮಾಡಿದ್ದೇವೆ. ಇಷ್ಟು ಸಮಿತಿಗಳು ರಚನೆಯಾಗಿರುವುದರಿಂದ ಕಾರ್ಮಿಕರ ವಿವಾದವನ್ನು ಕಡಿಮೆಮಾಡುವುದಕೆ ಮತ್ತು ಕಾರ್ಮಿಕರಿಗೆ ಹೆಚ್ಚಿನ ಸೌಲಭ್ಯಗಳನ್ನು ಒದಗಿಸಿಕೊಡಲು ಸಾಧ್ಯವಾಗುತ್ತದೆ.

ಶ್ರೀ ಶಿವಮೂರ್ತಿ ಮತ್ತು ನಾಯಕ್‌ರವರು, ಬಾಲಕರು ಹಾಗೂ ಬಾಲಕಿಯರು ಏನು ಇದ್ದಾರೆ ಅವರಿಗೆ ಕಡಿಮೆ ವೇತನವನ್ನು ಕೊಟ್ಟು ಅವರನ್ನು ಹೆಚ್ಚು ಹೆಚ್ಚು ಕೆಲಸಗಳಲ್ಲಿ ಉಪಯೋಗಿಸಿಕೊಳ್ಳುತ್ತಿದ್ದಾರೆಂದು ಹೇಳಿದರು. ಇದು ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ಆರ್ಥಿಕ ವ್ಯವಸ್ಥೆಯಲ್ಲಿ ಪಾಪ ಬಡವರು ಏನು ಇದ್ದಾರೆ, ಅವರು ತಮ್ಮ ಮಕ್ಕಳನ್ನು ಕೆಲಸಕ್ಕೆ ಕಳುಹಿಸುತ್ತಾರೆ. ಏಕೆ ಕಳುಹಿಸುತ್ತಾರೆಂದರೆ ಹೆಚ್ಚಿನ ಹಣ ಬರಬೇಕು, ಹೆಚ್ಚಿನ ಸೌಲಭ್ಯ ಸಿಕ್ಕಬೇಕೆಂಬ ಆಸೆಯನ್ನು ಇಟ್ಟುಕೊಂಡು ಕೆಲಸಕ್ಕೆ ಕಳುಹಿಸುತ್ತಾರೆ. ಇದನ್ನು ಸಂಪೂರ್ಣವಾಗಿ ತಪ್ಪಿಸಬೇಕೆಂಬ ಬಗ್ಗೆ ೨೪ನೇ ತಾರೀಖು ಕೇಂದ್ರದ ಮಂತ್ರಿಗಳು ಸಭೆಯನ್ನು ಕರೆದಿದ್ದಾರೆ. ಆ ಸಭೆಯಲ್ಲಿ ಇದು ಒಂದು ಸಬ್ಜೆಕ್ಟ್ ಇದೆ. ಆ ಒಂದು ಸಭೆಯಲ್ಲಿ ಅದನ್ನು ಸಂಪೂರ್ಣವಾಗಿ ಪರಿಹಾರ ಮಾಡುವುದಕ್ಕೆ ಏನೊಂದು ಕಾನೂನನ್ನು ತರುತ್ತಾರೋ ಅದನ್ನು ರಾಜ್ಯದಲ್ಲಿ ಕಟ್ಟುನಿಟ್ಟಾಗಿ ಪಾಲನೆ ಮಾಡುವಂತಹ ಏರ್ಪಾಡನ್ನು ಮಾಡುತ್ತೇನೆ. ಇದರ ಬಗ್ಗೆ ಇದುವರೆವಿಗೂ ೨೪೦ ಜನ ಇಂತಹವರು ಕೆಲಸದಲ್ಲಿದ್ದಾರೆಂದು ಡಿಟೆಕ್ಟ್ ಮಾಡಿದ್ದೇವೆ. ಇವತ್ತಿನ ದಿವಸ ಅವರಿಗೆ ಪರಿಹಾರವನ್ನು ಒದಗಿಸಿಕೊಡುವುದಕ್ಕೆ ಏರ್ಪಾಡನ್ನು ಮಾಡಿದ್ದೇವೆ.

ವಿರೋಧ ಪಕ್ಷದ ನಾಯಕರಾದಂತಹ ಶ್ರೀಮಾನ್ ಮೊಯ್ಲಿಯವರು ಆಶಾಕಿರಣದ ಕಾರ್ಯಕ್ರಮದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಆ ಒಂದು ಕಾರ್ಯಕ್ರಮ ಹೋದ ತಿಂಗಳ ೩೧ನೇ ತಾರೀಖಿಗೆ ಮುಗಿದು ಹೋಗುತ್ತಿತ್ತು. ಅದನ್ನು ನಾವು ಮುಂದುವರಿಸಿದ್ದೇವೆ. ಆಶಾಕಿರಣದ

ಬಗ್ಗೆ ಈ ಸಂದರ್ಭದಲ್ಲಿ ಒಂದು ವಿಷಯವನ್ನು ನಾನು ಹೇಳಬಯಸುತ್ತೇನೆ. ನಾನು ಈ ಬಗ್ಗೆ ಹಿಂದಿನ ಸರ್ಕಾರಕ್ಕೆ ಮೆಚ್ಚುಗೆಯನ್ನು ವ್ಯಕ್ತಪಡಿಸಬೇಕಾಗಿದೆ. ಆಶಾಕಿರಣ ಯೋಜನೆಯನ್ನು ಶ್ರೀಮಾನ್ ಮೊಯ್ಲಿಯವರ ಜಾರಿಗೆ ತಂದರು. ಅವರಿಗೆ ಖಂಡಿತವಾಗಿ ನಾನು ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ, ಏಕೆಂದರೆ ನೊಂದ ಕಾರ್ಮಿಕರಿಗೆ ಆಶಾಕಿರಣ ಯೋಜನೆಯ ಮೂಲಕ ಕೊಡು ತ್ತಿರುವ ಪ್ರೀಮಿಯಂ ಹಣ ಕಡಿಮೆಯಾಗಿದೆ ಎಂಬುದನ್ನು ನಾನು ಸಂಪೂರ್ಣವಾಗಿ ಒಪ್ಪಿಕೊಳ್ಳು ತ್ತೇನೆ. ಮತ್ತು ಇದಕ್ಕಾಗಿ ಹೆಚ್ಚಿನ ಹಣವನ್ನು ಪ್ರೀಮಿಯಂಗೆ ಒದಗಿಸುವುದಕ್ಕೆ ಸಾಧ್ಯವಾಗುತ್ತ ದೆಯೋ ಎಂಬುದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ನಾವು ಈ ವಿಷಯವನ್ನು ಸರಿಯಾಗಿ ಅರ್ಥಮಾಡಿಕೊಳ್ಳೋಣ. ಪ್ರೀಮಿಯಂಗೆ ಈಗ ಕೊಡುತ್ತಿರುವುದು ೫೮ ಲಕ್ಷ ರೂಪಾಯಿಗಳು ಕೃಷಿ ಕಾರ್ಮಿಕರಿಗೆ, ಅಸಂಘಟಿತ ಕಾರ್ಮಿಕರಿಗೆ ಇದನ್ನು ಇಟ್ಟಿದ್ದೇವೆ. ಆದರೆ ಇವರಿಗಾಗಿ ಇಟ್ಟಿರತಕ್ಕಂತಹ ಸಮ್ ಅಶ್ಯೂರ್ಡ್ ಏನಿದೆ ಅದನ್ನು ೨ ಸಾವಿರ ರೂಪಾಯಿಗಳಿಂದ ೫ ಸಾವಿರ ರೂಪಾಯಿಗಳಿಗೆ ಹೆಚ್ಚು ಮಾಡಿದರೆ ಪ್ರೀಮಿಯಂ ಹೆಚ್ಚು ಮಾಡುವ ಅವಶ್ಯಕತೆ ಇಲ್ಲ. ಅದನ್ನು ಇನ್ನೂ ಕಡಿಮೆ ಮಾಡುವ ಸಾಧ್ಯತೆ ಇದೆ. ಏಕೆಂದರೆ ನಾವು ಕಳೆದ ವರ್ಷ ಇದನ್ನು ಪ್ರಯೋಗಾರ್ಥವಾಗಿ ಮಾಡಿದ್ದೆವು. ಅದರಲ್ಲಿ ನನಗೆ ತಿಳಿದ ಮಟ್ಟಿಗೆ ೫–೧೦ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅದರಿಂದ ೪೮ ಲಕ್ಷ ರೂಪಾಯಿ ಗಳು ಇನ್ಶೂರೆನ್ಸ್ ಕಂಪನಿಗೆ ಲಾಭವಾಯಿತು. ಆದ್ದರಿಂದ ಸಮ್ ಅಶ್ಯೂರ್ಡ್ ಏನಿದೆ ಅದನ್ನು ೨ ಸಾವಿರದಿಂದ ೫ ಸಾವಿರ ರೂಪಾಯಿಗಳಿಗೆ ಹೆಚ್ಚು ಮಾಡಿ, ಮತ್ತೊಂದು ೧ ಸಾವಿರದಿಂದ ೩ ಸಾವಿರ ರೂಪಾಯಿಗಳಿಗೆ ಹೆಚ್ಚು ಮಾಡಿದರೆ, ಪ್ರೀಮಿಯಂ ಜಾಸ್ತಿ ಮಾಡುವ ಪ್ರಸಂಗ ಇಲ್ಲ.

ಶ್ರೀ ಎಂ. ರಘುಪತಿ.—೩೪೦ ಪ್ರಕರಣದಲ್ಲಿ ೫ ಲಕ್ಷ ಹಣವನ್ನು ಇನ್ಶೂರೆನ್ಸ್ ಕಂಪನಿಯವರು ಕೊಟ್ಟಿದ್ದಾರೆ. ಅದರಿಂದ ಅವರಿಗೆ ಲಾಭವಾಗಿದೆ. ಆದ್ದರಿಂದ ಸಮ್ ಅಸ್ಯೂರ್ಡ್ ಹಣವನ್ನು ಹೆಚ್ಚು ಮಾಡಬೇಕೆಂಬುದು ಸೂಕ್ತವಾದ ಸಲಹೆ. ಮತ್ತೆ ಗುಲ್ಬರ್ಗದ ಎಂ.ಎಸ್.ಕೆ. ಮಿಲ್ಸ್ ಬಗ್ಗೆ ಶ್ರೀಮಾನ್ ಎಂ. ಎಸ್. ಕೃಷ್ಣನ್‌ರವರು ಪ್ರಸ್ತಾಪ ಮಾಡಿದ್ದರು. ಅಲ್ಲಿಯ ಕಾರ್ಮಿಕರ ವಿವಾದ ಬಹಳ ಮಟ್ಟಿಗೆ ಕಡಿಮೆಯಾಗಿದೆ. ೧೭ನೇ ತಾರೀಖು ಮತ್ತೆ ಲೇಬರ್ ಕಮೀಷನರ್ ಸಮ್ಮುಖದಲ್ಲಿ ಸಭೆಯನ್ನು ಇಟ್ಟುಕೊಂಡಿದ್ದೇವೆ. ಆ ಸಭೆಯಲ್ಲಿ ಸಮಸ್ಯೆಯನ್ನು ಪರಿಹಾರ ಮಾಡುವುದಕ್ಕೆ ಸರ್ವ ಪ್ರಯತ್ನ ಮಾಡುತ್ತೇವೆ. ಮತ್ತೆ ಶ್ರೀಮಾನ್ ಸೂರ್ಯನಾರಾಯಣರಾವ್‌ರವರು ಹೇಳಿದ ಹಾಗೆ ೧೭ನೇ ತಾರೀಖಿನ ಸಭೆ ವಿಫಲವಾಗುವುದಿಲ್ಲ ಎಂದು ನಂಬಿದ್ದೇನೆ. ಒಂದು ವೇಳೆ ಅದು ವಿಫಲವಾದರೆ ಪುನಃ ನನ್ನ ಕೊಠಡಿಯಲ್ಲೇ ಮತ್ತೊಂದು ಸಭೆಯನ್ನು ಕರೆದು, ಮಾತುಕತೆ ನಡೆಸಿ ಪರಿಹಾರ ಮಾಡು ವುದಕ್ಕೆ ಸರ್ವ ಪ್ರಯತ್ನ ಮಾಡುತ್ತೇವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀಮಾನ್ ಸೂರ್ಯನಾರಾಯಣರಾವ್ ಅವರು 'ಹಿಂದೂಜಾ ಕಂಪನಿಯ' ಸಮಸ್ಯೆ ಬಗ್ಗೆ ಹೇಳಿದ್ದಾರೆ. ಅದನ್ನು ಸಹ ನಾನು ಪರಿಹಾರ ಮಾಡುವುದಕ್ಕೆ ಸರ್ವ ಪ್ರಯತ್ನ ಮಾಡುತ್ತೇನೆಂದು ಹೇಳುತ್ತೇನೆ. ಶ್ರೀ ವೀರಪ್ಪ ಮೊಯಿಲಿ, ಸೂರ್ಯನಾರಾಯಣರಾವ್, ಕೃಷ್ಣನ್ ಅವರುಗಳು ಎನ್‌ಟಿಸಿಯವರು ಕನಿಷ್ಠ ವೇತನದ ಬಗ್ಗೆ ಏನು ಒಂದು ಒಪ್ಪಂದವನ್ನು ಮಾಡಿಕೊಂಡಿದ್ದಾರೆ ಅದನ್ನು ಜಾರಿಗೆ ಕೊಡುತ್ತಿಲ್ಲವೆಂದು ಹೇಳಿದರು.

ಶ್ರೀ ವೀರಪ್ಪ ಮೊಯಿಲಿ.—ಎನ್‌ಟಿಸಿ ಮಾತ್ರವಲ್ಲ, ಟೆಕ್ಸ್‌ಟೈಲ್ ಸೆಕ್ಟರ್‌ನಲ್ಲಿ ದಿನಾಂಕ ೧೪ನೇ ಜುಲೈ ೧೯೮೩ರಂದು ಏನು ಒಂದು ''ಟ್ರೈಪಾರ್ಟೈಟ್ ಅಗ್ರಿಮೆಂಟ್'' ಆಗಿದೆ ಅದನ್ನು ಜಾರಿಗೆ ತರಬೇಕಾಗಿದೆ.

ಶ್ರೀ ಪಂಪಾಪತಿ.—ಖಾಸಗಿ ಮಿಲ್ಲುಗಳಲ್ಲಿ ಇದನ್ನು ಜಾರಿಗೆ ಕೊಟ್ಟಿದ್ದಾರೆ. ಆದರೆ ಎನ್‌ಟಿಸಿ, ೨ ಕೋ–ಆಪರೇಟೀವ್ ಭಾಗದ ಮಿಲ್ಲುಗಳಲ್ಲಿ ಜಾರಿಗೆ ಕೊಟ್ಟಿಲ್ಲ.

ಶ್ರೀ ಎಂ. ರಘುಪತಿ.—ಎಂಎಸ್‌ಕೆ ಮಿಲ್‌ನಲ್ಲಿ ಕೊಟ್ಟಿಲ್ಲ, ಕೋ–ಆಪರೇಟೀವ್ ಮಿಲ್ಲುಗಳಲ್ಲಿ ಜಾರಿಗೆ ಕೊಟ್ಟಿಲ್ಲ.

ಶ್ರೀ ಪಂಪಾಪತಿ.—ಈ ನಮ್ಮ ಕರ್ನಾಟಕ ರಾಜ್ಯದಲ್ಲಿ ೫ ಎನ್‌ಟಿಸಿ ಮಿಲ್ಲುಗಳಲ್ಲಿ, ೪ ಕೋ–ಆಪರೇಟಿವ್ ಮಿಲ್ಲುಗಳಲ್ಲಿ ಎಂದರೆ ಒಟ್ಟು ೯ ಮಿಲ್ಲುಗಳಲ್ಲಿ ಇದನ್ನು ಜಾರಿಗೆಕೊಟ್ಟಿಲ್ಲ.

ಶ್ರೀ ಎಂ. ರಘುಪತಿ.—ದಿನಾಂಕ ೧೪ನೇ ಜುಲೈ ೧೯೮೩ರಲ್ಲಿ ಇದರ ಬಗ್ಗೆ ಒಂದು ಒಪ್ಪಂದವಾಗಿದೆ. ಅದರ ಪ್ರಕಾರ ಟ್ರೈಪಾರ್ಟೀಟ್‌ಗಳ ಅಗ್ರಿಮೆಂಟ್‌ನ್ನು ಜಾರಿಗೆ ತರಬೇಕೆಂದು ಒತ್ತಾಯ ತರುತ್ತಿದ್ದೇವೆ. ಮತ್ತು ಅದನ್ನು ಜಾರಿಗೆ ಕೊಡುವುದಕ್ಕೆ ಸರ್ವ ಪ್ರಯತ್ನ ಮಾಡುತ್ತಿದ್ದೇವೆ. ಇದರಲ್ಲಿ ಯಾವುದೇ ವಿಧವಾದ ವಿಫಲಕ್ಕೆ ಅವಕಾಶವನ್ನು ಕೊಡುವುದಿಲ್ಲವೆಂದು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ.

ಅಧ್ಯಕ್ಷರೇ, ನಾನು ಈಗ ಕಾರ್ಮಿಕ ಇಲಾಖೆಯ ವಿಚಾರಗಳನ್ನೇ ಹೆಚ್ಚಾಗಿ ನೋಡುತ್ತಿದ್ದೇನೆ, ಬೇರೆ ಇಲಾಖೆ ಬಿಟ್ಟು. ಆದ್ದರಿಂದ ಈ ತಿಂಗಳ ಅಂತ್ಯದಲ್ಲಿ 'ಟ್ರೈಪಾರ್ಟಿಟ್' ಅಗ್ರಿಮೆಂಟನ್ನು ಜಾರಿಗೆ ತರುವುದಕ್ಕೆ ಒಂದು ಸಭೆಯನ್ನು ಕರೆಯುವುದಕ್ಕೆ ಏರ್ಪಾಡು ಮಾಡುತ್ತೇನೆ.ಬಿಇಎಲ್, ಹೆಚ್‌ಎಂಟಿ ಕಾರ್ಖಾನೆಗಳಿಗೆ ಸಂಬಂಧಪಟ್ಟ ಒಂದು ಸಭೆಯನ್ನು ಕರೆಯುತ್ತಿದ್ದೇನೆ. ಆ ಸಂದರ್ಭದಲ್ಲಿ ಈ ಸಭೆಯನ್ನು ಕರೆಯುತ್ತೇನೆ.

ಶ್ರೀ ಧನಂಜಯಕುಮಾರ್‌ರವರು ಗೇರು ಬೀಜದ ಕಾರ್ಮಿಕರ ಬಗ್ಗೆ ಪ್ರಸ್ತಾಪಿಸಿದರು. ಈ ಗೇರು ಬೀಜದ ಕಾರ್ಖಾನೆಯ ಕಾರ್ಮಿಕರಿಗೆ ಸಂಬಂಧಪಟ್ಟಹಾಗೆ ಯು. ಟಿ. ಫರೀದ್ ಅವರ ನೇತೃತ್ವದಲ್ಲಿ ಒಂದು ಸಮಿತಿಯು ಈ ಕನಿಷ್ಟ ವೇತನದ ಬಗ್ಗೆ ವರದಿಯನ್ನು ಸಲ್ಲಿಸಿತ್ತು. ಅದನ್ನು ಜಾರಿಗೆ ಕೊಡುವುದಕ್ಕೆ ನಮ್ಮ ಕೈಲಾದ ಪ್ರಯತ್ನವನ್ನು ಮಾಡುತ್ತೇವೆ. ಅದರ ಸಲಹಾ ಮಂಡಲಿಯ ಬಗ್ಗೆ ಮಾನ್ಯ ಕೃಷ್ಣನ್‌ರವರು ಏನಾದರೂ ಬದಲಾವಣೆ ಮಾಡುತ್ತೀರೋ ಎಂದು ಕೇಳಿದರು. ಅದೇರೀತಿ ಮಾನ್ಯ ಸೂರ್ಯನಾರಾಯಣರಾವ್‌ರವರು ಹಿಂದಿನ ಸಮಿತಿಗಿಂತ ಇದು ಉತ್ತಮವಾಗಿದೆಯೆಂದು ಹೇಳಿದರು. ಒಂದು ವೇಳೆ ಒಂದೆರಡು ಬದಲಾವಣೆ ಸಮಂಜಸವಾಗಿ ಕಂಡರೆ ಅದನ್ನು ಬದಲಾವಣೆ ಮಾಡುತ್ತೇವೆಂದು ಈ ಸಂದರ್ಭದಲ್ಲಿ ನಾನು ಹೇಳುತ್ತಿದ್ದೇನೆ.

ಇನ್ನು ಬೀಡಿ ಕಾರ್ಮಿಕರ ಸಮಸ್ಯೆಯ ಬಗ್ಗೆ, ಈ ಬೀಡಿ ಕಾರ್ಮಿಕರ ಬಗ್ಗೆ ಸಂಬಂಧಪಟ್ಟ ಆಜ್ಞೆ ಇನ್ನೂ ಹೊರಡಿಸಿಲ್ಲವೆಂದು ಹೇಳಿದರು. ನಾನು ಅದನ್ನು ಈಗಾಗಲೇ ಹೊರಡಿಸುವಂತೆ ಆದೇಶ ನೀಡಿದ್ದೇನೆ. ಅವರ ಕನಿಷ್ಟವೇತನದ ಬಗ್ಗೆ ಏನು ವಾದವಿದೆ ಅದನ್ನು ಬಗೆಹರಿಸುವುದಕ್ಕೆ ಸರ್ವ ಪ್ರಯತ್ನ ಮಾಡುತ್ತೇನೆ.

ಇನ್ನು ಪ್ಲಾಂಟೇಷನ್ ಕಾರ್ಮಿಕರಿಗೆ ಮನೆಗಳನ್ನು ಕಟ್ಟುವ ವಿಚಾರದಲ್ಲಿ ಶ್ರೀಮಾನ್ ಸೋಮಪ್ಪನವರು ಹೇಳಿದರು ದಿನಗೂಲಿ ೮–೦೫ ಪೈಸೆ ಕೊಡುತ್ತಿದ್ದಾರೆಂದು ಅವರಿಗೆ ಗೊತ್ತಿಲ್ಲ ಎಷ್ಟು ಕೊಡುತ್ತಿದ್ದಾರೆಂದು. ಈಗ ಅವರು ರೂ. ೮–೫೦ ಕೊಡಬೇಕಾಗಿದೆ. ಮಾನ್ಯ ಖರ್ಗೆಯವರೇ ನೀವು ಸ್ವಲ್ಪ ಅವರಿಗೆ ೮–೫೦ ಕೊಡಬೇಕೆಂದು ಹೇಳಿ ಮಾನ್ಯ ಮೊಯಿಲಿಯವರು ಇವೊತ್ತು ಪ್ಲಾಂಟೇಷನ್‌ನಲ್ಲಿ ಗೃಹನಿರ್ಮಾಣ ಏನು ಇದೆ ಅದು ಮಂದಗತಿಯಲ್ಲಿ ನಡೆಯುತ್ತಿದೆಯೆಂದು ಹೇಳಿದರು. ನಾನು ಲೇಬರ್ ಇನ್ಸ್‌ಪೆಕ್ಟರುಗಳಿಗೆ ಈ ಬಗ್ಗೆ ಸೂಕ್ತ ಆದೇಶ ನೀಡಿದ್ದೇನೆ. ಅವರು ಈ ಮನೆಗಳನ್ನು ಜಾಗ್ರತೆ ಕಟ್ಟುವಂತೆ ವ್ಯವಸ್ಥೆ ಮಾಡುತ್ತಾರೆ. ಲೇಬರ್ಸ್ ಮನೆಗಳ ಬಗ್ಗೆ ಮಾಲೀಕರು ಸಹ ಅಷ್ಟು ಆಸಕ್ತಿಯಿಂದ ಮುಂದೆ ಬರುತ್ತಿಲ್ಲ. ಇದು ನಿಜಾಂಶ. ಈ ನೆಪವನ್ನು ಮಾಡಿಕೊಂಡು ಮಾಲೀಕರು ಕೆಲವು ರಿಯಾಯಿತಿಗಳನ್ನು ಕೇಳುತ್ತಿದ್ದಾರೆ. ಒಟ್ಟಿನಲ್ಲಿ ಅಂತಹ ವಿಷಯದಲ್ಲಿಯೂ ಒಂದು ಸಭೆಯನ್ನು ಕರೆದು ಅವುಗಳನ್ನು ಪರಿಹಾರ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಇನ್ನೊಂದು ಬಹಳ ಪ್ರಾಮುಖ್ಯವಾದ ವಿಚಾರ ಈ 'ಇನ್ಸ್‌ಪೆಕ್ಟೊರೇಟ್ ಆಫ್ ಬಾಯ್ಲರ್ಸ್ ಅಂಡ್ ಫ್ಯಾಕ್ಟರೀಸ್' ಬಗ್ಗೆ ಮಾನ್ಯ ಶ್ರೀ ಮೈಕೇಲ್ ಫರ್ನಾಂಡೀಸ್‌ರವರು ಹೇಳಿದರು, ಅದರಲ್ಲಿ ೩–೪ ಪ್ರಕರಣಗಳಲ್ಲಿ ಇವೊತ್ತು ಅಪಘಾತಗಳಾಗಿವೆ. ಒಂದು 'ಸುಜಾತ ಟೆಕ್ಸ್‌ಟೈಲ್ ಮಿಲ್'ನ ಒಬ್ಬ ಕಾರ್ಮಿಕ ೧೯೮೨ರಲ್ಲಿ ತೀರಿಹೋದ ಅದೇರೀತಿ ಆಮ್ಕೋ ಬ್ಯಾಟರಿಯಲ್ಲಿ ಮತ್ತು ದಾಂಡೇಲಿಯಲ್ಲಿ ಈ ಮೂರು ಜಾಗದಲ್ಲಿಯೂ ಮೂರು ಜನ ಕಾರ್ಮಿಕರು ತೀರಿಹೋದರೆಂದು ಹೇಳಿದ್ದಾರೆ ಮತ್ತೆ ಮಿಕ್ಕದ್ದೆಲ್ಲ ಸಣ್ಣಪುಟ್ಟದ್ದಾಗಿದೆ. ಇವೇ ಮೇಜರ್ ಆಕ್ಸಿಡೆಂಟ್‌ಗಳು. ಈ ಆಕ್ಸಿಡೆಂಟ್‌ಗಳಲ್ಲಿ ಏನು ಉದ್ಯೋಗಿಗಳು ತೀರಿ ಹೋಗುತ್ತಿದ್ದಾರೆ ಇದು ಬಹಳ ದುಃಖಕರವಾದ ಸಂಗತಿ. ಕೆಲವು ಸಂದರ್ಭಗಳಲ್ಲಿ ಪರಿಹಾರ ಕೊಡುವುದಾಗಲೀ ಮತ್ತು ಕೇಸ್‌ಗಳನ್ನು ಹಾಕುವುದಾಗಲೀ ಕ್ರಮ ತೆಗೆದುಕೊಂಡಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್.— ಮಾನ್ಯ ಅಧ್ಯಕ್ಷರೇ, ಈ ೪ ಕೇಸ್‌ಗಳಲ್ಲಿ ಕೆಲವನ್ನು ಬೇಕೆಂದೋ ಸಪ್ರೆಸ್ ಮಾಡುವ ರೀತಿಯಲ್ಲಿ ಇದ್ದಾರೆ. ನಿಜಾಂಶವನ್ನು ಕಂಡುಹಿಡಿಯುವುದಕ್ಕೆ ಸರಿಯಾದ ತನಿಖೆಯನ್ನು ಮಾಡಿಸಬೇಕು, ಲಂಚವನ್ನು ತೆಗೆದುಕೊಂಡು ಯಾರಾದರೂ ಮಾಡಿದ್ದರೆ ಅವರ ಮೇಲೆ ತೀವ್ರವಾದ ಕ್ರಮವನ್ನು ತೆಗೆದುಕೊಳ್ಳಬೇಕು.

ಶ್ರೀ ಎಂ. ರಘುಪತಿ.— ಯಾರೇ ಸಪ್ರೆಸ್ ಮಾಡಿರಲಿ ನಮ್ಮ ಸರ್ಕಾರ ಅವರನ್ನು ರಕ್ಷಣೆ ಮಾಡುವುದಿಲ್ಲ. ಇಂತಹ ವ್ಯಕ್ತಿಗಳಿಗೆ ಸಂಬಂಧಪಟ್ಟ ತನಿಖೆಯನ್ನು ಮಾಡಿಸಿಯೇ ಮಾಡಿಸುತ್ತೇನೆ. ಸಿ.ಒ.ಡಿ. ಯವರಿಂದ ಸಾಧ್ಯವಾದರೆ ವಿಜಿಲೆನ್ಸ್‌ನವರಿಂದ ತನಿಖೆ ಮಾಡಿಸುತ್ತೇವೆ. ಇಲ್ಲದೇ ಹೋದರೆ ನಮ್ಮ ಸೆಕ್ರೆಟರಿಯೇಟ್‌ನ ಉನ್ನತ ಅಧಿಕಾರಿಗಳಿಂದಾಗಲೀ, ತನಿಖೆ ಮಾಡಿಸಿಯೇ ಮಾಡಿಸುತ್ತೇನೆ. ಎಲ್ಲೆಲ್ಲಿ ಅಪಘಾತ ನಡೆದು ಜನ ತೀರಿ ಹೋಗಿದ್ದಾರೆ. ಎಲ್ಲೆಲ್ಲಿ ಲೋಪದೋಷಗಳಾಗಿವೆ ಎಂದು ನೋಡಿ ಎಲ್ಲಾ ಕೇಸುಗಳನ್ನು ತನಿಖೆ ಮಾಡಿಸುತ್ತೇನೆಂದು ಹೇಳುತ್ತೇನೆ. ಮತ್ತೆ ಶ್ರೀಮಾನ್ ಧನಂಜಯ ಕುಮಾರ್‌ರವರು ಶ್ರೀಮತಿ ರಜಿಯಾಬೇಗಂ ಬಗ್ಗೆ ಹೇಳಿದರು. ಅದು ನನಗೆ ತಿಳಿದಮಟ್ಟಿಗೆ ಬಹಳ ದುಃಖಕರ ಸಂಗತಿ. ಇದಕ್ಕೆ ಜಾತಿಯ ಬಣ್ಣವನ್ನು ಕೊಟ್ಟಿರುವುದು ಸರಿಯಲ್ಲ. ಶ್ರೀಮತಿ ರಜಿಯಾರವರು ಸುಮಾರು ೨೦ ವರ್ಷದಿಂದ ಇಲ್ಲಿ ಕೆಲಸ ಮಾಡಿಕೊಂಡು ಬರುತ್ತಿದ್ದಾರೆ. ಈ ವಿವಾದ ಕೋರ್ಟಿನಲ್ಲಿ ಇದೆ, ಇಲ್ಲದಿದ್ದರೆ ಅದರ ಬಗ್ಗೆ ಕೂಲಂಕುಷವಾಗಿ ತನಿಖೆ ನಡೆಸಬೇಕೆಂದು ನನ್ನ ಅಭಿಲಾಷೆ ಇತ್ತು. ೧೯೭೦ರಿಂದ ಏನು ವ್ಯವಹಾರ ನಡೆದಿತ್ತು ಅದರ ಬಗ್ಗೆ ತನಿಖೆ ನಡೆಸಬಹುದಾಗಿತ್ತು. ಆದರೆ ಈ ವಿಚಾರ ಕೋರ್ಟಿನಲ್ಲಿರುವುದರಿಂದ ಕೋರ್ಟಿನ ತೀರ್ಮಾನ ಏನು ಬರುತ್ತದೋ ಎಂದು ಕಾದು ನೋಡೋಣ. ಏಕೆಂದರೆ, ಯಾರಿಗೂ ಇದರಿಂದ ಅನ್ಯಾಯವಾಗಬಾರದು. ಯಾರೇ ಆಗಲಿ, ಅವರಿಗೆ ಅನ್ಯಾಯವಾಗುವುದಕ್ಕೆ ಬಿಡುವುದಿಲ್ಲ. ಕೋರ್ಟ್ ತೀರ್ಪು ಏನು ಬರುತ್ತದೆಯೋ ಅದಕ್ಕೆ ನಾವು ನೀವು ತಲೆ ಬಾಗೋಣವೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಈ ರಾಮದಾಸ್ ಕೇಸನ್ನು ವಾಪಸ್ ತೆಗೆದುಕೊಳ್ಳಲು ಸರ್ಕಾರಕ್ಕೆ ಅಧಿಕಾರವಿದೆ. ೧೯೭೦ರಿಂದ ಈ ವಿವಾದ ನಡೆಯುತ್ತಿತ್ತು. ಹೈಕೋರ್ಟ್ ಅವರು ತಪ್ಪಿತಸ್ಥರಲ್ಲವೆಂದು ತೀರ್ಪು ಕೊಟ್ಟಿದ್ದಾರೋ ಪುನಃ ಆ ಕೇಸ್ ಸುಪ್ರೀಂಕೋರ್ಟ್‌ಗೆ ಹೋಗಿ ಸುಮಾರು ೧೦ ವರ್ಷದಿಂದ ಅಲ್ಲಿ ನಿಂತಿರುವುದರಿಂದ ಮತ್ತು ಅವರು ೧ ವರ್ಷದಲ್ಲಿ ರಿಟೈರ್ ಆಗುವುದರಿಂದಲೂ, ಮತ್ತು ಇನ್ನಿತರ ಹಲವಾರು ಕಾರಣಗಳಿಂದ ಈ ಕೇಸನ್ನು ವಾಪಸ್ ತೆಗೆದುಕೊಂಡಿದ್ದೇವೆ. ಇದು ಸಮಂಜಸವಾಗಿದೆ.

ಶ್ರೀ ಸಿ. ಬೈರೇಗೌಡ.— ಇವರ ಮೇಲೆ ಸಾಕಷ್ಟು ಆಪಾದನೆಗಳಿವೆ, ಅವರ ಸರ್ವೀಸ್ ರಿಜಿಸ್ಟರ್ ತೆಗೆಸಿ ನೋಡಿ, ಭ್ರಷ್ಟಾಚಾರವನ್ನು ತೊಡೆದುಹಾಕುತ್ತೇವೆಂದು ಹೇಳುತ್ತಿರುವ ತಾವು ಇಂತಹ ಅಧಿಕಾರಿಗಳನ್ನು ರಕ್ಷಣೆ ಮಾಡುವುದಕ್ಕೆ ಹೋಗುತ್ತೀರಾ?

ಶ್ರೀ ಡಿ. ಧನಂಜಯಕುಮಾರ್.— ತಾವು ಕೇಸ್ ವಾಪಸ್ ತೆಗೆದುಕೊಳ್ಳುವುದಕ್ಕೆ ಹಲವಾರು ಕಾರಣಗಳಿವೆಯೆಂದು ಹೇಳಿದ್ದೀರಿ. ಅದನ್ನೇ ನಾನು ಪ್ರಸ್ತಾಪ ಮಾಡಿದೆ. ಈ ಒಂದು ಕಾರಣವನ್ನು ತಿಳಿದುಕೊಳ್ಳುವುದಕ್ಕೆ ಈ ಮನೆಗೆ ಸಂಪೂರ್ಣವಾದ ಅಧಿಕಾರವಿದೆ. ಅದಕ್ಕೋಸ್ಕರ ಸಂಬಂಧಪಟ್ಟ ಫೈಲ್‌ನ್ನು ಈ ಸದನದ ಮುಂದೆ ಇಡಿ ಎಂದು ನಾನು ಹೇಳಿದ್ದೇನೆ. ಹಾಗೆಯೇ ಈ ರಜಿಯಾಬೇಗಂ ಬಗ್ಗೆ ಜಾತಿಯ ಬಣ್ಣ ಕಟ್ಟಿದ್ದಾರೆಂದು ಹೇಳಿದ್ದೀರಿ. ತಾವು ಜಾತ್ಯಾತೀತ ಸರ್ಕಾರ ನಡೆಸುತ್ತಿರುವಾಗ ಈ ರೀತಿ ಹೇಳುತ್ತಿರುವುದು ಸರಿಯಲ್ಲ. ಆದರೆ ಸಂಬಂಧಪಟ್ಟ ಮಂತ್ರಿಯವರು ಒಂದು ಜಾತಿಯವರಾಗಿರುವುದರಿಂದ ನಾನು ಅದನ್ನು ಹೇಳಿದೆ. ಅದರ ಬಗ್ಗೆ ತಾವು ವಿಶೇಷ ಉಲ್ಲೇಖ ಮಾಡಿಲ್ಲ.

ಅಧ್ಯಕ್ಷರು.— ಮಾನ್ಯ ಮಂತ್ರಿಗಳು ತಮ್ಮ ಉತ್ತರವನ್ನು ಮುಗಿಸಲಿ.

ಶ್ರೀ ಡಿ. ಧನಂಜಯಕುಮಾರ್.— ಯಾರು ಪ್ರಸ್ತಾಪ ಮಾಡದೆ ಇದ್ದಂಥ ವಿಚಾರವನ್ನು ಇಲ್ಲಿ ಮಾನ್ಯ ಮಂತ್ರಿಯವರು ಹೇಳುತ್ತಿದ್ದಾರೆ. ಜಾತಿಯ ಬಣ್ಣ ಕಟ್ಟುತ್ತಿದ್ದಾರೆಂದು ಹೇಳಿದರು, ಅದು ಸರಿಯಲ್ಲ.

ಶ್ರೀ ಎಂ. ರಘುಪತಿ.— ಮೊದಲು ನಾನು ಮುಗಿಸುತ್ತೇನೆ.

ಈ ಸಂದರ್ಭದಲ್ಲಿ ಆ ಕೇಸನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಸರ್ಕಾರಕ್ಕೆ ಸಂಪೂರ್ಣ ಅಧಿಕಾರವಿದೆ. ಅಧಿಕಾರ ವ್ಯಾಪ್ತಿಯಲ್ಲಿ ಅದನ್ನು ವಾಪಸ್ಸು ತೆಗೆದುಕೊಂಡಿದ್ದೇವೆ. ಇದರ ಬಗ್ಗೆ ಸಂಶಯ ಬೇಡ. ನಾನು ಹೇಳಬೇಕೆಂದರೆ ಇನ್ಸ್‌ಪೆಕ್ಟರ್ ಆಫ್ ಬಾಯ್ಲರ್ಸ್‌ಗಳ ಬಗ್ಗೆ ೧೯೭೦ ರಿಂದ ವ್ಯವಹಾರ ನಡೆದಿದೆ. ೧೯೭೦ ರಿಂದ ಸಂಪೂರ್ಣವಾಗಿ ತನಿಖೆ ನಡೆಸಬೇಕೆಂದು ಹೇಳುತ್ತಿದ್ದವರಲ್ಲಿ ನಾನೂ ಒಬ್ಬ, ಅದು ಹೈಕೋರ್ಟ್‌ಗೆ ಬಂದು ಕೈಕೊಟ್ಟಿದೆ, ನಾನು ಹೆಚ್ಚಿಗೆ ಅದರ ಬಗ್ಗೆ ಉಲ್ಲೇಖ ಮಾಡುವುದಿಲ್ಲ ಹೆಚ್ಚಿಗೆ ಪ್ರಸ್ತಾಪ ಮಾಡುವುದಿಲ್ಲ. ಕಾರ್ಮಿಕ ಇಲಾಖೆಯಲ್ಲಿ ಕಾರ್ಮಿಕರ ವಾದ ವಿವಾದಗಳು ಹಲವಾರು. ವಾದವಿವಾದಗಳ ಬಗ್ಗೆ ಕಾನೂನು ತಿದ್ದುಪಡಿ ತರುವುದಕ್ಕೆ ನಾವು ಪ್ರಯತ್ನ ಮಾಡುತ್ತಿದ್ದೇವೆ. ಮೈಕೋ ಕಾರ್ಮಿಕರ ಬಗ್ಗೆ ಮಾನ್ಯ ಸದಸ್ಯರುಗಳು ಪ್ರಸ್ತಾಪ

ಮಾಡುತ್ತಿದ್ದರು, ಇವತ್ತು ಸಾಯಂಕಾಲ ಸಭೆ ಕರೆದಿದ್ದೇನೆ. ಮೈಕೋ ಕಾರ್ಖಾನೆಯಲ್ಲಿ ಅಟೋಮ್ಯಾಟಿಕ್ ಮಿಷನ್‌ಗಳನ್ನು ತರುವುದರಿಂದ ನಾವು ಯಾವುದೇ ಒಬ್ಬ ಕಾರ್ಮಿಕರನ್ನು ಕೆಲಸದಿಂದ ತೆಗೆದುಹಾಕುವುದಿಲ್ಲವೆಂದು ಬರೆದು ಕಳುಹಿಸಿದ್ದಾರೆ.

ಶ್ರೀ ಎಸ್. ಸೂರ್ಯನಾರಾಯಣರಾವ್.—ಮೈಕೋ ಮ್ಯಾನೇಜ್‌ಮೆಂಟ್‌ನವರು ಯಾರನ್ನು ತೆಗೆದುಹಾಕುವುದಿಲ್ಲ. ಎಂಪ್ಲಾಯಿಮೆಂಟ್ ಅಪರ್‌ಚ್ಯುನಿಟಿ ಕಡಿಮೆಯಾಗುವುದಿಲ್ಲವೆಂದು ಬರೆದಿದ್ದಾರೆಯೆ ?

ಶ್ರೀ ಎಂ. ರಘುಪತಿ.—ಇಂದು ಸಾಯಂಕಾಲ ಸಭೆ ಕರೆದಿದ್ದೇನೆ. ಇದು ಕಾರ್ಮಿಕ ಹಿತರಕ್ಷಣೆಗೆ ಕೆಲಸಮಾಡತಕ್ಕ ಸರ್ಕಾರ, ಕಾರ್ಮಿಕರ ವಾದವಿವಾದಗಳನ್ನು ಪರಿಹಾರ ಮಾಡುವುದಕ್ಕೆ ಸರ್ವ ಪ್ರಯತ್ನ ಮಾಡುತ್ತಿದ್ದೇವೆ. ಕಾರ್ಮಿಕರ ಮತ್ತು ಮ್ಯಾನೇಜ್‌ಮೆಂಟ್‌ನವರ ಮಧ್ಯೆ ಒಳ್ಳೆಯ ವಾತಾವರಣ ಸುಮಧುರ ಬಾಂಧವ್ಯವುಂಟು ಮಾಡುವುದಕ್ಕೆ ಸರ್ಕಾರ ಸರ್ವ ಪ್ರಯತ್ನ ಮಾಡುತ್ತದೆ. ಮಾನ್ಯಸದಸ್ಯರುಗಳು ಪ್ರಮುಖ ವಾದ ವಿಷಯಗಳನ್ನು ಎತ್ತಿದ್ದಾರೆ. ಹಲವಾರು ವಿಷಯಗಳನ್ನು ಹೇಳಿದ್ದೀರಿ. ನಾನು ತಾವು ಹೇಳಿರತಕ್ಕ ವಿಷಯಗಳಿಗೆ ಉತ್ತರ ಹೇಳದಿದ್ದರೆ ತಮಗೆ ಲಿಖಿತ ಮೂಲಕ ಬರೆದು ಕಳುಹಿಸುತ್ತೇನೆ. ಮಾನ್ಯ ಅಧ್ಯಕ್ಷರಿಗೆ ಮತ್ತು ಎಲ್ಲಾ ಸದಸ್ಯರುಗಳಿಗೆ ವಂದಿಸಿ ನನ್ನ ಬೇಡಿಕೆಗೆ ಒಪ್ಪಿಗೆ ಕೊಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ.—ಕಾರ್ಮಿಕರ ಕನಿಷ್ಟವೇತನದ ವಿಚಾರದಲ್ಲಿ ಹೈಕೋರ್ಟ್ ಜೀವನಮಟ್ಟದಲ್ಲಿ ೫೦ ಪರ್ಸೆಂಟ್ ಹೆಚ್ಚಳವಾಗಿದೆ ಅದಕ್ಕೆ ಇದನ್ನು ಕೊಡಿಸಬೇಕೆಂದು ಹೇಳಿದ್ದಾರೆ, ಹೆಚ್ಚಳವಾದ ೫೦ ಪರ್ಸೆಂಟ್ ಕನಿಷ್ಟವೇತನ ಕಾರ್ಮಿಕ ರಂಗಕ್ಕೆ ಕೊಟ್ಟಿಲ್ಲ, ಅದರ ವರದಿಬೇಕು. ದಿನಾಂಕ ೧೪–೭–೮೩ರಂದು ಮಾನ್ಯ ಅಜೀಜ್‌ಸೇಠ್‌ರವರು ೩೫ ಮಿಲ್‌ಗಳ ಕಾರ್ಮಿಕರ ಬೇಡಿಕೆಯ ಬಗ್ಗೆ ಒಂದು ತೀರ್ಮಾನ ಮಾಡಿದ್ದಾರೆ. at the rate of hundred ಅದನ್ನು ೧–೧–೮೨ ರಿಂದ ಆರಿಯರ್ಸ್‌ನ್ನು ದಿನಾಂಕ ೧–೭–೮೩ ರಂದು ಕೊಡಿಸುತ್ತೇವೆಂದು ಹೇಳಿದ್ಧಾರೆ.

ಶ್ರೀ ಪಂಪಾಪತಿ.—ಒಟ್ಟು ೧೦೦ ರೂಪಾಯಿಗಳನ್ನು ಕೊಡಬೇಕೆಂದು ಹೇಳಿದ್ದಾರೆ.

ಶ್ರೀ ಎಂ. ವೀರಪ್ಪಮೊಯಿಲಿ.—ಅದರ ಬಗ್ಗೆ ಇದುವರೆಗೆ ಕ್ರಮ ತೆಗೆದುಕೊಂಡಿಲ್ಲ. ೩೫ ಮಿಲ್‌ಗಳ ಕಾರ್ಮಿಕರಿಗೆ ಸಂಬಂಧಪಟ್ಟಹಾಗೆ ಏನು ಮಾಡುತ್ತೀರಿ ಎಂಬುದನ್ನು ದಯಮಾಡಿ ತಿಳಿಸಬೇಕು.

ಶ್ರೀ ಎಂ. ರಘುಪತಿ.—ನಾನು ಸಭೆ ಕರೆದು ತೀರ್ಮಾನ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಮಂತ್ರಿಗಳು ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಕೆಲವು ಧೋರಣೆಗಳ ಬಗ್ಗೆ ಪ್ರಶ್ನೆ ಕೇಳಿದ್ದೇನೆ. ಅನೇಕ ಕೇಸುಗಳು ಹೈಕೋರ್ಟ್‌ಗೆ ಹೋದ ತಕ್ಷಣ.

ಶ್ರೀ ಎಂ. ರಘುಪತಿ.—ಇದರ ಬಗ್ಗೆ ನಾನು ಒಂದು ವಿಷಯ ಮರೆತಿದ್ದೆ ಹೇಳುತ್ತೇನೆ, ಏನೆಂದರೆ ಹೈಕೋರ್ಟ್‌ನಲ್ಲಿ ಕೇಸುಗಳು ಹೆಚ್ಚಾಗಿವೆ. ಈಗ ಒಬ್ಬರು ಗೌರ್ನಮೆಂಟ್ ಪ್ಲೀಡರ್ ಇದ್ದಾರೆ. ಇನ್ನೊಬ್ಬರನ್ನೂ ಹೆಚ್ಚು ಮಾಡುವುದಕ್ಕೆ ಸರ್ವಪ್ರಯತ್ನ ಮಾಡುತ್ತಿದ್ದೇವೆ. 'ನ್ಯಾಯಪೀಠ' ಏರ್ಪಾಟು ಮಾಡುವುದಕ್ಕೆ ಸಂಬಂಧಪಟ್ಟ ಇಲಾಖೆಯ ಸಂಪರ್ಕ ಬೆಳೆಸಿ ಸಾಧ್ಯಸಾಧ್ಯತೆಯನ್ನು ನೋಡಿಕೊಂಡು ಏರ್ಪಾಟು ಮಾಡುವುದಕ್ಕೆ ಸರ್ವಪ್ರಯತ್ನ ಮಾಡುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ತಮಗೆ ಗೊತ್ತಿರುವಹಾಗೆ ವಾದ ವಿವಾದಗಳಲ್ಲಿ ಮಾತುಕತೆ ನಡೆಸಿದಾಗ ಸರಿಯಾದ ಅಂಕಿಅಂಶಗಳು ಸಿಗುವುದಿಲ್ಲ. ನಿಮ್ಮ ಅಂಕಿಅಂಶಗಳ ಸೆಕ್ಷನ್ ಏನಿದೆ ಅದು ಅಂಕಿಅಂಶಗಳನ್ನು ಸರಿಯಾಗಿ ಕಲೆಕ್ಟ್ ಮಾಡುತ್ತಿಲ್ಲ. ಅಂಕಿಅಂಶಗಳನ್ನು ಸರಿಯಾಗಿ ಕಲೆಕ್ಟ್ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಈ ರೀತಿ ಮಾಡಿದರೆ ಮಾಲೀಕರಿಗೆ ಅನುಕೂಲವಾಗುತ್ತದೆ. ಕಾರ್ಮಿಕರಿಗೆ ಅನುಕೂಲವಾಗುತ್ತದೆಂದು ಸಲಹೆ ಇತ್ತು; ಕೋರ್ಟ್‌ನಲ್ಲಿ ಕೇಸುಗಳು ಇರುವಾಗ ಕಾರ್ಮಿಕರಿಗೆ ರಿಲೀಫ್ ಕೊಡಬೇಕು. ತಮಿಳುನಾಡಿನಲ್ಲಿ ಈ ಒಂದು ವ್ಯವಸ್ಥೆ ಮಾಡಿದ್ದಾರೆ. ಆ ರೀತಿ ಮಾಡಿ ಎಂದು ಸೂಚನೆ ಕೊಟ್ಟಿದ್ದೇವೆ, ಇದನ್ನು ತಮ್ಮ ಗಮನಕ್ಕೆ ತೆಗೆದುಕೊಳ್ಳಬೇಕು.

ರಾಜ್ಯಸರ್ಕಾರದ ಕೈಗಾರಿಕೆ, ಇನ್ನೂ ಅನೇಕ ಕೈಗಾರಿಕೆಗಳ ಪರಿಸ್ಥಿತಿ ಬಹಳ ಹದಗೆಟ್ಟಿದೆ. 'ಕರ್ನಾಟಕ ಸೋಪ್ ಅಂಡ್ ಡಿಟರ್ಜೆಂಟ್ ಫ್ಯಾಕ್ಟರಿ' ಬಹಳ ಹದಗೆಟ್ಟಿದೆ. ಅದು ೫೬ ದಿನಗಳ ಕಾಲ ಲಾಕ್‌ಔಟ್ ಆಯಿತು. ಹಿಂದಿನ ಮುಖ್ಯಕಾರ್ಯದರ್ಶಿಯವರು ಆ ಫ್ಯಾಕ್ಟರಿಗೆ ಛೇರ್ಮನ್‌ರು, ಅವರು ಬಹಳ ಹತ ಮಾಡಿದರು ಸೋಪ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡತಕ್ಕ ಕಾರ್ಮಿಕರು ಏನಾಗಬೇಕು ? ಅಲ್ಲಿಯ ನೌಕರರಿಗೆ ಸಿಕ್ಕಾಪಟ್ಟೆ ಕಿರುಕುಳ ಕೊಡುತ್ತಿದ್ದರು. ಅಂತಹವರಿಗೆಲ್ಲಾ ಕಿವಿ ಹಿಂಡುತ್ತೀರಾ ?

ಶ್ರೀ ಎಂ. ರಘುಪತಿ.—ವಾದವಿವಾದಗಳ ಬಗ್ಗೆ ಮಾತುಕತೆ ನಡೆಸಿದ ಅಂಕಿಅಂಶಗಳನ್ನು ತಿಳಿಯಪಡಿಸುವ ಸೆಂಟ್ರಲ್ ಬ್ಯೂರೋ ಸಿಮ್ಲಾದಲ್ಲಿದೆ. ತಮಿಳುನಾಡಿನಲ್ಲಿರತಕ್ಕ ಎಲ್ಲಾ ಕಾಯಿದೆ ಗಳನ್ನು ಇಲ್ಲಿ ಅಳವಡಿಸಿಕೊಂಡರೆ ಕಾರ್ಮಿಕರಿಗೆ ಬಹಳ ಅನ್ಯಾಯವಾಗುತ್ತದೆ.

ಶ್ರೀ ಎಸ್. ಸೂರ್ಯನಾರಾಯಣರಾವ್.—ಎರಡು–ಮೂರು ನೀತಿ ಪ್ರಶ್ನೆಗಳ ಬಗ್ಗೆ ಸರಿಯಾದ ಉತ್ತರ ಬರಲಿಲ್ಲ. ಮಂತ್ರಿಗಳು ಸುಮಧುರ ಬಾಂಧವ್ಯ ವಾತಾವರಣದ ಬಗ್ಗೆ ಹೇಳಿದ್ದಾರೆ. ಲೇಬರ್ ಡಿಸ್‌ಪ್ಯೂಟ್‌ನಲ್ಲಿ ಪೋಲೀಸ್‌ನವರು ಮತ್ತು ಕಾರ್ಮಿಕರ ಮಧ್ಯೆ ಸುಮಧುರ ವಾತಾವರಣಕ್ಕೆ ಅಡ್ಡಿಯಾಗಿದೆ. ಕಾರ್ಮಿಕರು ಮುಷ್ಕರ ಮಾಡುವಾಗ ಮಾಲೀಕರು ಬಹಳಷ್ಟು ಪೋಲೀಸವರನ್ನು ಗೇಟ್‌ನಲ್ಲಿ ಹಾಕುತ್ತಾರೆ. ಇದರ ಬಗ್ಗೆ ತಮ್ಮ ಅಭಿಪ್ರಾಯವೇನು ? ಲಕ್ಷಾಂತರ ಕಾರ್ಮಿಕರಿಗೆ ಪ್ರತಿದಿನ ಬಹಳ ಮೋಸವಾಗುತ್ತಿದೆ. ಪಶ್ಚಿಮ ಬಂಗಾಳ, ಮಹಾರಾಷ್ಟ್ರದಲ್ಲಿರುವ ತರಹ ಒಂದೊಂದು ಕಮಿಟಿ ಪ್ರಾರಂಭಮಾಡುವುದಕ್ಕೆ ತಮ್ಮ ಸರ್ಕಾರದಿಂದ ಪ್ರತಿಕ್ರಿಯೆ ಬರಲಿಲ್ಲ. ಸ್ಟ್ಯಾಂಡಿಂಗ್ ಆರ್ಡರ್ ಪ್ರಕಾರ ನೋಟೀಸ್ ಕೊಡದೆ ಕಾರ್ಮಿಕರನ್ನು ಡಿಸ್‌ಮಿಸ್ ಮಾಡಬಾರದು. ಆದರೆ ಮೈಕೋ ಕಾರ್ಮಿಕರ ಮುಖಂಡರನ್ನು ಆರೀತಿ ನೋಟೀಸ್ ಕೊಡದೆ ಡಿಸ್‌ಮಿಸ್ ಮಾಡುತ್ತಾರೆ ಆದ್ದರಿಂದ ಕಾರ್ಮಿಕರನ್ನು ಮಾಲೀಕರು ಡಿಸ್‌ಮಿಸ್ ಮಾಡದ ಹಾಗೆ ತಡೆಗಟ್ಟಲಿಕ್ಕೆ ತಮ್ಮ ಸರ್ಕಾರದ ನೀತಿಯೇನು ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಎಂ. ರಘುಪತಿ.—ಪಶ್ಚಿಮ ಬಂಗಾಳದಲ್ಲಿ ಯಾವ ಕಾನೂನು ಇದೆಯೋ ಅದು ನನಗೆ ಗೊತ್ತಿಲ್ಲ. ಪಶ್ಚಿಮ ಬಂಗಾಳದಲ್ಲಿ ಏನಿದೆ, ಮಹಾರಾಷ್ಟ್ರದಲ್ಲಿ ಏನಿದೆ ಎಂದು ಎಲ್ಲಾ ತರಿಸಿಕೊಂಡು ಅದನ್ನು ಇಲ್ಲಿ ಜಾರಿ ಮಾಡುವುದಕ್ಕೆ ಸಾಧ್ಯವೇ ಎನ್ನುವುದನ್ನು ನೋಡಿ ಸಾಧ್ಯವಿದ್ದರೆ ಇಲ್ಲೂ ಮಾಡೋಣ. ಮಾನ್ಯ ಸೂರ್ಯನಾರಾಯಣರಾವ್ ಅವರು ಪೋಲೀಸ್‌ನವರ ಬಗ್ಗೆ ಹೇಳಿದ್ದಾರೆ, ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಕಾರ್ಮಿಕರ ಕ್ಷೇತ್ರದಲ್ಲಿ ಚಾಕು ಚೂರಿಯ ಪ್ರವೃತ್ತಿ ಸಂಪೂರ್ಣವಾಗಿ ಬಂದ್ ಆಗಿದೆ. ಯಾವವಿಧದಲ್ಲೂ ಅದಕ್ಕೆ ಅವಕಾಶ ಕೊಡುವುದಿಲ್ಲ. ಪೋಲೀಸ್‌ನ ವರನ್ನು ಎಲ್ಲಿ ಅಗತ್ಯವಿದೆಯೋ ಅಲ್ಲಿ ಮಾತ್ರ ಅಳವಡಿಸುತ್ತೇವೆ. ಬೇರೆ ಕಡೆ ಅಳವಡಿಸುವುದಿಲ್ಲವೆಂದು ತಮಗೆ ನಾನು ಭರವಸೆಯನ್ನು ಕೊಡುತ್ತಿದ್ದೇನೆ.

ಶ್ರೀ ಎಸ್. ಸೂರ್ಯನಾರಾಯಣರಾವ್.—೧೦–೧೨ ವರ್ಷ ಸೇವೆ ಸಲ್ಲಿಸಿರುವ ಕಾರ್ಮಿಕರನ್ನು ಯಾವುದೇ ನೋಟಿಸ್ ಕೊಡದೆ ಡಿಸ್‌ಮಿಸ್ ಮಾಡುತ್ತಿದ್ದಾರೆ.

ಶ್ರೀ ಎಂ. ರಘುಪತಿ.—ಕಾರ್ಮಿಕ ಮುಖಂಡರ ಸಭೆ ಕರೆಯುತ್ತಿದ್ದೇನೆ. ಆ ಸಭೆಯಲ್ಲಿ ಇದನ್ನು ಚರ್ಚೆ ಮಾಡಲಾಗುತ್ತದೆ.

† ಶ್ರೀ ವಿ. ಧನಂಜಯ ಕುಮಾರ್.—ಮಾನ್ಯ ಮಂತ್ರಿಗಳು ಮಾತನಾಡುತ್ತಾ, 'ಮೇ' ದಿನಾ ಚರಣೆಯನ್ನು ಕಾರ್ಮಿಕರ ದಿನಾಚರಣೆಯನ್ನಾಗಿ ಆಚರಿಸುತ್ತೇವೆ, ಇದರ ಬಗ್ಗೆ ಕೇಂದ್ರ ಸರ್ಕಾರಕ್ಕೆ ಬರೆದಿದ್ದೇವೆ ಎಂದು ಹೇಳಿದರು. ನನ್ನ ಪ್ರಶ್ನೆ ಏನೆಂದರೆ, 'ಮೇ' ದಿನಾಚರಣೆಯನ್ನು ಕಾರ್ಮಿಕರ ದಿನಾಚರಣೆಯನ್ನಾಗಿ ಆಚರಿಸುವುದಕ್ಕೆ ಹಿನ್ನೆಲೆಯಾದರೂ ಏನು ? ಇದಕ್ಕೆ ಬದಲಾಗಿ ನಮ್ಮದೇ ಆದಂಥ ವಿಶ್ವಕರ್ಮ ದಿನಾಚರಣೆಯನ್ನು ಆಚರಿಸುವ ಆಲೋಚನೆ ಮಾಡುತ್ತೀರಾ ?

ಶ್ರೀ ಎಸ್. ಸೂರ್ಯನಾರಾಯಣರಾವ್.—ಗುಡಿ ಕೈಗಾರಿಕೆಗೆ ಹೋಗಬೇಕು.

ಶ್ರೀ ಎಂ.ಎಸ್. ಕೃಷ್ಣನ್.—ವಿಷಯ ಗೊತ್ತಿಲ್ಲದೆ ಅವರ ಮಾತನಾಡುತ್ತಾ ಇದ್ದಾರೆ.

---

† ಈ ಚಿಹ್ನೆಯು ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಶ್ರೀ ವಿ. ಧನಂಜಯಕುಮಾರ್.—ಕಮ್ಯುನಿಸ್ಟರು ಇಲ್ಲಿ ಇರಲಿಕ್ಕೆ ಅನರ್ಹರು, ರಷ್ಯಾಕ್ಕೆ ಹೋಗಬೇಕು. ಇದರ ಬಗ್ಗೆ ಸರ್ಕಾರದ ನೀತಿ ಏನು ಎಂದು ಕೇಳುತ್ತೇನೆ. ಇನ್ನೊಂದು ವಿಚಾರ ವೇನೆಂದರೆ, ಇದು ಕಾರ್ಮಿಕರ ಸಮುದಾಯದಲ್ಲಿರುವಂಥ ವರ್ಗ ಸಂಘರ್ಷ ಎಂದು ಹೇಳಿದರು. ಸರ್ಕಾರದ ನೀತಿ ವರ್ಗ ಸಂಘರ್ಷವೇ ? ಅಥವಾ ವರ್ಗ ಸಮನ್ವಯವೇ. ಇದಕ್ಕೆ ಮಾನ್ಯ ಮಂತ್ರಿ ಗಳು ಉತ್ತರ ಕೊಡಬೇಕು. ಮತ್ತೆ ಫ್ಯಾಕ್ಟರೀಸ್‌ನಲ್ಲಿ ಬಹಳ ಆಕ್ಸಿಡೆಂಟ್ಸ್ ಏನಾಗಿದೆ ಅದರ ಬಗ್ಗೆ ಕಾಳಜಿ ವ್ಯಕ್ತ ಮಾಡಿದರು. ನಾನೂ ಕೂಡ ಸರ್ಕಾರವನ್ನು ವಿನಂತಿ ಮಾಡಿಕೊಳ್ಳುತ್ತೇನೆ. ಏನೆಂದರೆ ಫ್ಯಾಕ್ಟರೀಸ್‌ನಲ್ಲಿ ಆದಂಥ ಆಕ್ಸಿಡೆಂಟ್ಸ್ ಬಗ್ಗೆ ಕೂಲಂಕುಷವಾಗಿ ತನಿಖೆ ನಡೆಯಲಿ ಎಂದು.

ಅಧ್ಯಕ್ಷರು.—ಅದಕ್ಕೆ ಅವರು ಒಪ್ಪಿಕೊಂಡಿದ್ದಾರೆ.

ಶ್ರೀ ವಿ. ಧನಂಜಯಕುಮಾರ್.—ಮತ್ತೆ ಇನ್ಸ್‌ಪೆಕ್ಟೋರೇಟ್ ಆಫ್ ಫ್ಯಾಕ್ಟರೀಸ್ ಅಂಡ್ ಬಾಯ್ಲರ್ಸ್ ಬಗ್ಗೆ ಮಾತನಾಡುವಾಗ ಹೇಳಿದರು. ಈ ವಿಷಯ ಇವತ್ತು ಕೋರ್ಟಿನ ಮುಂದೆ ಇರುವುದರಿಂದ ಸರ್ಕಾರದ ಕೈ ಕಟ್ಟಿದೆ ಎಂದು. ಕೋರ್ಟಿನ ಮುಂದೆ ಇರುವಂಥಾದ್ದು ಒಬ್ಬ ಅಧಿಕಾರಿಯ ಬಗ್ಗೆ ಮಾತ್ರ. ರಾಮದಾಸ್ ಬಗ್ಗೆ ಯಾವುದೇ ತಕರಾರು, ತನಿಖೆಗೆ ಬಾಕಿ ಇಲ್ಲ, ನಾನು ಸ್ಪಷ್ಟವಾಗಿ ಕೇಳಿದ್ದೇನೆ. ರಾಮದಾಸ್‌ಗೆ ಸಂಬಂಧಪಟ್ಟಂಥ ಕೇಸು ೧೯೭೦ನೇ ಇಸವಿಯಿಂದ ಇದುವರೆಗೆ ಸುಪ್ರೀಂ ಕೋರ್ಟಿನಲ್ಲಿ ಬಾಕಿ ಇದ್ದಂಥ ಕೇಸನ್ನು ಏಕಾಏಕಿ ಸರ್ಕಾರದವರು ವಾಪಸ್ಸು ತೆಗೆದುಕೊಂಡಿದ್ದಾರೆ, ಇದಕ್ಕೆ ಕಾರಣವೇನೆಂದು ನಾನು ಸ್ಪಷ್ಟವಾಗಿ ಕೇಳಿದ್ದೇನೆ. ಅವರು ಕಾರಣ ವನ್ನು ತಿಳಿಸಲಿಲ್ಲ. ಆದ್ದರಿಂದ ಇವರು ಇದನ್ನು ಮರೆಮಾಚುತ್ತಿದ್ದಾರೆ ಎನ್ನುವ ಸಂಶಯ ಮತ್ತಷ್ಟು ಬಲಗೊಳ್ಳುತ್ತಿದೆ, ಇದರಲ್ಲಿ ಏನೋ ಮೋಸ ನಡೆದಿದೆ. ಇದರ ಬಗ್ಗೆ ತನಿಖೆ ನಡೆಸುತ್ತೇ ವೆಂದು ಹೇಳಿದರು. ನಾನು ಸಂಬಂಧಪಟ್ಟ ಮಂತ್ರಿಗಳ ಮೇಲೆ ಸ್ಪಷ್ಟವಾದ ಆರೋಪ ಮಾಡಿದ್ದೇನೆ, ಸಂಬಂಧಪಟ್ಟ ಮಂತ್ರಿಗಳು ತಪ್ಪುಮಾಡಿದ್ದಾರೆಂದು ಸ್ಪಷ್ಟವಾದ ಆರೋಪ ಮಾಡಿದೆ. ಹಾಗಿರುವಾಗ ಅವರೇ ತನಿಖೆ ನಡೆಸಲಿಕ್ಕೆ ಸಾಧ್ಯವೇ ? ಅದಕ್ಕೋಸ್ಕರ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಈ ಸದನದ ಒಂದು ಸಮಿತಿಯನ್ನು ರಚನೆ ಮಾಡಬೇಕು ಸಂಬಂಧಪಟ್ಟ ಫೈಲುಗಳನ್ನು ತರಿಸಬೇಕು, ಇಲ್ಲಿ ಅದರ ಬಗ್ಗೆ ಸಮಗ್ರ ತನಿಖೆಯಾಗಬೇಕು ಎಂದು ನಾನು ಕೇಳಿಕೊಂಡಿದ್ದೇನೆ. ಇದು ಬಹಳ ಸೂಕ್ಷ್ಮವಾದ ಮತ್ತು ಗಹನವಾದ ವಿಚಾರ. ಇದರ ಬಗ್ಗೆ ನನ್ನ ಭಾಷಣದಲ್ಲಿ ಸ್ಪಷ್ಟವಾಗಿ ಹೇಳಿದ್ದೇನೆ. ಸುಮಾರು ೨೦ ಕೋಟಿ ರೂಪಾಯಿಗಳ ನಿರ್ವಹಣೆ ಮಾಡತಕ್ಕ ಬಗ್ಗೆ ಮಂತ್ರಿ ಕೈಗೆ ಅಧಿಕಾರ ಕೊಡುತ್ತಿದ್ದೀರಿ, ಕರ್ನಾಟಕದ ಜನತೆಗೆ ಇದು ತಿಳಿಯಬೇಕಾಗಿದೆ, ಅವರಿಗೆ ನ್ಯಾಯ ಸಿಗಬೇಕಾಗಿದೆ ಎಂದು ಹೇಳಿದ್ದೇನೆ.

ಅಧ್ಯಕ್ಷರು.—೧ ಗಂಟೆ ೩೫ ನಿಮಿಷ ಈ ಬೇಡಿಕೆಗೆ ತೆಗೆದುಕೊಂಡಿದೆ, ಇನ್ನೂ ಅನೇಕ ಜನ ಕೇಳುವವರಿದ್ದಾರೆ, ದಯಮಾಡಿ ಮುಗಿಸಿ.

ಶ್ರೀ ಎಸ್. ಸೂರ್ಯನಾರಾಯಣರಾವ್.—ಅವರು ೪೫ ನಿಮಿಷ ಮಾತನಾಡಿದ್ದಾರೆ.

ಶ್ರೀ ವಿ. ಧನಂಜಯಕುಮಾರ್.—ನಾನು ಹೇಳುವುದನ್ನು ಕೇಳುವುದಕ್ಕೆ ಅವರಿಗೆ ತಾಳ್ಮೆ ಇಲ್ಲ. ನಾನು ಸ್ಪಷ್ಟವಾಗಿ ಕೇಳಿದ್ದೇನೆ. ಈ ವಿಚಾರಗಳನ್ನು ಮರೆಮಾಚುತ್ತಾ ಇದ್ದಾರೆ ಎನ್ನತಕ್ಕ ಆರೋಪ ಮಾಡಿದೆ. ನಾನು ಒಂದು ಕೇಳಿಕೆಯನ್ನು ಕೇಳಿಕೊಂಡಿದ್ದೇನೆ. ಸಂಬಂಧಪಟ್ಟ ಫೈಲುಗಳನ್ನು ಸದನದ ಮುಂದೆ ಮಂಡಿಸಲಿಕ್ಕೆ ಒಪ್ಪಿಗೆ ಕೊಡದೇ ಇದ್ದರೆ ನಾನು ಸ್ಪಷ್ಟವಾಗಿ ಆರೋಪ ಮಾಡ ಬೇಕಾಗುತ್ತದೆ. ಭ್ರಷ್ಟರಾದಂಥ ಮಂತ್ರಿಯನ್ನು ರಕ್ಷಿಸಲಿಕ್ಕೆ ಈ ರೀತಿ ಮಾಡುತ್ತಾ ಇದ್ದಾರೆ ಎಂದು ಈ ಸಂದರ್ಭದಲ್ಲಿ ಹೇಳಬೇಕಾಗಿದೆ, ಇದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕು. ಆ ಮಂತ್ರಿಯವರ ಕೈಯಲ್ಲಿ ನ್ಯಾಯ ಸಿಗುವಂಥ ಸಂದರ್ಭ ಇಲ್ಲ ಎಂದು ನಾನು ಮತ್ತೊಮ್ಮೆ ಒತ್ತಿ ಹೇಳಬೇಕಾಗಿದೆ.

ಶ್ರೀ ಎಂ. ರಘುಪತಿ.—ಈ ಖಾತೆಯಲ್ಲಿ ಇರತಕ್ಕ ಮಂತ್ರಿಗಳು ಯಾವ ವಿಧವಾದಂಥ ಭ್ರಷ್ಟಾಚಾರವನ್ನು ನಡೆಸಿಲ್ಲ, ಮಂತ್ರಿಗಳು ಸ್ಪಷ್ಟವಾದಂಥ ನಿಲುವನ್ನು ತೆಗೆದುಕೊಂಡಿದ್ದಾರೆ. ರಾಮದಾಸ್ ಕೇಸನ್ನು ಏನು ವಾಪಸ್ ಪಡೆದಿದ್ದಾರೆ ಅದನ್ನು ಸರ್ಕಾರದ ಮಿತಿಯೊಳಗೆ ಮಾಡಿದ್ದಾರೆಯೇ ಹೊರತು ಸರ್ಕಾರದ ನೀತಿಯ ಪರಿಮಿತಿಯನ್ನು ಬಿಟ್ಟು ಹೋಗಿಲ್ಲ. ಮಾನ್ಯ ಅಜೀಜ್ ಸೇಠ್ ಅವರು ದಕ್ಷತೆಯಿಂದ ಈ ಖಾತೆಯನ್ನು ನಿರ್ವಹಿಸಿದ್ದಾರೆ. ಅವರು ಕಾರ್ಮಿಕರಿಗೆ ಹೆಚ್ಚಿನ ಸೌಲಭ್ಯಗಳನ್ನು ಕೊಡಿಸುವುದಕ್ಕೆ ಸರ್ವ ಪ್ರಯತ್ನಗಳನ್ನು ಮಾಡಿದ್ದಾರೆ.

ಶ್ರೀ ವಿ. ಧನಂಜಯಕುಮಾರ್.—ಸಂಬಂಧಪಟ್ಟ ಫೈಲುಗಳನ್ನು ಸದನದ ಮುಂದೆ ಮಂಡಿಸಿ, ಅದು ಜನತೆಗೆ ಗೊತ್ತಾಗಲಿ.

ಶ್ರೀ ಎಂ. ರಘುಪತಿ.—ಭ್ರಷ್ಟಾಚಾರ ನಡೆಯುತ್ತಾ ಇಲ್ಲ ಎಂದು ಹೇಳುತ್ತಾ ಇದ್ದೇನೆ.

ಶ್ರೀ ಪಂಪಾಪತಿ.—ನಾವು ಕೇಳುವ ಪ್ರಶ್ನೆಗಳಿಗೆ ಮಾನ್ಯ ಮಂತ್ರಿಗಳು ಉತ್ತರ ಹೇಳಲಿ. ಫೈಲುಗಳನ್ನು ಆಮೇಲೆ ನೋಡಿಕೊಳ್ಳೋಣ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಸದಸ್ಯರಾದ ಧನಂಜಯಕುಮಾರ್‌ರವರು ಇದರಲ್ಲಿ ಭ್ರಷ್ಟಾಚಾರ ಇದೆ, ಇದು ಸರ್ಕಾರದ ನೀತಿಯೋ ಎಂದು ಕೇಳಿದ್ದಾರೆ. ಸರ್ಕಾರದ ನೀತಿ ಭ್ರಷ್ಟಾಚಾರವೇ. ತಮಗೆ ಬೆಂಬಲ ಕೊಡುವವರು ಭ್ರಷ್ಟಾಚಾರದ ಆರೋಪ ಮಾಡಿದ್ದಾರೆ.

ಶ್ರೀ ಎಂ. ರಘುಪತಿ.—ಇದರಲ್ಲಿ ಯಾವ ವಿಧವಾದ ಅವ್ಯವಹಾರ ನಡೆದಿಲ್ಲ, ಇದರ ಬಗ್ಗೆ ಯಾವ ಸಂಶಯವೂ ಬೇಡ, ಯಾವ ಸಂಶಯಕ್ಕೂ ಎಡೆಕೊಡಬೇಕಾದ್ದಿಲ್ಲ ಎಂದು ಹೇಳುತ್ತೇನೆ. ಮತ್ತೆ ಫೈಲುಗಳನ್ನು ತರಿಸುವ ಅವಶ್ಯಕತೆ ಇಲ್ಲ.

ಶ್ರೀ ಹೆಚ್. ಗಂಗಾಧರನ್.—ಫೈಲುಗಳನ್ನು ತರಿಸುವ ಅವಶ್ಯಕತೆ ಇಲ್ಲ ಅಂದರೆ ಇದನ್ನು ಮುಚ್ಚಿಡುತ್ತಿದ್ದೀರಿ ಎಂದು ಅರ್ಥವಾಗುತ್ತದೆ.

† ಶ್ರೀ ಮಲ್ಲಪ್ಪ.—ಸರ್ಕಾರ ಈಗಾಗಲೇ ಸಂಘಟಿತ ಕಾರ್ಮಿಕರ ಬಗ್ಗೆ ಯೋಚನೆ ಮಾಡಿ ಆಯಿತು. ಇತ್ತೀಚೆಗೆ ನಮ್ಮ ರಾಜ್ಯದ ಅಧಿಕಾರ ವರ್ಗದವರು ಬೇಜವಾಬ್ದಾರಿಯಿಂದ ವರ್ತನೆ ಮಾಡುತ್ತಾ ಇದ್ದಾರೆ ಕಿರಾಣಿ ಅಂಗಡಿ, ಬಟ್ಟೆ ಅಂಗಡಿ, ಕಬ್ಬಿಣದ ಅಂಗಡಿ ಕೆಲಸಗಾರರ ಬಗ್ಗೆ ಅವರು ಕನಿಷ್ಟ ವೇತನದಲ್ಲಿ ಬಂದಿಲ್ಲ, ಆದ್ದರಿಂದ ಅವರ ಬಗ್ಗೆ ಕ್ರಮ ತೆಗೆದುಕೊಳ್ಳಲಿಕ್ಕೆ ಆಗುವುದಿಲ್ಲ ಎನ್ನತಕ್ಕ ರೀತಿಯಲ್ಲಿ ಅಧಿಕಾರಿಗಳು ವರ್ತನೆ ಮಾಡುತ್ತಿದ್ದಾರೆ. ಹೀಗಾಗಿ ಆ ಕಾರ್ಮಿಕರ ಬೇಡಿಕೆಯನ್ನು ಈಡೇರಿಸದೇ ಇರತಕ್ಕ ಸಂದರ್ಭವಿದೆ. ಆದುದರಿಂದ ಸರ್ಕಾರ ಈ ಬಗ್ಗೆ ಏನು ಕ್ರಮಗಳನ್ನು ತೆಗೆದುಕೊಳ್ಳಲಿಕ್ಕೆ ಪ್ರಯತ್ನ ಮಾಡುತ್ತಿದೆ ಎಂದು ಕೇಳುತ್ತೇನೆ. ಮತ್ತೆ ಇವತ್ತು ಖುಷ್ಕಿ ಜಮೀನಿನಲ್ಲಿ ಕೆಲಸ ಮಾಡತಕ್ಕ ಕೃಷಿ ಕಾರ್ಮಿಕರ ಜೀವನ ಪರಿಸ್ಥಿತಿ ಬಹಳ ಶೋಚನೀಯವಾಗಿದೆ. ಇವತ್ತು ನಗರ ಪ್ರದೇಶದಲ್ಲಿರತಕ್ಕ ಕಾರ್ಮಿಕರ ಬಗ್ಗೆ ಸರ್ಕಾರ ಚಿಂತನೆ ಮಾಡಿದೆ. ಆದರೆ ಖಾಸಗಿ ಜಮೀನಿನಲ್ಲಿ ಕೆಲಸ ಮಾಡತಕ್ಕಂಥ ಕೃಷಿ ಕಾರ್ಮಿಕರಿಗೆ ಇವತ್ತಿಗೂ ಒಂದು ರೂಪಾಯಿ, ಎರಡು ರೂಪಾಯಿಗಳ ದಿನಗೂಲಿ ಇದೆ. ಇದರಿಂದ ಅವರ ಜೀವನ ಪರಿಸ್ಥಿತಿ ಯಾವ ಮಟ್ಟದಲ್ಲಿದೆ ಎನ್ನುವುದರ ಬಗ್ಗೆ ಸರ್ಕಾರ ಚಿಂತನೆ ಮಾಡಬೇಕಾಗಿದೆ. ಮಾನ್ಯ ಅಧ್ಯಕ್ಷರಿಗೆ ಇದರ ಬಗ್ಗೆ ಅರಿವುಂಟು. ಪ್ಲಾಂಟೇಷನ್‌ನಲ್ಲಿ ಕೆಲಸ ಮಾಡತಕ್ಕ ಕಾರ್ಮಿಕರಿಗೆ ಜಿಗಣೆಯಿಂದ ಆಗತಕ್ಕ ತೊಂದರೆ ಏನು ಎನ್ನುವುದು ತಮಗೆ ಗೊತ್ತಿದೆ. ಈ ಜಿಗಣೆಯಿಂದ ಉಂಟಾದ ಗಾಯಗಳಿಂದ ಅವರು ಜೀವನ ಪರ್ಯಂತ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಪ್ಲಾಂಟೇಷನ್ ಕಾರ್ಮಿಕರಿಗೆ ಜಿಗಣೆ ಹುಳುವಿನಿಂದ ಆಗತಕ್ಕ ಗಾಯಗಳು ಸಾಯುವವರೆಗೂ ಉಳಿಯತಕ್ಕ ಸಂದರ್ಭವಿದೆ. ಅವರಿಗೆ ವೈದ್ಯಕೀಯ ನೆರವು ಇಲ್ಲ, ವಸತಿ ಸೌಕರ್ಯವಿಲ್ಲ. ಹೀಗಾಗಿ ಪ್ಲಾಂಟೇಷನ್‌ನಲ್ಲಿ ಕೆಲಸ ಮಾಡತಕ್ಕ ಕಾರ್ಮಿಕರ ಜೀವಕ್ಕೆ ತೊಂದರೆಯುಂಟಾಗುವಂಥ ಪ್ರಸಂಗ ಇದೆ. ಆದುದರಿಂದ ಪ್ಲಾಂಟೇಷನ್ ಕಾರ್ಮಿಕರಿಗೆ ವೈದ್ಯಕೀಯ ನೆರವು ಮತ್ತು ವಸತಿ ಸೌಕರ್ಯವನ್ನು ಒದಗಿಸುವ ಬಗ್ಗೆ ಸರ್ಕಾರ ಪೂರ್ಣ ಮಾಹಿತಿಯನ್ನು ಕೊಡಬೇಕಾಗುತ್ತದೆ ಎಂದು ತಮ್ಮ ಮೂಲಕ ಅವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ರಘುಪತಿ.— ಯಾರು ಯಾರು ಅಧಿಕಾರಿಗಳು ಭ್ರಷ್ಟಾಚಾರ ಮಾಡುತ್ತಿದ್ದಾರೆ ಎನ್ನುವ ಬಗ್ಗೆ ಮಾನ್ಯ ಸದಸ್ಯರು ಪಟ್ಟಿ ಕೊಡಲಿ ಅಂಥವರ ಮೇಲೆ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಇನ್ನು ವೈದ್ಯಕೀಯ ಸೌಲಭ್ಯದ ಬಗ್ಗೆ ಹೇಳಿದ್ದಾರೆ ಅದನ್ನು ಒದಗಿಸಿಕೊಡುವುದಕ್ಕೆ ಏರ್ಪಾಡು ಮಾಡುತ್ತೇವೆ.

ಶ್ರೀ ಎಂ. ಮಾಣಿಕರಾವ್ ಪಾಟೀಲ್.— ಮಾನ್ಯ ಮಂತ್ರಿಯವರು ಕಾರ್ಮಿಕ ಸಂಘಟನೆಯಲ್ಲಿ ಚಾಕು ಚೂರಿ ಸಂಸ್ಕೃತಿಯನ್ನು ಪೂರ್ತಿಯಾಗಿ ನಿಲ್ಲಿಸಿಬಿಟ್ಟಿದ್ದೇವೆಂದು ಹೇಳುತ್ತಿದ್ದಾರೆ. ಬಹಳ ಸಂತೋಷದ ಸಂಗತಿ. ಆದರೆ ಒಂದು ವಿಷಯವನ್ನು ಹೇಳಬೇಕಾಗಿದೆ ಅದು ಏನೆಂದರೆ ಕೆಲವು ಟ್ರೇಡ್ ಯೂನಿಯನ್‌ರವರು ಈ ರಾಷ್ಟ್ರದಲ್ಲಿ ಆರ್ಥಿಕ ಉತ್ಪನ್ನ ಮಾಡುವ ಅನೇಕ ಭಾಗಗಳಲ್ಲಿ ಅನಾಹುತ, ಅಶಾಂತಿಯನ್ನುಂಟುಮಾಡುತ್ತಿದ್ದಾರೆ. ವೈಟ್‌ಫೀಲ್ಡ್‌ನಲ್ಲಿರತಕ್ಕ ಒಂದು ಫ್ಯಾಕ್ಟರಿಯನ್ನೇ ಸುಟ್ಟು

---

† ಈ ಚಿಹ್ನೆಯು ಸಂಬಂಧಪಟ್ಟ ಸದಸ್ಯರು ಟಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಹಾಕಿದ್ದಾರೆ, ಬೆಂಗಳೂರಿನಲ್ಲಿರುವ ಯಾವುದೇ ಕಾರ್ಖಾನೆಯಲ್ಲಿಯಾಗಲೀ ಕೆಂಪು ಬಾವುಟದವರ ಹಾವಳಿ ಜಾಸ್ತಿಯಾಗಿ ಹೋಗಿದೆ. ಎಲ್ಲಿ ಎಂದರೆ ಅಲ್ಲಿ ಕೆಂಪು ಬಾವುಟವನ್ನು ಹಾರಿಸುವಂಥಾ ಪರಿಸ್ಥಿತಿ ನಿರ್ಮಾಣ ವಾಗಿದೆ.

(ಗೊಂದಲ... ಗಲಾಟೆ...)

ಶ್ರೀ ಎಂ. ಪಂಪಾಪತಿ.— ನಮ್ಮ ಕೆಂಪು ಬಾವುಟದ ಬಗ್ಗೆ ನೀವು ಏತಕ್ಕೆ ಮಾತನಾಡುತ್ತೀರಿ?

(ಗೊಂದಲ ಗಲಾಟೆ)

ಶ್ರೀ ಎಂ. ಮಾಣಿಕರಾವ್ ಪಾಟೀಲ್.— Hon. Member is exciting himself. Is he responsible to create disorder in this country? If he is accepting this responsibility, let him raise objection. I am referring to some of the trade unions. I never charged anybody.

ಕೆಲವು ಟ್ರೇಡ್ ಯೂನಿಯನ್‌ರವರು ಇಂಥಾ ಒಂದು ಪರಿಸ್ಥಿತಿಯನ್ನು ನಿರ್ಮಾಣ ಮಾಡುವ ಸಲುವಾಗಿ ಇಷ್ಟರವಟ್ಟಿನ ರೀತಿಯಲ್ಲಿ ಮಾಡುತ್ತಿದ್ದಾರೆ, ಇದನ್ನು ಹತ್ತಿಕ್ಕುವ ಬಗ್ಗೆ ಕಾರ್ಮಿಕ ಮಂತ್ರಿಗಳವರು ಏನು ಮಾಡುತ್ತಾರೆ? ಅದನ್ನು ಹೇಳಬೇಕು. ಇನ್ನು ಎರಡನೆಯದಾಗಿ, ಅಧ್ಯಕ್ಷರೇ ನಿನ್ನೆ ದಿವಸ ಪತ್ರಿಕೆಯಲ್ಲಿ ಬಂದಿರತಕ್ಕದ್ದನ್ನು ತಾವು ಸಹ ಓದಿರಬಹುದು. ಅನೇಕ ವ್ಯಕ್ತಿಗಳು ರಾಜ್ಯ ಸರ್ಕಾರದ ಆಶ್ರಯದಲ್ಲಿರತಕ್ಕ ಟ್ರಾವಲ್ ಏಜೆನ್ಸಿಯವರಿಗೆ ದುಡ್ಡು ಕೊಟ್ಟು ಮೋಸ ಹೋಗಿದ್ದಾರೆ. ೬೦೦ ಜನರು... ಕೆಲಸದ ಸಂಬಂಧವಾಗಿ...

(ಗೊಂದಲ)

ಅಧ್ಯಕ್ಷರು.— ಆ ವಿಷಯ ಇದಕ್ಕೆ ಸಂಬಂಧವಿಲ್ಲ...

SRI MANIKA RAO PATIL.— Employment is concerned with labour.

MR. SPEAKER.— No.

SRI MANIK RAO PATIL.— It is very much related. It is concerned.

MR. SPEAKER.— No please.

SRI MANIK RAO PATIL.— It directly comes under Labour Ministry.

MR. SPEAKER.— No.

SRI MANIKRAO PATIL.— Let the Labour Minister deny.

(INTERRUPTIONS)

ಶ್ರೀ ಎಂ.ಮಾಣಿಕರಾವ್ ಪಾಟೀಲ್.—ಈ ಸದನಕ್ಕೆ ಮಾನ್ಯ ಸಚಿವರು ಒಂದು ಆಶ್ವಾಸನೆ ಕೊಡ ಬೇಕು. ಇದರಲ್ಲಿ ಯಾವುದೇ ತರಹದ ಹಸ್ತಕ್ಷೇಪವನ್ನು ಮಾಡುವುದಕ್ಕೆ ಹೋಗುವುದಿಲ್ಲ ಎಂದು ಹೇಳಿರಿ ಸುಮಾರು ೬೦೦ ಜನ ಈಗಾಗಲೇ ಏನು ಮೋಸ ಹೋಗಿದ್ದಾರೆ ಅವರಿಗೆ ಸರ್ಕಾರದವರು ನ್ಯಾಯ ವನ್ನು ಒದಗಿಸಿಕೊಡಬೇಕಾಗಿದೆ.

MR. SPEAKER.— It is nearing two hours for one demand.

ಶ್ರೀ ಪಂಪಾಪತಿ.— ಕನಿಷ್ಟ ಕೂಲಿ ನಿಗದಿ ಆಗಿದ್ದರೂ ಸಹ ಹತ್ತಿ ಗಿರಣಿಯಲ್ಲಿ ಕೂಲಿ ಕೆಲಸ ಮಾಡುತ್ತಿರುವವರಿಗೆ ಅದು ಸಿಗುತ್ತಿಲ್ಲ ಅಧಿಕಾರಿಗಳೂ ಸಹ ಇದರ ಬಗ್ಗೆ ಗಮನವನ್ನು ಹರಿಸುತ್ತಲೇ

ಇಲ್ಲ. ದಯಮಾಡಿ ಅಧಿಕಾರಿಗಳಿಗೆ ಇದರ ಬಗ್ಗೆ ಸೂಚನೆ ಕೊಡುತ್ತೀರಾ? ಮತ್ತೆ ರಾತ್ರಿ ಹೊತ್ತು ಗಿರಣಿಗಳಲ್ಲಿ ಹೆಣ್ಣು ಮಕ್ಕಳಿಂದ ಕೆಲಸ ಮಾಡಿಸಬಾರದೆಂದು ಕಾನೂನು ಇದ್ದರೂ ಸಹ ಕಾಯಿದೆಗೆ ವಿರುದ್ಧವಾಗಿ ಕೆಲಸ ತೆಗೆದುಕೊಳ್ಳುತ್ತಿದ್ದಾರೆ ಅಂಥವರ ಮೇಲೆ ಏನಾದರೂ ಕ್ರಮವನ್ನು ಕೈಗೊಳ್ಳುತ್ತೀರಾ? ಇನ್ನು ಮೇ ೧ನೇ ತಾರೀಖು ಕಾರ್ಮಿಕರ ದಿನಾಚರಣೆ ಎಂದು ಸರ್ಕಾರ ಘೋಷಣೆ ಮಾಡಿದೆ ಆದರೆ ಅವತ್ತಿನ ದಿವಸ ಕೂಲಿಯನ್ನು ಕೆಲವರು ಕೊಡುತ್ತಿಲ್ಲ.

ಅಧ್ಯಕ್ಷರು.— ಆಗಲೇ ಅದರ ಬಗ್ಗೆ ಮಾನ್ಯ ಸಚಿವರು ಉತ್ತರ ಹೇಳಿದ್ದಾರೆ.

ಶ್ರೀ ಎಂ. ರಘುಪತಿ.— 'ಮೇ' ದಿನಾಚರಣೆಯ ದಿವಸ ವೇತನವನ್ನು ಕೊಡಿಸುವುದಕ್ಕೆ ಏರ್ಪಾಡು ಮಾಡುತ್ತಿದ್ದೇವೆ. ಇನ್ನು ಮಾಣಿಕರಾವ್ ಪಾಟೀಲ್‌ರವರು ಪತ್ರಿಕೆಯಲ್ಲಿ ಏನು ಬಂದಿದೆ ಅದರ ಬಗ್ಗೆ ಪ್ರಸ್ತಾಪ ಮಾಡಿ ಹೇಳಿದ್ದಾರೆ.

ಶ್ರೀ ಎಂ. ವೀರಪ್ಪಮೊಯ್ಲಿ.— ತಾವು ಅದರ ಬಗ್ಗೆ ಏನಾದರೂ ಈಗಲೇ ಹೇಳುವ ಹಾಗಿದ್ದರೆ ನಾನು ಸಹ ಈಗಲೇ ಕೆಲವೊಂದು ವಿಷಯವನ್ನು ಹೇಳಿಬಿಡುತ್ತೇನೆ...

ಶ್ರೀ ಎಂ. ರಘುಪತಿ.— ಈ ವಿಷಯದಲ್ಲಿ ನಾವು ಯಾರೂ ಹಸ್ತಕ್ಷೇಪ ಮಾಡುವುದಿಲ್ಲವೆಂದು ಸ್ಪಷ್ಟವಾಗಿ ಹೇಳುತ್ತೇನೆ. ಇದರಲ್ಲಿ ಕಾನೂನಿನ ಪ್ರಕಾರವಾಗಿ ಏನೇನು ಕ್ರಮಗಳನ್ನು ಕೈಗೊಳ್ಳಬೇಕೋ ಅದನ್ನು ಕೈಗೊಳ್ಳುತ್ತೇವೆ.

ಶ್ರೀ ಪಿ. ರಾಮಚಂದ್ರರಾವ್.— ನಮ್ಮ ಲೇಬರ್ ಡಿಪಾರ್ಟ್‌ಮೆಂಟ್ ಕಚೇರಿಯಲ್ಲಿ ಟೈಪಿಸ್ಟ್ ಮತ್ತು ಸ್ಟೆನೋಗಳು ಇಲ್ಲ. ಲಕ್ಷಾನುಗಟ್ಟಲೆ ಕಾರ್ಮಿಕರು ಇರತಕ್ಕಂಥ ಆಫೀಸ್‌ನಲ್ಲಿ ಟೈಪಿಸ್ಟ್, ಸ್ಟೆನೋಗಳು ಇಲ್ಲದೇ ಅಲ್ಲಿರತಕ್ಕ ಎಂಪ್ಲಾಯ್ಸ್ ಬಹಳ ತೊಂದರೆಪಡುತ್ತಿದ್ದಾರೆ. ಎರಡನೆಯದಾಗಿ, ವರ್ಕ್ಸ್‌ರ್ಸ್‌ಗೆ ಎಜುಕೇಷನ್ ಕೊಡುವ ಬಗ್ಗೆ ಮಂಗಳೂರಿನಲ್ಲಿ ಇದ್ದುದನ್ನು ಹಾಸನಕ್ಕೆ ಯಾರನ್ನೂ ಕೇಳದೇ ಹಾಕಿಬಿಟ್ಟಿದ್ದಾರೆ. ಇದರಿಂದ ಮಂಗಳೂರಿನವರಿಗೆ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿರತಕ್ಕ ಕೆಲಸಗಾರರಿಗೆ ಬಹಳ ತೊಂದರೆಯಾಗುತ್ತಿದೆ ಆದುದರಿಂದ ಇದನ್ನು ಸಹ ಸರಿಪಡಿಸುತ್ತೀರಾ?

ಶ್ರೀ ಎಂ. ರಘುಪತಿ.— ಅದನ್ನು ಪರಿಶೀಲಿಸುತ್ತೇನೆ.

ಅಧ್ಯಕ್ಷರು.— ೩೧ನೇ ಮಾರ್ಚ್ ೧೯೮೪ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಅಭಿಯಾಚನೆ ಕ್ರಮಾಂಕ ೫೩ ಮತ್ತು ೬೦ ಬೇಡಿಕೆಗಳಿಗೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗನ್ನು ಸೇರಿ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗನ್ನು ಸೇರಿ ಬೇಡಿಕೆಗಳ ಪಟ್ಟಿಯಲ್ಲಿ ಈ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂಬ ಪ್ರಸ್ತಾಪವನ್ನು ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಸ್ತಾಪವು ಅಂಗೀಕೃತವಾಗಿದೆ

(ಅಧ್ಯಕ್ಷರ ಆಜ್ಞೆಯ ಮೇರೆಗೆ ಮಂಜೂರಾದ ಬೇಡಿಕೆಗಳ ಪಟ್ಟಿಯನ್ನು ಈ ಕೆಳಗೆ ನಮೂದಿಸಲಾಗಿದೆ).

ಅಭಿಯಾಚನೆ ಕ್ರಮಾಂಕ ೫೩-ವಕ್ಫ್

೩೧ನೇ ಮಾರ್ಚ್ ೧೯೮೪ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಕ್ಫ್‌ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೩೭,೫೦,೦೦೦ ರೂಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಲಾಗಿದೆ.

ಅಭಿಯಾಚನೆ ಕ್ರಮಾಂಕ ೬೦-ಕಾರ್ಮಿಕ ಮತ್ತು ಉದ್ಯೋಗ

೩೧ನೇ ಮಾರ್ಚ್ ೧೯೮೪ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಕಾರ್ಮಿಕ ಮತ್ತು ಉದ್ಯೋಗಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ಹಣವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೨೦,೫೫,೧೪,೦೦೦ ರೂಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೫,೦೦,೦೦೦ ರೂ ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಲಾಗಿದೆ.

ಅಧ್ಯಕ್ಷರು.— ಈಗ ಮಾನ್ಯ ತೋಟಗಾರಿಕೆ ಮತ್ತು ಪಶುಸಂಗೋಪನಾ ಮಂತ್ರಿಗಳವರು ಉತ್ತರ ನೀಡುತ್ತಾರೆ.

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್ (ತೋಟಗಾರಿಕೆ ಮತ್ತು ಪಶುಸಂಗೋಪನಾ ಮಂತ್ರಿಗಳವರು).— ಮಾನ್ಯ ಅಧ್ಯಕ್ಷರೇ, ನಾನು ಮಂಡಿಸಿದಂಥ ಬೇಡಿಕೆಗಳಿಗೆ ಮಾನ್ಯ ಸದಸ್ಯರುಗಳು ತಮ್ಮ ಸಲಹೆಗಳನ್ನು ಕೊಟ್ಟಿದ್ದಾರೆ. ಈ ತೋಟಗಾರಿಕೆ ಇಲಾಖೆಯಲ್ಲಿ ಒಟ್ಟು ಕೃಷಿ ಭೂಮಿ ೮.೯೫ ಪರ್ಸೆಂಟ್ ಇದೆ. ಖುಷ್ಕೀ ಮತ್ತು ತರೀ ಜಮೀನಿನಿಂದ ಒಟ್ಟು ೧೦೮೪.೮೪ ಕೋಟಿ ರೂಪಾಯಿಗಳ ಆದಾಯವಿದೆ. ಆ ಒಂದು ದೃಷ್ಟಿಯಿಂದ ಕೃಷಿಕನ ಜೀವನದಲ್ಲಿ ತೋಟಗಾರಿಕೆ ಇಲಾಖೆ ಬಹಳ ಮಹತ್ವದ ಪಾತ್ರವನ್ನು ವಹಿಸಬೇಕಾಗಿದೆ ಮತ್ತು ರೈತನ ಒಣಗಿದ ಜೀವನಕ್ಕ ಆಸರೆ ಆಗಬೇಕಾಗಿದೆ. ೧೯೮೩-೮೪ರಲ್ಲಿ ೧೦೨ ವಿವಿಧ ಯೋಜನೆಗಳಿಗೆ ೭೭೫.೯೪ ಲಕ್ಷರೂಪಾಯಿಗಳನ್ನು ಖರ್ಚು ಮಾಡಲು ಉದ್ದೇಶಿಸಲಾಗಿತ್ತು, ಇಲಾಖೆಯಲ್ಲಿ ಸುಮಾರು ೩೫೨ ಫಾರಂಗಳು ಇವೆ. ಅವುಗಳಿಗೆ ೮೧-೮೨ರಲ್ಲಿ ೯೩ ಲಕ್ಷ ರೂಪಾಯಿಗಳ ಖರ್ಚಾಗಿದ್ದರೆ ೯೫ ಲಕ್ಷ ರೂಪಾಯಿಗಳು ಉತ್ಪನ್ನವಾಗಿದೆ. ಇದು ಬಹಳ ಕಡಿಮೆ ಆಯಿತು. ಈ ಆದಾಯವನ್ನು ಹೆಚ್ಚು ಮಾಡಬೇಕಾಗಿದೆ ಮತ್ತು ರೈತರಿಗೆ ಮಾರ್ಗದರ್ಶಕವಾಗುವ ರೀತಿಯಲ್ಲಿ ವ್ಯವಸ್ಥೆ ಮಾಡಬೇಕಾಗಿದೆ. ದಾವಣಗೆರೆಯಲ್ಲಿರತಕ್ಕ ಒಂದು ಫಾರಂ ಸರಿಯಾಗಿ ಕೆಲಸ ಮಾಡುತ್ತಿಲ್ಲವೆಂದು ಪಂಪಾಪತಿಯವರು ಹೇಳಿದರು. ಅಲ್ಲದೆ ನೀರಿನ ಕೊರತೆಯಿಂದಾಗಿ ಸಾಕಷ್ಟು ಲಾಭ ಗಳಿಸುವುದಕ್ಕಾಗುತ್ತಿಲ್ಲವೆಂದು ಹೇಳಿದರು. ಅಲ್ಲಿ ಸಸಿಗಳನ್ನು ತಯಾರಿಸಿ ಕೊಡಲಾಗುತ್ತಿದೆ. ಅದೇ ರೀತಿ ಇನ್ನೂ ಎಷ್ಟೋ ಫಾರಂಗಳು ಇವೆ, ಅವುಗಳನ್ನೆಲ್ಲಾ ಲಾಭದಾಯಕವಾಗಿ ಮಾಡಬೇಕೆಂಬುದು ಸರ್ಕಾರದ ಗುರಿಯಾಗಿದೆ. ಮಾನ್ಯ ಸೋಮಪ್ಪನವರು ಕೆಲವು ಸಲಹೆಗಳನ್ನು ಕೊಟ್ಟರು. ಅವರು ತೊಟಗಾರಿಕೆ ಇಲಾಖೆಯಲ್ಲಿ ತೆಂಗಿನ ಸಸಿಗಳನ್ನು ಮಾತ್ರ ಕೊಡುವ ಕಾರ್ಯ ಮಾಡಲಾಗುತ್ತಿದೆ ಎಂದರು. ಅದು ಸರಿಯಲ್ಲ. ನಮ್ಮ ಹತ್ತಿರ ಕೋಕೊನಟ್, ಕಾರ್ಡಮಮ್, ಅರೇಕಾನಟ್, ಗ್ರೇಪ್, ಪೈನಾಪಲ್, ಬನಾನ ಡೆವಲಪ್‌ಮೆಂಟ್ ಸ್ಕೀಂಗಳು ಎಂದು ಒಟ್ಟು ೬ ಸ್ಕೀಂಗಳು ಇವೆ. ಪ್ರತಿಯೊಂದು ಫಾರಂಗಳ ಮೂಲಕವೂ ಹಣ್ಣು ಹಂಪಲು ಮತ್ತು ಕಾಯಿ ಪಲ್ಯಗಳನ್ನು ಬೆಳಸಲು ರೈತರಿಗೆ ಮಾರ್ಗದರ್ಶನ ಮತ್ತು ಪ್ರೋತ್ಸಾಹ ನೀಡುತ್ತಿದ್ದಾರೆ. ರಾಮಕೃಷ್ಣರವರು ಟೊಮ್ಯಾಟೋ ಧಾರಣೆ ಬಗ್ಗೆ ಹೇಳಿದರು. ಈ ಸಾರಿ ಮಳೆ ಬಾರದ ಕಾರಣ ಕೆಲವು ದಿವಸ ಕೆ.ಜಿ. ಒಂದಕ್ಕೆ ೮ ರೂಪಾಯಿಗಳವರೆಗೆ ಟೊಮ್ಯಾಟೋ ಮಾರಾಟವಾಯಿತು. ಆದ್ದರಿಂದ ಇಲ್ಲಿ ರೈತನ ಅಥವಾ ಬಳಕೆದಾರನ ಪ್ರಶ್ನೆ ಇಲ್ಲ. ಮುಖ್ಯವಾಗಿ ಯಾವ ತೋಟಗಾರಿಕೆ ವಸ್ತುಗಳೇ ಆಗಲೀ ಅವು ರೈತರಿಂದ ನೇರವಾಗಿ ಬಳಕೆದಾರರಿಗೆ ಮುಟ್ಟುವ ವ್ಯವಸ್ಥೆ ಮಾಡಲು ಇಲಾಖೆ ಸೂಕ್ತ ಕ್ರಮ ಕೈಗೊಳ್ಳಲು ಪ್ರಯತ್ನ ಮಾಡುತ್ತಿದೆ. ಮತ್ತು ಈ ಬಗ್ಗೆ ತರಕಾರಿ ಬೆಳೆಗಾರರ ಸಂಘ ಬಹಳ ಆದರ್ಶಮಯವಾಗಿ ಕೆಲಸ ಮಾಡುತ್ತಿದೆ. ಆ ಸಂಘದ ವತಿಯಿಂದ ಬೆಂಗಳೂರು, ಮೈಸೂರು ಮತ್ತಿತರ ಕಡೆಗಳಲ್ಲಿ ನೇರವಾಗಿ ತೋಟಗಾರಿಕೆ ವಸ್ತುಗಳನ್ನು ರೈತರಿಂದ ಕೊಂಡು ಬಳಕೆದಾರರಿಗೆ ಹಂಚಲು ಪ್ರಯತ್ನ ಮಾಡುತ್ತಿದೆ, ಇದರಲ್ಲಿ ಶೇಕಡ ೨೦ಕ್ಕಿಂತ ಹೆಚ್ಚು ಲಾಭ ತೆಗೆದುಕೊಳ್ಳುತ್ತಿಲ್ಲ. ಈ ಸಂಘ ೮೨-೮೩ರಲ್ಲಿ ೩ ಲಕ್ಷದ ೭೫ ಸಾವಿರ ರೂಪಾಯಿ ಲಾಭ ಗಳಿಸಿದೆ. ರಾಮಕೃಷ್ಣರವರು ಎಷ್ಟು ಧಾರಣೆಗೆ ತೆಗೆದುಕೊಂಡು ಎಷ್ಟಕ್ಕೆ ಕೊಡಬೇಕೆಂಬ ಬಗ್ಗೆ ಒಂದು ಪಟ್ಟಿಯನ್ನು ಕಳುಹಿಸಿದರು. ಅದು ತರಕಾರಿ ಮತ್ತು ಹಣ್ಣು ಬೆಳೆಗಾರರ ಸಂಘಕ್ಕೆ ಸಂಬಂಧಪಟ್ಟದು. ಅದು ಸಹಕಾರ ಇಲಾಖೆಯ ವತಿಯಿಂದ ನಡೆಯುತ್ತಿದೆ, ಅದಕ್ಕೂ ನಮಗೂ ಸಂಬಂಧವಿಲ್ಲ.

ಶ್ರೀ ವೈ. ರಾಮಕೃಷ್ಣ.—ನೇರವಾಗಿ ತಾವು ಅದಕ್ಕೆ ಏರ್ಪಾಡು ಮಾಡಿ.

ಶ್ರೀ ವಿಶ್ವನಾಥ ರೆಡ್ಡಿ ಮುದ್ನಾಳ್.—ಈಗ ಮಾರುಕಟ್ಟೆಯಲ್ಲಿರತಕ್ಕ ಬೆಲೆಗಳು ನಮ್ಮೆಲ್ಲರ ಗಮನಕ್ಕೆ ಬಂದಿವೆ. ಅವು ಇವತ್ತಿನ ದಿವಸ ಇಳಿಮುಖವಾಗಿವೆ. ರಾಮಲಿಂಗಯ್ಯನವರು ನಮ್ಮ ಕ್ಷೇತ್ರಕ್ಕೆ ಸಂಬಂಧಪಟ್ಟ ತೆಂಗಿನ ಅಭಿವೃದ್ಧಿಗೆ ಬೇಕಾದ ಭೂಸಂರಕ್ಷಣೆಯ ಬಗ್ಗೆ ಹೇಳಿದರು ಅಲ್ಲದೆ ಹಲವು ಇಲಾಖೆಗಳು ಸೇರಿಕೊಂಡು ಈ ಕೆಲಸ ಸರಿಯಾಗಿ ನಡೆಯುತ್ತಿಲ್ಲವೆಂದು ಹೇಳಿದರು. ಅದನ್ನು ತೋಟಗಾರಿಕೆ ಇಲಾಖೆಯವರು ತೆಗೆದುಕೊಳ್ಳತಕ್ಕದ್ದರ ಬಗ್ಗೆ ಸಂಬಂಧಪಟ್ಟ ಇಲಾಖೆಯವರೊಡನೆ ವಿಚಾರ ಮಾಡುತ್ತೇವೆ. ಶಿವಮೂರ್ತಿಯವರು ಮತ್ತು ಇತರ ಅನೇಕ ಸದಸ್ಯರು ಇಲಾಖೆಯ ವತಿಯಿಂದ ಒಳ್ಳೆಯ ಸಸಿಗಳನ್ನು ಕೊಡಲಾಗುತ್ತಿಲ್ಲವೆಂದು ತಿಳಿಸಿದರು. ಒಳ್ಳೆಯ ಸಸಿಗಳನ್ನು ತಜ್ಞರ ಮೂಲಕ ಪರಿಶೀಲನೆ ಮಾಡಿಸಿ ಒದಗಿಸತಕ್ಕ ವ್ಯವಸ್ಥೆ ಮಾಡುತ್ತಿದ್ದೇವೆ. ಇಂಟಿಗ್ರೇಟೆಡ್ ಹಾರ್ಟಿಕಲ್ಚರ್ ಮತ್ತು ಇಂಡೋ ಫಾರಂ ಬಗ್ಗೆ ರಾಮಕೃಷ್ಣರವರು ಹೇಳಿದರು. ಅವುಗಳ ಬಗ್ಗೆ ಈಗಾಗಲೇ ಕ್ರಮ ಕೈಗೊಂಡಿದೆ ಇಂಟಿಗ್ರೇಟೆಡ್ ಹಾರ್ಟಿಕಲ್ಚರ್ ಪ್ರಾಜೆಕ್ಟ್ ಬಗ್ಗೆ ೩-೮-೮೩ರಂದು ರಾಜ್ಯಮಟ್ಟದ ಕಮಿಟಿಯ ಅಂತಿಮ ತೀರ್ಮಾನ ತೆಗೆದುಕೊಂಡು ೩೯ ಕೋಟಿ ರೂಪಾಯಿಗಳ ಈ ಯೋಜನೆಯನ್ನು ಕೇಂದ್ರಕ್ಕೆ ಸರ್ಕಾರಕ್ಕೆ ಕಳುಹಿಸುವ ಹಂತದಲ್ಲಿದೆ. ಇಂಡೋಪ್ರಾಜೆಕ್ಟ್ ಬಗ್ಗೆ ಮೈಸೂರಿನ ಪಿ.ಎಫ್.ಐ ವರದಿಯನ್ನು ತಯಾರಿಸುತ್ತಿದೆ. ಅದೂ ಕೂಡ ಕೊನೆಯ ಹಂತದಲ್ಲಿದೆ. ಇದಕ್ಕೆ ಕ್ಯಾಶ್ಯು ಡೆವಲಪ್‌ಮೆಂಟ್ ಪ್ರಾಜೆಕ್ಟಿನ ಮತ್ತು ವರ್ಲ್ಡ್ ಬ್ಯಾಂಕಿನ ನೆರವನ್ನು ತೆಗೆದುಕೊಳ್ಳಲಾಗಿದೆ ೧೯೮೧-೮೨-೮೩ರಲ್ಲಿ ಗುರಿಗಿಂತ ಕಡಿಮೆ ಸಾಧನೆಯಾಗಿದೆ; ಅದನ್ನು ೧೮೮೩-೮೪-೮೫ರಲ್ಲಿ ಪೂರೈಸುವುದಕ್ಕೆ ತ್ವರಿತ ಗತಿಯಲ್ಲಿ ಮುನ್ನಡೆಯುತ್ತಿದ್ದೇವೆ. ನಾನು ಮಂಗಳೂರಿಗೆ ಹೋದಾಗ ಅದನ್ನು ನೋಡಿ ಬಂದಿದ್ದೇನೆ. ಹಿಂದೆ ಏನು ಪ್ರಗತಿ ಕಡಿಮೆಯಾಗಿದೆ ಅದನ್ನು ಈ ವರ್ಷ ಅಥವಾ ಮುಂದಿನ ವರ್ಷದಲ್ಲಿ ಸರಿದೂಗಿಸಿ ವರ್ಲ್ಡ್ ಬ್ಯಾಂಕ್ ನೆರವಿನ ಪ್ರಾಜೆಕ್ಟನ್ನು ಸಂಪೂರ್ಣ ಯಶಸ್ವಿ ಮಾಡುತ್ತೇಂದು ಹೇಳಬಯಸುತ್ತೇನೆ. ಬಿ.ಆರ್. ಪಾಟೀಲರು ಗ್ರೇಪ್ ಗ್ರೋಯರ್ಸ್ ಬಗ್ಗೆ ಹೇಳುತ್ತಾ ವಿಶೇಷವಾಗಿ ಗುಲ್ಬರ್ಗ ಜಿಲ್ಲೆಯಲ್ಲಿ ಸರಿಯಾದ ತಾಂತ್ರಿಕ ಸಹಾಯ ಮತ್ತು ಆರ್ಥಿಕ ಸಹಾಯ ಅವರಿಗೆ ಸಿಕ್ಕುತ್ತಿಲ್ಲವೆಂದು ಹೇಳಿದ್ದಾರೆ. ಇದನ್ನು ನಾನು ಗಮನಕ್ಕೆ ತೆಗೆದುಕೊಂಡು ಇಲಾಖೆಯಲ್ಲಿರತಕ್ಕ ಅಸಿಸ್ಟೆಂಟ್ ಹಾರ್ಟಿಕಲ್ಚರಲ್ ಆಫೀಸರ್‌ರವರಿಂದ ಅವರಿಗೆ ತಾಂತ್ರಿಕ ನೆರವು ಸಿಗುವ ಬಗ್ಗೆ ಪರಿಶೀಲನೆ ಮಾಡುತ್ತೇನೆ. ಜೊತೆಗೆ ಈಗಾಗಲೇ ಗ್ರೇಪ್ ಗ್ರೋಯರ್ಸ್‌ಗೆ ಬೆಳಗಾಂ, ಬಳ್ಳಾರಿ, ಮತ್ತು ಬಿಜಾಪುರ ಜಿಲ್ಲೆಯಲ್ಲಿ ಸಾಕಷ್ಟು ಸೌಲಭ್ಯಗಳನ್ನು ಒದಗಿಸಿದ್ದೇವೆ. ೬೭೩ ಜನ ರೈತರಿಗೆ ೮೭೭ ಎಕರೆಯಲ್ಲಿ ದ್ರಾಕ್ಷಿ ಬೆಳೆಯುವುದಕ್ಕೆ ಸಾಲ ಸಿಗುವಂತೆ ಮಾಡಿದ್ದೇವೆ.

ಇನ್ನು ಕೋಲ್ಡ್ ಸ್ಟೋರೇಜ್ ಬಗ್ಗೆ ಹೇಳಿದ್ದಾರೆ. ಈಗಾಗಲೇ ಆರ್ಥಿಕ ಸಂಪನ್ಮೂಲಗಳನ್ನು ನೋಡಿಕೊಂಡು ಧಾರವಾಡದಲ್ಲಿ ಈ ಸಾರಿ ಒಂದು ಕೋಲ್ಡ್ ಸ್ಟೋರೇಜನ್ನು ಸ್ಥಾಪನೆ ಮಾಡಬೇಕೆಂಬ ಕ್ರಮ ಕೈಗೊಳ್ಳಲಾಗಿದೆ. ಮುಂದೆ ಇತರ ಭಾಗಗಳಲ್ಲಿ ಈ ಬಗ್ಗೆ ಕ್ರಮ ತೆಗೆದುಕೊಳ್ಳುತೇವೆ. ಸ್ಪೆಷಲ್ ಕಾಂಪೋನೆಂಟ್ ಸ್ಕೀಮಿನಲ್ಲಿ ೧೯೮೩–೮೪ನೇ ಸಾಲಿನಲ್ಲಿ ಹರಿಜನ–ಗಿರಿಜನ ಅಭಿವೃದ್ಧಿಗೋಸ್ಕರ ೭೩.೯೫ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲು ಉದ್ದೇಶಿದ್ದೇವೆ. ಮಾನ್ಯ ಹುಚ್ಚಪ್ಪನವರು ಕಾಯರ್ ಬೋರ್ಡ್ ಬಗ್ಗೆ ಹೇಳಿದ್ದಾರೆ. ಇದು ಕೇಂದ್ರ ಸರ್ಕಾರದ ವತಿಯಿಂದ ನಡೆಯತಕ್ಕದ್ದು. ಇದರ ಕೇಂದ್ರ ಕಛೇರಿ ಕೊಚ್ಚಿನಲ್ಲಿದೆ. ಅದರ ವ್ಯಾಪ್ತಿಯಲ್ಲಿ ಕರ್ನಾಟಕ ಬರುತ್ತದೆ. ಆದ್ದರಿಂದ, ಇಲ್ಲಿ ಪ್ರತ್ಯೇಕವಾಗಿ ಒಂದು ಕಾಯರ್ ಬೋರ್ಡನ್ನು ಮಾಡತಕ್ಕ ಅವಶ್ಯಕತೆ ಇಲ್ಲವೆಂದು ನನ್ನ ಅಭಿಪ್ರಾಯ. ಎಲ್ಲಾ ಸದಸ್ಯರು ಏನೇನು ಸಮಸ್ಯೆಗಳನ್ನು ಕೇಳಿದ್ದಾರೆ ಮತ್ತು ಸೂಚನೆಗಳನ್ನು ಕೊಟ್ಟಿದ್ದಾರೆ ಅವೆಲ್ಲವನ್ನು ಅವಗಾಹನೆಗೆ ತೆಗೆದುಕೊಂಡು ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿ ಈ ಬೇಡಿಕೆ ಮನ್ನಣೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಎಂ. ನಾಣಯ್ಯ.—ತೋಟಗಾರಿಕೆ ಇಲಾಖೆಯಲ್ಲಿರತಕ್ಕ ಅಧಿಕಾರ ವರ್ಗದಲ್ಲಿ ಬಹಳಷ್ಟು ನಿರಾಶೆಯಾಗಿದೆ. ೧೯೫೧ರಿಂದೀಚೆಗೆ ಫೈನಲ್ ಸೀನಿಯಾರಿಟಿ ಲಿಸ್ಟ್ ಬಂದಿಲ್ಲ. ಪ್ರಾವಿಷನಲ್ ಲಿಸ್ಟ್ ಹಾಕುತ್ತಿದ್ದರು. ಅದರ ಮೇಲೆ ರಿಟ್ ಹಾಕಿದ್ದಾರೆ. ಅದಕ್ಕೆ ಹೈಕೋರ್ಟಿನಿಂದ ಸ್ಟೇ ಬಂದಿದೆ. ಈಗಾಗಲೇ ಸೀನಿಯಾರಿಟಿ ಲಿಸ್ಟ್ ತಯಾರಾಗಿತ್ತು; ಆದರೆ ಅದನ್ನು ಮತ್ತೆ ಸರ್ಕಾರ ವಾಪಸ್ಸು ತೆಗೆದುಕೊಂಡಿದೆ ಎಂದು ತಿಳಿದು ಬಂದಿದೆ. ಈ ರೀತಿ ಮಾಡುವುದಕ್ಕೆ ಕಾರಣವೇನು? ಪುನಃ ಅದನ್ನು ಏಕೆ ತಡೆಹಿಡಿದಿದ್ದಾರೆ?

ಶ್ರೀ ವಿಶ್ವನಾಥ ರೆಡ್ಡಿ ಮುದ್ನಾಳ್.—ಸೀನಿಯಾರಿಟಿ ಪಟ್ಟಿ ಬಗ್ಗೆ ಸುಮಾರು ೧೦ ವರ್ಷದಿಂದ ನಡೆಯುತ್ತಿದೆ. ಇತ್ತೀಚೆಗೆ ಇಲಾಖೆಯ ಪ್ರೊಮೋಷನಲ್ ಕಮಿಟಿಯಲ್ಲಿ ರೆಕಮೆಂಡ್ ಅದನ್ನು

ಕಾರ್ಯಗತ ಮಾಡಬೇಕೆಂಬ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಇದು ಸೂಕ್ತ ಪರಿಶೀಲ ಯಲ್ಲಿದೆ, ಇದರ ಬಗ್ಗೆ ಇನ್ನು ಹೆಚ್ಚಿನ ವಿವರಗಳನ್ನು ಕೊಡವುದಕ್ಕೆ ಸಾಧ್ಯವಿಲ್ಲ.

ಶ್ರೀ ಸಿ. ಬೈರೇಗೌಡ.—ಕೋಲಾರ ಜಿಲ್ಲೆಯ ಚಿಕ್ಕಬಳ್ಳಾಪುರದಲ್ಲಿ ಕೋಲ್ಡ್ ಸ್ಟೋರೇಜನ್ನ ಕಟ್ಟಿ ೧೫ ವರ್ಷವಾಗಿರಬಹುದು. ಅದು ೧೫ ದಿನ ಕೂಡ ಕೆಲಸ ಮಾಡಿಲ್ಲ. ಕೋಲಾರದಲ್ಲಿ ಕಟ್ಟುವುದಕ್ಕೆ ಪ್ರಯತ್ನ ಮಾಡಿ ೧೦–೧೨ ವರ್ಷವಾಗಿದೆ; ಇದುವರೆಗೆ ಪ್ರಾರಂಭವಾಗಿಲ್ಲ. ಕೋಲ್ಡ್ ಸ್ಟೋರೇಜುಗಳನ್ನು ಕೋಲ್ಡ್ ಸ್ಟೋರೇಜಿನಲ್ಲಿ ಇಡುವ ಕೆಲಸ ಮಾಡುತ್ತೀರಾ ಅಥವಾ ಜನಗಳಿಗೆ ಅದರ ಉಪಯೋಗವಾಗುವಂತೆ ಮಾಡುತ್ತೀರಾ? ಆಗಿರತಕ್ಕ ಲೋಪ ದೋಷಗಳ ಬಗ್ಗೆ ವಿಚಾರಣೆ ನಡೆಸಿ ಏತಕ್ಕೆ ಇವು ಕೆಲಸ ಮಾಡುತ್ತಿಲ್ಲವೆಂದು ತಪ್ಪಿತಸ್ಥರ ಮೇಲೆ ಕ್ರಮ ಕೈಗೊಳ್ಳುತ್ತೀರಾ? ಟೊಮ್ಯಾಟೊ ಒಂದು ಕೆ.ಜಿ.ಗೆ ೬೦–೭೦ ಪೈಸೆಗೆ ಮಾರಾಟವಾಗುತ್ತಿದೆ. ರೈತ ಮಾರ್ಕೆಟ್ಟಿಗೆ ತರಬೇಕಾದರೆ ತಗಲುವ ಕೂಲಿ ಮತ್ತು ಗಾಡಿ ಬಾಡಿಗೆ ಕೂಡ ಇದರಲ್ಲಿ ಗಿಟ್ಟುತ್ತಿಲ್ಲ. ದ್ರಾಕ್ಷಿ ಕೂಡ ೬೦–೭೦ ಪೈಸೆಗೆ ಮಾರಾಟವಾಗುತ್ತಾ ಇದೆ. ಹೀಗಿರುವಾಗ ಬೆಳೆಗಾರರ ರಕ್ಷಣೆ ಯಾವ ರೀತಿ ಮಾಡುತ್ತೀರಿ ? ಅಕಸ್ಮಾತ್ತಾಗಿ ಯಾವಾಗಲಾದರೂ ಒಂದು ಸಾರಿ ಟೊಮೋಟೊ ಬೆಲೆ ಮೂರು ರೂಪಾಯಿಗಳು ನಾಲ್ಕು ರೂಪಾಯಿಗಳು ಆದರೆ ಜನ ಬೊಬ್ಬೆ ಹಾಕುತ್ತಾರೆ. ಆದರೆ ಪ್ರತಿವರ್ಷ ರೈತನಿಗೆ ಬೆಲೆ ಕಡಿಮೆಯಾಗಿ ನಷ್ಟ ಅನುಭವಿಸುತ್ತಿರುವಾಗ ಸರ್ಕಾರ ಅವರ ಬಗ್ಗೆ ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ ?

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್.—ಮಾನ್ಯ ಅಧ್ಯಕ್ಷರೆ, ನಾನು ಈಗಾಗಲೇ ಹೇಳಿದ್ದೇನೆ, ಬೆಳೆಗಾರರ ಬಗ್ಗೆ ನೇರವಾದ ಕ್ರಮವನ್ನು ಸರ್ಕಾರ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಆದರೆ ಬೆಳೆಗಾರ ಬೆಳೆದ ವಸ್ತು ಬಳಕೆದಾರರಿಗೆ ನೇರವಾಗಿ ಮುಟ್ಟಿಸುವುದಕ್ಕೆ ವ್ಯವಸ್ಥೆ ಮಾಡಬೇಕೆಂಬ ವಿಚಾರ ಸರ್ಕಾರದಲ್ಲಿದೆ. ದ್ರಾಕ್ಷಿ ಬೆಳೆಗಾರರ ಸಂಘದ ತರಹ ಸಂಸ್ಥೆಗಳನ್ನು ಎಲ್ಲಾ ಕಡೆ ಮಾಡುವ ಪ್ರಯತ್ನ ಮಾಡುತ್ತೇವೆ. ಕೋಲಾರದ ಚಿಲ್ಲಿಂಗ್ ಪ್ಲಾಂಟ್ ಬಗ್ಗೆ ಹೇಳಿದ್ದಾರೆ. ಅವನ್ನು ಕೆ.ಡಿ.ಡಿ.ಸಿ.ಯವರು ತೆಗೆದುಕೊಳ್ಳಬೇಕೆಂದು ಮಾಡಿದ್ದಾರೆ. ಅವರು ಅದನ್ನು ತೆಗೆದುಕೊಂಡು ಪೂರ್ತಿ ಮಾಡುತ್ತಾರೆ. ಹಿಂದೆ ಆಗಿರುವುದರ ಲಗ್ಗೆ ಕೂಡ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಸಿ. ಬೈರೇಗೌಡ.—ಚಿಕ್ಕಬಳ್ಳಾಪುರದಲ್ಲಿ ಕೋಲ್ಡ್ ಸ್ಟೋರೇಜ್ ೧೫ ದಿವಸ ಕೂಡ ಕೆಲಸ ಮಾಡಲಿಲ್ಲ. ಈ ಬಗ್ಗೆ ವಿಚಾರಣೆ ನಡೆಸಿ ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳಿ.

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್.—ಕ್ರಮ ತೆಗೆದುಕೊಳ್ಳೋಣ ಎಂದು ಹೇಳಿದ್ದೇನೆ.

ಶ್ರೀ ಎಚ್. ಜಿ. ಗೋವಿಂದ ಗೌಡ.—ಮಲೆನಾಡು ಪ್ರದೇಶದಲ್ಲಿ ಕೊಪ್ಪ, ಶೃಂಗೇರಿ ಮುಂತಾದ ಕಡೆಗಳಲ್ಲಿ ಅಡಿಕೆ ಮರಗಳಿಗೆ ಹಳದಿ ರೋಗ ಬಂದು ಅವು ಸಾಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ? ಇದು ೧೯೬೦ನೇ ಇಸವಿಯಿಂದ ಈ ರೋಗ ಇದೆ. ಈ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ ? ಒಂದು ವೇಳೆ ಕ್ರಮ ತೆಗೆದುಕೊಳ್ಳದಿದ್ದರೆ ಅತಿ ಜಾಗ್ರತೆಯಾಗಿ ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವಿಶ್ವನಾಥ ರೆಡ್ಡಿ ಮುದ್ನಾಳ್.—ಅದರ ಬಗ್ಗೆ ಸಂಪೂರ್ಣ ಮಾಹಿತಿ ತರಿಸಿಕೊಂಡು ಯೋಗ್ಯ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ತೋಟಗಾರಿಕೆ ಬಗ್ಗೆ ಹೇಳುವುದಾದರೆ ಮಂತ್ರಿಗಳು ಪ್ರವಾಸ ಕಾಲದಲ್ಲಿ ೬ ಜನರನ್ನು ಮಾವಿನ ಹಣ್ಣು ತಿಂದಿದ್ದಕ್ಕೋಸ್ಕರ ಸಸ್ಪೆಂಡ್ ಮಾಡಿದ್ದಾರೆ. ಅವರನ್ನು ರೀ–ಇನ್‌ಸ್ಟೇಟ್ ಮಾಡುವುದಕ್ಕ ಕ್ರಮ ತೆಗೆದುಕೊಳ್ಳುತ್ತಾರೆಯೇ ?

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್.—ಮಾನ್ಯ ಸದಸ್ಯರು ಬೇರೆ ಕಾಲದಲ್ಲಿ ಈ ಪ್ರಶ್ನೆಯನ್ನು ಕೇಳಿದರೆ ಉತ್ತರ ಕೊಡುತ್ತೇನೆ. ಡಿಮ್ಯಾಂಡ್ ಕಾಲದಲ್ಲಿ ಏನು ಉತ್ತರ ಕೊಡಲಿ ?

ಅಧ್ಯಕ್ಷರು.—ಮಾವಿನ ಹಣ್ಣು ತಿಂದಿದ್ದಕ್ಕೆ ಏತಕ್ಕೆ ಸಸ್ಪೆಂಡ್ ಮಾಡಿದ್ದೀರಿ ?

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್.—ಮಾನ್ಯ ಸದಸ್ಯರು ನನ್ನ ಹತ್ತಿರ ಬಂದು ಕೇಳಿದರೆ ಸವಿಸ್ತಾರವಾಗಿ ಉತ್ತರ ಹೇಳುತ್ತೇನೆ.

ಶ್ರೀ ಪಿ. ರಾಮದೇವ್.—ಬೆಂಗಳೂರು ನಗರದ ಗ್ರಾಹಕರ ಪರಿಸ್ಥಿತಿ ಮಾನ್ಯ ಮಂತ್ರಿಗಳಿಗೆ ಗೊತ್ತಿರಬೇಕು. ಎರಡು ತಿಂಗಳ ಹಿಂದೆ ತರಕಾರಿ ಬೆಲೆ ಬಹಳ ಜಾಸ್ತಿ ಏರಿತ್ತು. ಟೊಮೋಟೋ ಬೆಲೆ ಕೆ.ಜಿ.ಗೆ ೧೧ರಿಂದ ೧೨ ರೂಪಾಯಿ ಆಗಿತ್ತು. ಏಕಾ ಏಕಿ ಏರಿದ್ದ ಬೆಲೆ ಈಗ ಕಡಿಮೆಯಾಗಿದೆ. ತರಕಾರಿಗಳನ್ನು ಮತ್ತು ಹಣ್ಣುಗಳನ್ನು ಇಡುವುದಕ್ಕೆ ಕೋಲ್ಡ್ ಸ್ಟೋರೇಜ್ ಬೇಕು ಎಂದು ಕೇಳುತ್ತಿದ್ದಾರೆ. ಆ ಬಗ್ಗೆ ಮಂತ್ರಿಗಳು ಏನು ಕ್ರಮ ತೆಗೆದುಕೊಳ್ಳುತ್ತೀರಿ ? ಬಳಕೆದಾರರ ರಕ್ಷಣೆ ಮತ್ತು ರೈತರ ರಕ್ಷಣೆ ಎರಡೂ ಆಗಬೇಕು. ಈ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ? ಬೆಂಗಳೂರು ಡೈರಿ ತಮ್ಮ ಹತೋಟಿಯಲ್ಲಿದೆ. ಬೆಳಗ್ಗೆ ೮-೩೦ರವರೆಗೆ ಡೈರಿ ಹಾಲು ಬರುವುದಿಲ್ಲ. ಇವತ್ತು ತಾವು ಉತ್ತರ ಕೊಡುವ ದಿವಸ ಕೂಡ ಬಂದಿಲ್ಲ. ಸಮಯಕ್ಕೆ ಸರಿಯಾಗಿ ಹಾಲು ಸರಬರಾಜು ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್.—ಮಾನ್ಯ ಸದಸ್ಯರು ಕೋಲ್ಡ್ ಸ್ಟೋರೇಜ್ ಬಗ್ಗೆ ಸೂಚನೆ ಕೊಟ್ಟಿದ್ದಾರೆ. ಅದರ ಅವಶ್ಯಕತೆ ಬಹಳ ಇದೆ. ಈ ಬಗ್ಗೆ ಮನವಿಗಳೂ ಬಂದಿವೆ. ದ್ರಾಕ್ಷಿ ಬೆಳೆಗಾರರ ಸಂಘದಿಂದಲೂ ಮನವಿ ಬಂದಿದೆ. ಇದರ ಬಗ್ಗೆ ಸೂಕ್ತ ಕ್ರಮ ತೆಗೆದಕೊಳ್ಳಲಾಗುವುದು. ಹಾಲಿನ ಬಗ್ಗೆ ನಾನು ಆ ಇಲಾಖೆಗೆ ಸಂಬಂಧಪಟ್ಟಂತೆ ಉತ್ತರ ಕೊಡುವ ಕಾಲಕ್ಕೆ ಹೇಳುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಲಾಲ್‌ಬಾಗಿನಲ್ಲಿ ತರಕಾರಿ ಮತ್ತು ಹಣ್ಣು ಹಂಪಲುಗಳನ್ನು ಕೊಂಡುಕೊಂಡು ಮಾರತಕ್ಕ ಪದ್ಧತಿ ಇತ್ತು. ಈಗ ಅಲ್ಲಿನ ಸಹಕಾರ ಸಂಘದವರು ವರ್ತಕರಂತೆ ಕೆಲಸ ಮಾಡುತ್ತಿದ್ದಾರೆಯೇ ಹೊರತು ಬೆಳೆಗಾರರಿಗೆ ಹೆಚ್ಚು ಬೆಲೆ ಕೊಟ್ಟು ಕೊಂಡು ತಿನ್ನತಕ್ಕವರಿಗೆ ಸರಿಯಾದ ಬೆಲೆ ನಿಗದಿ ಮಾಡುವ ವ್ಯವಸ್ಥೆ ಮಾಡುತ್ತಿಲ್ಲ. ಇದರ ಬಗ್ಗೆ ಸರಿಯಾದ ಏರ್ಪಾಡು ಮಾಡುವುದಕ್ಕೆ ಸಾಧ್ಯವೇ ಎಂಬುದನ್ನು ತಿಳಿಸಬೇಕು.

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್.—ಕೊಂಡುಕೊಂಡು ಮಾರಾಟ ಮಾಡತಕ್ಕದ್ದು ತೋಟಗಾರಿಕೆ ಇಲಾಖೆ ಅಲ್ಲ. ಸೊಸೈಟಿಯವರು ಮಾಡುತ್ತಿದ್ದಾರೆ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಸೊಸೈಟಿಯವರೇ ಈ ಕೆಲಸ ಮಾಡಬೇಕು ಎಂಬ ಉದ್ದೇಶದಿಂದ ಅದನ್ನು ಮಾಡಿದ್ದಾರೆ. ಅವರು ವರ್ತಕರಾಗಬೇಕು ಎಂಬ ಉದ್ದೇಶದಿಂದ ಮಾಡಿಲ್ಲ, ಸಹಕಾರ ಸಂಘದವರೂ ವರ್ತಕರಂತೆ ಆಗಿದ್ದಾರೆ. ರೈತನಿಗೂ ಸರಿಯಾದ ಬೆಲೆ ಕೊಟ್ಟು ಕೊಂಡು ತಿನ್ನತಕ್ಕವನಿಗೂ ಸರಿಯಾದ ವ್ಯವಸ್ಥೆ ಮಾಡಬೇಕು ಎಂದು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್.—ರೈತರಿಂದ ನೇರವಾಗಿ ಕೊಂಡುಕೊಂಡು ಹೆಚ್ಚು ಲಾಭ ಇಲ್ಲದೆ ಗ್ರಾಹಕರಿಗೆ ಕೊಡತಕ್ಕ ವ್ಯವಸ್ಥೆ ಮಾಡುತ್ತಿದ್ದಾರೆ. ಇದರ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಸಹಕಾರ ಮಂತ್ರಿಗಳಿಂದ ತಿಳಿದುಕೊಳ್ಳಬೇಕಾಗುತ್ತದೆ.

ಶ್ರೀ ಮಾಣಿಕ್‌ರಾವ್ ಪಾಟೀಲ್.—ಮಾನ್ಯ ಮಂತ್ರಿಗಳು ಮೇಜರ್ ಡಿಪಾರ್ಟ್‌ಮೆಂಟ್ ಬೇಡಿಕೆ ಇಟ್ಟು ಒಪ್ಪಿಗೆ ಕೇಳಿದರು. ಪೈನಾಪಲ್, ಬನಾನ ಇದೆಲ್ಲಾ ಬೆಳೆಸುತ್ತಿದ್ದೇವೆ, ಇದಕ್ಕೆ ಅನೇಕ ತರಹದ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ ಎಂದು ಹೇಳಿದರು. ಇವರ ಯೋಜನೆಗಳೆಲ್ಲಾ ಎರಡು ಮೂರು ಜಿಲ್ಲೆಗಳಿಗೆ ಸಂಬಂಧಪಟ್ಟಿದ್ದಾಗಿವೆ. ಕೆಲವೇ ಜಿಲ್ಲೆಗಳಿಗೆ ಸಂಬಂಧಪಟ್ಟಂತೆ ಕೆಲಸ ಮಾಡುವುದಾದರೆ ಇದಕ್ಕೆ ಮೇಜರ್ ಡಿಪಾರ್ಟ್‌ಮೆಂಟ್ ಏತಕ್ಕೆ ಬೇಕು ? ಬಡ ಬೋರೇಗೌಡನ ದುಡ್ಡನ್ನು ವಿನಾಕಾರಣ ವೆಚ್ಚ ಮಾಡಬೇಡಿ. ಈ ಇಲಾಖೆ ಬದಲು ಒಂದು ಬೋರ್ಡ್ ಮಾಡಿ ಡೆಪ್ಯುಟಿ ಡೈರೆಕ್ಟರ್ ಗ್ರೇಡ್‌ನಲ್ಲಿರುವವರಿಗೆ ಜವಾಬ್ದಾರಿ ವಹಿಸಿದರೆ ಸಾಕಾಗುತ್ತದೆ. ಇದಕ್ಕೋಸ್ಕರ ಒಂದು ಇಲಾಖೆ, ಮಂತ್ರಿಗಳು ಬೇಕಾಗಿಲ್ಲ. ಇಲಾಖೆಯವರು ತರಕಾರಿ ಬೆಳೆಸುತ್ತಿದ್ದೇವೆ ಎಂದು ಹೇಳಿದ್ದಾರೆ. ನಮ್ಮ ಕಡೆ ಮೊದಲಿನಿಂದ ಕುಂಬಳಕಾಯಿ ಮತ್ತು ಮೆಣಸಿನಕಾಯಿ ಬೆಳೆಯುತ್ತಿದ್ದಾರೆ. ಮಾನ್ಯ ಮಂತ್ರಿಗಳು ಹೈದರಾಬಾದ್ ಕರ್ನಾಟಕದ ಲಿಂಗಾಯಿತ ಸಮಾಜದಲ್ಲಿ ದೊಡ್ಡ ವ್ಯಕ್ತಿಯಾಗಿದ್ದಾರೆ. ತಮ್ಮನ್ನು ನೋಡಿದರೆ ನಮಗೆಲ್ಲಾ ಭಾರಿ ಅಭಿಮಾನ ಇದೆ. ಇಂಥ ದೊಡ್ಡ ವ್ಯಕ್ತಿ ಡೆಪ್ಯುಟಿ ಡೈರೆಕ್ಟರ್ ಮಾಡುವ ಕೆಲಸವನ್ನು ಮಾಡುತ್ತಿದ್ದಾರಲ್ಲ ಎಂದು ನಮಗೆ ಅವಮಾನವಾಗಿದೆ. ದಯವಿಟ್ಟು ತಾವು ರಾಜೀನಾಮೆ ಕೊಡಿ. ಆ ಇಲಾಖೆಗೆ ಮಂತ್ರಿ ಇಲ್ಲದೇ ಹೋದರೆ ಏನೂ ಚಿಂತೆ ಇಲ್ಲ.

ಅಧ್ಯಕ್ಷರು.—ತಾವು ಕ್ಲಾರಿಫಿಕೇಷನ್ ಕೇಳಿ.

ಶ್ರೀ ಮಾಣಿಕರಾವ್ ಪಾಟೀಲ್.—ನಾನು ಡೈರಿ ಡೆವಲಪ್‌ಮೆಂಟ್ ಕಾರ್ಪೊರೇಷನ್ ರಿಪೋರ್ಟ್ ನೋಡಿದೆ. ಅಲ್ಲಿಯೂ ಕೂಡ ಸರಿಯಾಗಿ ಕೆಲಸ ಆಗುತ್ತಿಲ್ಲ. ಬೀದರ್ ಜಿಲ್ಲೆಯಲ್ಲಿ ೫೦ ಸಾವಿರ ಲೀಟರ್ ಹಾಲು ಮಹಾರಾಷ್ಟ್ರ ಡೈರಿಗೆ ಕೊಡಬೇಕಾಗಿವೆ. ಅವರು ತೆಗೆದುಕೊಂಡರೆ ತೆಗೆದು ತೆಗೆದುಕೊಳ್ಳಬಹುದು ಇಲ್ಲದಿದ್ದರೆ ಇಲ್ಲ. ಇದರಿಂದ ರೈತರ ಪರಿಸ್ಥಿತಿ ಹೇಳುವುದಕ್ಕಾಗುವುದಿಲ್ಲ. ಆದ್ದರಿಂದ ತಾವು ಅಲ್ಲಿ ಒಂದು ಡೈರಿ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಅಧ್ಯಕ್ಷರು.—ಡೆಪ್ಯುಟಿ ಡೈರೆಕ್ಟರ್ ಅವರನ್ನು ಕೇಳಿ.

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್.—ಮಾನ್ಯ ಸದಸ್ಯರು ಈ ಇಲಾಖೆ ಸಣ್ಣದು, ಇದಕ್ಕೆ ಮಂತ್ರಿಗಳು ಬೇಕಾಗಿಲ್ಲ ಎಂಬ ಸಲಹೆ ಏನು ಮಾಡಿದ್ದಾರೆ ಇದನ್ನು ೧೦–೧೫ ವರ್ಷಗಳ ಹಿಂದೆಯೇ ಕೊಟ್ಟಿದ್ದರೆ ಸೂಕ್ತವಾಗುತ್ತಿತ್ತು. ಈಗ ಏತಕ್ಕೆ ಕೊಟ್ಟರೋ ಗೊತ್ತಿಲ್ಲ. ತಡವಾಗಿ ಅವರಿಗೆ ಜ್ಞಾನೋದಯ ಆಗಿದೆ. ಇದರ ಬಗ್ಗೆ ವಿಚಾರ ಮಾಡುತ್ತೇನೆ. ಇದು ಸಣ್ಣ ಇಲಾಖೆ ಅಲ್ಲ.

ಇದು ಒಂದು ಸಣ್ಣ ಇಲಾಖೆ ಇದ್ದರೂ ಸಹಾ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಕೂಡ ತೋಟಗಾರಿಕೆ ಬಗ್ಗೆ ಹೆಚ್ಚು ಪ್ರಯತ್ನಪಟ್ಟರೆ, ಹೈನುಗಾರಿಕೆ ಮತ್ತು ತೋಟಗಾರಿಕೆ ಕಾಮಧೇನು ಕಲ್ಪವೃಕ್ಷವಾಗುವ ಒಂದು ಇಲಾಖೆಯಾಗುತ್ತದೆ. ಈ ದೃಷ್ಟಿಯಿಂದ ಇಲಾಖೆಗೆ ಹೊಸ ಚೈತನ್ಯ ಕೊಟ್ಟು ಪ್ರತಿ ತಾಲ್ಲೂಕುಗಳಲ್ಲಿ ಫಾರಂಗಳನ್ನು ಮಾಡಬೇಕೆಂಬ ಬಗ್ಗೆ ಪ್ರಯತ್ನ ಮಾಡಬೇಕಾಗುತ್ತದೆ ಇನ್ನು ಡೈರಿ ಬಗ್ಗೆ ನಾನು ಆ ಬೇಡಿಕೆ ಮೇಲೆ ಉತ್ತರ ಕೊಡುವಾಗ ತಿಳಿಸುತ್ತೇನೆ.

(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಶ್ರೀ ಕೆ.ಬಿ. ಮಲ್ಲಪ್ಪ.—ಅಧ್ಯಕ್ಷರೇ ನಮ್ಮ ಅರಕಲಗೂಡು ತಾಲ್ಲೂಕಿನಲ್ಲಿ ಚೌರಗಲ್ ಫಾರಂ ಎಂದು ಇದೆ. ಸುಮಾರು ೧೫–೨೦ ವರ್ಷಗಳ ಹಿಂದೆ ೧೦೦ ಎಕರೆ ಜಮೀನು ತೆಗೆದುಕೊಂಡು ಅಲ್ಲಿ ನಿಂಬೆ, ಕಿತ್ತಲೆ ಸಸಿಗಳನ್ನು ಹಾಕಿದ್ದಾರೆ. ಅಲ್ಲಿ ಬಾವಿ ತೋಡಿ ಐ.ಪಿ. ಸೆಟ್ ಹಾಕಿ ನೀರನ್ನು ಒದಗಿಸ ಬೇಕೆಂದು ಸರ್ಕಾರ ಕಾರ್ಯಕ್ರಮ ಹಾಕಿಕೊಂಡಿತ್ತು. ಅಲ್ಲಿ ಬಾವಿ ತೋಡಿ ೩–೪ ವರ್ಷ ಆಗಿದ್ದರೂ ಇನ್ನೂ ಐ.ಪಿ. ಸೆಟ್ ಹಾಕಿಲ್ಲ. ಇದರಿಂದಾಗಿ ಇವತ್ತು ೨೦೦–೩೦೦ ಸಸಿಗಳು ಒಣಗಿಹೋಗಿವೆ ಹಿಂದೆ ಈ ಫಾರಂನಲ್ಲಿ ಬೆಳೆದ ತೆಂಗು, ಅಡಿಕೆ ಹಾಗೂ ಇತರ ಹಣ್ಣುಹಂಪಲುಗಳು ಏನು ಮಾರಾಟ ವಾಗುತ್ತಿದ್ದವು ಅವು ಈಗ ನಿಂತುಹೋಗಿವೆ. ಈ ಬಗ್ಗೆ ಮಾನ್ಯ ಮಂತ್ರಿಗಳು ಏನು ಹೇಳುತ್ತಾರೆ? ಮತ್ತು ಹೇಮಾವತಿ ಡ್ಯಾಮ್ ತಳದಲ್ಲಿ ಗಾರ್ಡನ್ ಮಾಡಬೇಕೆಂದು ಹಾರ್ಟಿಕಲ್ಚರ್ ಇಲಾಖೆಯವರು ೩೫–೪೦ ಎಕರೆ ಜಮೀನು ಪಡೆದುಕೊಂಡು ತಂತಿಹಾಕಿದ್ದಾರೆ. ಆದರೆ ಇದುವರೆವಿಗೂ ಗಾರ್ಡನ್ ಮಾಡದ ಪ್ರಯುಕ್ತ ಅಲ್ಲಿ ಹುಲ್ಲು ಬೆಳೆದಿದ್ದು ಅಲ್ಲಿ ದನಕರುಗಳು ನುಗ್ಗಿ ಹುಲ್ಲು ಮೇಯುತ್ತಿದ್ದು ಅಲ್ಲಿ ಹಾಕಿರುವ ಬೇಲಿಯನ್ನು ಜನ ಕಿತ್ತುಕೊಂಡು ಹೋಗಿರುತ್ತಾರೆ. ಈ ಜಾಗವನ್ನು ಏಕೆ ಈ ಸ್ಥಿತಿಯಲ್ಲಿ ಬಿಟ್ಟಿದ್ದೀರಿ? ಈ ಬಗ್ಗೆ ಮುಂದೆ ಏನು ಕ್ರಮ ಕೈಗೊಳ್ಳುತ್ತೀರಿ?

ಶ್ರೀ ಎಂ. ಮಹದೇವ್.—ರಸಬಾಳೆಹಣ್ಣಿನ ಸಂಶೋಧನಾ ಕೇಂದ್ರವನ್ನು ನಂಜನಗೂಡಿಗೆ ಕೊಡುವ ಏರ್ಪಾಡು ಮಾಡುತ್ತೀರಾ?

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್.—ಮಾನ್ಯ ಸದಸ್ಯರು ಈ ವಿಷಯಗಳನ್ನೆಲ್ಲಾ ನಿನ್ನೆ ಹೇಳಿದ್ದರೆ ಸರಿಯಾದ ಮಾಹಿತಿ ತರಿಸಿ ಉತ್ತರ ಕೊಡಬಹುದಿತ್ತು. ಈಗ ಬಹುತೇಕ ಫಾರಂಗಳ ಪರಿಸ್ಥಿತಿ ಹೀಗೆ ಇದೆ ಎಂಬುದನ್ನು ನಾನು ಮೊದಲೇ ಹೇಳಿದ್ದೇನೆ. ಇವೆಲ್ಲಕ್ಕೂ ಹೊಸ ಚೈತನ್ಯ ಕೊಡಬೇಕೆಂದು ನಾವು ಇದ್ದೇವೆ. ಇನ್ನು ನಂಜನಗೂಡಿಗೆ ರಸಬಾಳೇಹಣ್ಣಿನ ಸಂಶೋಧನಾ ಕೇಂದ್ರ ಕೊಡುವ ಬಗ್ಗೆ ಸರ್ಕಾರದ ಗಮನದಲ್ಲಿ ಇಲ್ಲ.

ಶ್ರೀ ಬಿ. ಬೈರಾಪ್ಪಾಜಿ.—ಇವತ್ತು ಈ ರಾಜ್ಯದಲ್ಲಿ ಸುಮಾರು ೧,೩೦೦ ತೋಟಗಾರಿಕಾ ಫಾರಂ ಗಳು ಇದ್ದು ಇವುಗಳಲ್ಲಿ ಸುಮಾರು ೩೦೦ ಫಾರಂಗಳು ಮಾತ್ರ ಸರ್ಕಾರದಿಂದ ಅಂಗೀಕೃತವಾಗಿದ್ದು ಉಳಿದ ಫಾರಂಗಳಿಗೆ ಹಣವನ್ನು ಏನು ೩೦೦ ಫಾರಂಗಳಿಗಾಗಿ ಕೊಡಲಾಗುತ್ತಿದೆ ಅದರಿಂದಲೇ ಖರ್ಚು ಮಾಡುತ್ತಿದ್ದಾರೆಂದು ತಿಳಿದು ಬಂದಿದೆ. ಇದು ತಿಳಿದುಬಂದಿರುವ ವರ್ತಮಾನ. ಇವತ್ತು ಈ ಎಲ್ಲಾ ಫಾರಂಗಳನ್ನು ಏನಾದರೂ ಹರಾಜು ಹಾಕಿದ ಪಕ್ಷದಲ್ಲಿ ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿ ಗಳು ಬರುತ್ತದೆ. ತಾವು ಮಾಡಿರುವ ಫಾರಂಗಳು ಒಳ್ಳೊಳ್ಳೆಯ ಜಾಗದಲ್ಲಿ ಇದ್ದು ಅವುಗಳನ್ನು ತಾವು ಇಟ್ಟುಕೊಂಡು ಹೆಚ್ಚು ಅವುಗಳಿಂದ ಉತ್ಪಾದನೆ ಮಾಡಬಹುದಾಗಿದೆ. ಆ ದೃಷ್ಟಿಯಿಂದ

ಇರುವ ಎಲ್ಲಾ ಫಾರಂಗಳಿಗೂ ಕೂಡ ಸರ್ಕಾರ ಮಂಜೂರಾತಿ ಪಡೆಯುತಕ್ಕ ಏರ್ಪಾಡನ್ನು ಏಕೆ ಮಾಡಿಲ್ಲ? ಎಷ್ಟು ದಿವಸದಲ್ಲಿ ಮಾಡುತ್ತೀರಾ? ಇವತ್ತು ಎಲ್ಲಾ ಫಾರಂಗಳಿಗೂ ಸರ್ಕಾರದಿಂದ ಹಣ ಒದಗಿಸುವ ವ್ಯವಸ್ಥೆ ಆಗಬೇಕು. ಇದು ಬಹಳ ಪ್ರಾಮುಖ್ಯವಾದ ವಿಚಾರ. ಇವತ್ತು ಜನ ಸೊಸೈಟಿಗಳಿಗೆ ಹಾಲನ್ನು ಕೊಡಲು ಮುಂದೆ ಬರುತ್ತಿಲ್ಲ. ಕಾರಣ ಹಸುಗಳ ಮೇವಿನ ಬೆಲೆ ಜಾಸ್ತಿ ಆಗಿದ್ದು ತಾವು ಹಾಲಿನ ಬೆಲೆ ಜಾಸ್ತಿ ಮಾಡಿರುವುದಿಲ್ಲ. ಆದ್ದರಿಂದ ಹಾಲಿನ ಬೆಲೆಯನ್ನು ಯಾವಾಗ ಜಾಸ್ತಿ ಮಾಡುತ್ತೀರಿ?

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್.—ಮಾನ್ಯ ಸದಸ್ಯರು ೧,೩೦೦ ತೋಟಗಾರಿಕಾ ಫಾರಂಗಳು ಇವೆ ಎಂದು ಹೇಳಿದರು. ಆದರೆ ನಮಗೆ ತಿಳಿದಿರುವ ಪ್ರಕಾರ ೩೫೨ ಫಾರಂಗಳು ಇರುತ್ತವೆ. ಈ ಬಗ್ಗೆ ಅವರಲ್ಲಿ ಮಾಹಿತಿ ಇದ್ದರೆ ಕಳುಹಿಸಿಕೊಡಲಿ. ಇನ್ನು ಈ ತೋಟಗಾರಿಕಾ ಫಾರಂಗಳು ಲಾಭ ದಾಯಕವಾಗಿಲ್ಲವೆಂಬುದನ್ನು ಎಲ್ಲರೂ ಒಪ್ಪಬೇಕಾಗುತ್ತದೆ. ಇವು ಲಾಭದಾಯಕ ಹೇಗೆ ಆಗಬೇಕು ಹಾಗೂ ಅಲ್ಲಿನ ರೈತರಿಗೆ ಇವು ಅನುಕೂಲ ಆಗತಕ್ಕ ಹಾಗೂ ಇವುಗಳಿಂದ ರೈತರು ಮಾರ್ಗದರ್ಶನ ಪಡೆಯುತಕ್ಕ ಬಗ್ಗೆ ಏನೇನು ಮಾಡಬೇಕೆಂಬುದರ ಬಗ್ಗೆ ಸರ್ಕಾರ ನಿಲುವು ತೆಗೆದುಕೊಂಡಿದೆ. ಇದಕ್ಕೆ ಹೊಸ ಚೈತನ್ಯ ಕೊಡಬೇಕಾಗಿದೆ. ಇದನ್ನು ಪ್ರತಿ ತಾಲ್ಲೂಕಿನಲ್ಲಿ ಏನೇನು ಬೆಳೆ ಬೆಳೆಯುತ್ತಾರೆ ಅವನ್ನು ಬೆಳೆಯುವ ಬಗ್ಗೆ, ಆ ಬಗ್ಗೆ ಜನರಿಗೆ ಮಾರ್ಗದರ್ಶನ ಕೊಟ್ಟು ಪ್ರೋತ್ಸಾಹ ಕೊಡುವ ಬಗ್ಗೆ ಒದಗಿಸಿಕೊಟ್ಟು ಅನುಕೂಲ ಮಾಡಿಕೊಡಬೇಕಾಗುತ್ತದೆ. ಇನ್ನು ಕೆ.ಡಿ.ಡಿ.ಸಿ ಬಗ್ಗೆ ಆ ಬೇಡಿಕೆ ಬಗ್ಗೆ ಮುಂದೆ ಉತ್ತರ ಕೊಡುವಾಗ ಹೇಳುತ್ತೇನೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ನಮ್ಮ ಕಡೆ ಹೆಚ್ಚು ಮೆಣಸಿನಕಾಯಿಯನ್ನು ಬೆಳೆಯು ತ್ತೇವೆ. ಸಂಕೇಶ್ವರ ಮೆಣಸಿನಕಾಯಿಗೆ ಬಾಂಬೆ ಮಾರ್ಕೆಟ್ಟಿನಲ್ಲಿ ಒಳ್ಳೆಯ ಬೆಲೆ ಇದೆ. ಈ ಬೆಳೆಯು ಬಗ್ಗೆ ಕಳೆದ ೧೦-೧೫ ವರ್ಷಗಳಿಂದ ಯಾವುದೇ ರೀಸರ್ಚ್ ಆಗಿಲ್ಲ. ಈ ಒಂದು ಬೆಳೆಯನ್ನು ಗಣನೆಗೆ ತೆಗೆದುಕೊಂಡು ಇದಕ್ಕೆ ಪ್ರೋತ್ಸಾಹ ಕೊಡುತ್ತೀರಾ ಇಲ್ಲವೇ ಈ ಬೆಳೆಯನ್ನು ವ್ಯವಸಾಯ ಇಲಾಖೆಗೆ ವರ್ಗಾವಣೆ ಮಾಡುತ್ತೀರಾ? ಅಥವಾ ಈ ಬಗ್ಗೆ ರೀಸರ್ಚ್ ಸೆಂಟರ್ ಸ್ಥಾಪನೆ ಮಾಡುತ್ತೀರಾ?

ಶ್ರೀ ಕೊಪ್ಪದ್.—೨೦ ಅಂಶಗಳ ಸಭೆಯನ್ನು ಕರೆಯುವುದಿಲ್ಲ. ತೋಟಗಾರಿಕೆ ಇಲಾಖೆಯು ಬಗ್ಗೆ ಏನು ಕಾರ್ಯಕ್ರಮ ಹಾಕಿಕೊಂಡಿದ್ದಾರೆಂಬುದು ನಮಗೆ ಗೊತ್ತಾಗುವುದಿಲ್ಲ. ಸರಿಯಾಗಿ ಕೆಲಸ ಮಾಡುವಂತೆ ತೋಟಗಾರಿಕೆ ಇಲಾಖೆ ಮುಂದಿಗೆ ಹೇಳಬೇಕು?

ಶ್ರೀ ಹೆಚ್. ಜಿ. ಚೆನ್ನಪ್ಪ.—ರಾಯಚೂರು ಡಿವಿಜನ್ನಿನಲ್ಲಿ ಸುಮಾರು ೮೦ ಟನ್ ತಂತಿ ಬೇಲಿ ಯನ್ನು ಬೇರೆ ಬೇರೆ ಫಾರಂಗಳಿಗೆ ಹಂಚಿದ್ದಾರೆಂದು ಹೇಳಿದರು. ಅದರ ಬಗ್ಗೆ ಯಾವ ವರದಿಯೂ ಇಲ್ಲ. ದುರುಪಯೋಗವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ? ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ಜಿ. ಕೆ. ಸುಬ್ಬಯ್ಯ.—ವಿರಾಜಪೇಟೆ ಗೋಣಿಕೊಪ್ಪದಲ್ಲಿ ಹಣ್ಣಿನ ರಸ ತೆಗೆಯುವ ಕೇಂದ್ರ ಇದೆ. ಇದರ ಚಟುವಟಿಕೆ ಏನೂ ನಡೆಯುತ್ತಿಲ್ಲ. ಇದನ್ನು ಅಭಿವೃದ್ಧಿ ಪಡಿಸುವ ಬಗ್ಗೆ ಸರ್ಕಾರ ದವರು ಕ್ರಮ ತೆಗೆದುಕೊಳ್ಳುತ್ತಾರೆಯೆ?

ಶ್ರೀ ಎಂ. ವರದೇಗೌಡ.—ಆಯಾಯ ತಾಲ್ಲೂಕು ಫಾರಂಗಳಲ್ಲಿ ಬೆಳೆಯುತಕ್ಕ ಗಿಡಗಳು ಆ ಭಾಗದ ರೈತರಿಗೆ ಸಿಗುತ್ತಿಲ್ಲ ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ? ಆಯಾಯ ತಾಲ್ಲೂಕಿನಲ್ಲಿಯೇ ಬೆಳೆದಂಥ ಗಿಡಗಳನ್ನು ಅಲ್ಲಿನ ರೈತರಿಗೆ ಒದಗಿಸುವ ಏರ್ಪಾಡು ಮಾಡುತ್ತೀರಾ?

ಶ್ರೀ ವೈ. ಕೆ. ರಾಮಯ್ಯ.—ತೋಟಗಾರಿಕೆ ಇಲಾಖೆಯು ನೂರಾರು ಫಾರಂಗಳಲ್ಲಿ ಸಾವಿರಾರು ಗಿಡಗಳನ್ನು ಇಟ್ಟಿದ್ದಾರೆ. ಅಲ್ಲಿ ಹೋಗಿ ನೋಡಿದರೆ ದೇಶ ಆಳುವಂತ ಜನ ನಾಚಿಕೆ ಪಡುವಂಥ ಪರಿಸ್ಥಿತಿ ಇದೆ. ಇವುಗಳ ಉಪಯುಕ್ತತೆ, ಅನುಪಯುಕ್ತತೆ ಬಗ್ಗೆ ಇಲಾಖಾ ಅಧಿಕಾರಿಗಳು ಅಪ್ಪಣೆ ಕೊಡಿಸಿದ್ದಾರೆಂದು ಕೇಳಿದ್ದೇನೆ. ಇಲಾಖೆಯವರು ಪ್ರಗತಿಪರವಾದ ಕಾರ್ಯಕ್ರಮಗಳನ್ನು ಹಾಕಿ ಕೊಳ್ಳಲಿ. ಇಲ್ಲದೇ ಹೋದರೆ ಈ ಭೂಮಿಯನ್ನು ರೈತರಿಗೆ ತಲಾ ೧೦-೧೦ ಎಕರೆಯಂತೆ ಹಂಚು ವುದಕ್ಕೆ ವ್ಯವಸ್ಥೆ ಮಾಡುತ್ತೀರಾ? ಇಂಜಿನಿಯರಿಂಗ್ ಇಲಾಖೆಗೆ ಉತ್ತಮ ಇಂಜಿನಿಯರ್‌ರವರನ್ನು ಹೇಗೆ ಮುಖ್ಯಸ್ಥನನ್ನಾಗಿ ನೇಮಕ ಮಾಡುತ್ತೀರಿ. ಹಾಗೆ ಗಿಡಮರಗಳ ಬಗ್ಗೆ ಗೊತ್ತಿರುವಂಥ ಉತ್ತಮ ಅಧಿಕಾರಿಯನ್ನು ಇಲಾಖೆಯ ಮುಖ್ಯಸ್ಥರನ್ನಾಗಿ ನೇಮಕ ಮಾಡುತ್ತೀರಾ?

ಶ್ರೀ ಬಿ. ಆರ್. ಪಾಟೀಲ್.—ಗುಲ್ಬರ್ಗದಲ್ಲಿ ಹಣ್ಣು ಹಂಪಲುಗಳನ್ನು ಇಡುವುದಕ್ಕೆ ಒಂದು ಶೈತ್ಯಾಗಾರವನ್ನು ಕೊಡಬೇಕೆಂದು ಹೇಳಿದೆ. ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ? ಹಿಮಾಚಲ ಪ್ರದೇಶದವರು ಸೇಬು ಹಣ್ಣುಗಳನ್ನು ಸಂಗ್ರಹಿಸಿ ದೇಶದ ಎಲ್ಲಾ ಭಾಗಗಳಿಗೂ ಕಳುಹಿಸುವಂಥ ವ್ಯವಸ್ಥೆ ಮಾಡಿದ್ದಾರೆ. ಅಂತಹ ಒಂದು ಯೋಜನೆಯನ್ನು ನಮ್ಮ ಸರ್ಕಾರದವರು ಹಾಕಿಕೊಳ್ಳುವರೆ? ಇದರಿಂದ ವ್ಯಾಪಾರಿಗಳ ವಂಚನೆಗೆ ರೈತರು ಬಲಿಯಾಗುವುದು ತಪ್ಪುತ್ತದೆ.

ಶ್ರೀ ಕೆ. ಶಿವಮೂರ್ತಿ.—ತೋಟಗಾರಿಕೆ ಇಲಾಖೆಯ ಮೂಲಕ ಉತ್ತಮವಾದಂಥ ತೆಂಗಿನ ಸಸಿಗಳನ್ನು ಒದಗಿಸುವುದಕ್ಕೆ ವ್ಯವಸ್ಥೆ ಮಾಡುತ್ತೀರಾ? ದಾವಣಗೆರೆಯಲ್ಲಿ ಆಂಧ್ರದಿಂದ ಕೀಳು ಮಟ್ಟದ ಸಸಿಗಳನ್ನು ತಂದು ಮಾರಾಟ ಮಾಡುತ್ತಾರೆ. ಇದನ್ನು ನಿಲ್ಲಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಸಿ. ಬೋರಯ್ಯ.—ರಾಮನಗರ ತಾಲ್ಲೂಕಿನಲ್ಲಿ ಬೋರಮಂಗಲದ ಹತ್ತಿರ ಗೋಡಂಬಿ ಫಾರಂನ್ನು ಬೆಳೆಸಿದ್ದಾರೆ. ಅಲ್ಲಿ ಮರಗಳು ಬೆಳೆದಿವೆ. ಅದನ್ನು ನೋಡುವವರೇ ಇಲ್ಲ. ಈ ಜಮೀನು ಲೋಕೋಪಯೋಗಿ ಇಲಾಖೆಗೆ ಸೇರಿದ್ದೋ, ತೋಟಗಾರಿಕೆ ಇಲಾಖೆಗೆ ಸೇರಿದ್ದೋ ಗೊತ್ತಿಲ್ಲ. ಫಾರಂನ ಸುತ್ತ ಬೇಲಿ ಹಾಕುವುದು ಸೂಕ್ತ. ಅಲ್ಲಿಗೆ ಒಬ್ಬರು ಅಸಿಸ್ಟೆಂಟ್ ಡೈರೆಕ್ಟರನ್ನು ನೇಮಕ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಎಸ್. ಸೂರ್ಯನಾರಾಯಣರಾವ್.—ಬೆಂಗಳೂರು ನಗರಕ್ಕೆ ಸುತ್ತಮುತ್ತಲ ಗ್ರಾಮಗಳಿಂದ ತರಕಾರಿ ಬರುತ್ತದೆ. ಮಧ್ಯವರ್ತಿಗಳು ಬಹಳ ಕಡಿಮೆ ಬೆಲೆಗೆ ಕೊಂಡು ಹೆಚ್ಚಿನ ಬೆಲೆಗೆ ನಾಗರೀಕರಿಗೆ ಮಾರಾಟ ಮಾಡುತ್ತಾರೆ. ತಮ್ಮ ಇಲಾಖೆಯಿಂದಲೇ ಕೊಂಡು ಕೊಂಡು ರೈತರಿಗೆ ಹೆಚ್ಚಿನ ಬೆಲೆ ಸಿಗುವಂತೆ ಮಾಡುತ್ತೀರಾ?

ಶ್ರೀ ವಿಶ್ವನಾಥ ರೆಡ್ಡಿ.—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಸೂರ್ಯನಾರಾಯಣ ರಾವ್ ರವರು ಹೇಳಿದ ವಿಚಾರವು ಸರ್ಕಾರದ ಪರಿಶೀಲನೆಯಲ್ಲಿದೆ. ಇದನ್ನು ಸಹಕಾರ ಇಲಾಖೆ ಮಾಡಬೇಕೆ? ಕಾರ್ಪೋರೇಷನ್ ಮಾಡಬೇಕೇ ಅಥವಾ ತೋಟಗಾರಿಕೆ ಇಲಾಖೆ ಮಾಡಬೇಕೆ ಎನ್ನುವ ಬಗ್ಗೆ ಸಮಾಲೋಚಿಸಬೇಕಾಗಿದೆ. ಇನ್ನು ಮಾನ್ಯ ಸದಸ್ಯರಾದ ಬಿ. ಆರ್. ಪಾಟೀಲರು ಹೇಳಿದಂತೆ ಈ ಸಾರಿ ಧಾರವಾಡದಲ್ಲಿ ಶೈತ್ಯಾಗಾರವನ್ನು ತೆಗೆದುಕೊಳ್ಳಲಾಗುವುದು. ಬೇರೆ ಕಡೆಗೆ ಸಂಪನ್ಮೂಲಗಳ ಆಧಾರದ ಮೇಲೆ ಶೈತ್ಯಾಗಾರಗಳನ್ನು ಮಾಡುವ ಕ್ರಮ ತೆಗೆದುಕೊಳ್ಳಲಾಗುವುದು. ವ್ಯವಸಾಯ ಇಲಾಖೆಯವರು ಸಂಶೋಧನೆಯನ್ನು ಮಾಡುತ್ತಿದ್ದಾರೆ. ನಮ್ಮ ಇಲಾಖೆಯವರು ಇನ್ನು ಆಸ್ತೆ ವಹಿಸಿಲ್ಲ. ಪ್ರತಿಯೊಂದು ಫಾರಂನಲ್ಲಿ ಅಲ್ಲಿರತಕ್ಕ ಅಧಿಕಾರಿಗಳು ೧೦ ಪರ್ಸೆಂಟ್ ಸ್ವತಃ ಸಂಶೋಧನೆ ಮಾಡುವಂತಹ ಪ್ರವೃತ್ತಿಯನ್ನು ಬೆಳೆಸಿಕೊಳ್ಳಬೇಕೆಂಬ ವಿಚಾರದಲ್ಲಿ ಈಗಾಗಲೇ ಇಲಾಖೆಯವರ ಜೊತೆಯಲ್ಲಿ ಮಾತನಾಡಿದ್ದೇನೆ. ಇನ್ನು ಮಾನ್ಯ ಸದಸ್ಯರಾದ ಬೋರಯ್ಯನವರು ಕೇಳಿದ ಪ್ರಶ್ನೆಗೆ ನನ್ನ ಹತ್ತಿರ ಮಾಹಿತಿ ಇಲ್ಲ. ಆದರೂ ಕೂಡ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ. ಮಾನ್ಯ ಸದಸ್ಯರಾದ ರಾಮಯ್ಯನವರು ಹೇಳಿದ ವಿಷಯ ಬಹಳ ಕಡೆ ಇದೆ. ನಾನು ಕೂಡ ಪ್ರವಾಸ ಹೋಗತಕ್ಕ ಸಂದರ್ಭದಲ್ಲಿ ಅನೇಕ ಕಡೆ ನೋಡಿದ್ದೇನೆ. ಎಲ್ಲಿ ತಪ್ಪಾಗಿದೆ ಎನ್ನುವುದನ್ನು ಕಂಡು ಹಿಡಿದು ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು. ಇನ್ನು ಡೈರೆಕ್ಟರನ್ನು ನೇಮಿಸುವ ವಿಚಾರ ಹೇಳಿದ್ದಾರೆ. ಕಳೆದ ಹತ್ತು ವರ್ಷಗಳಿಂದ ಸೀನಿಯಾರಿಟಿ ಪಟ್ಟಿ ತಯಾರಾಗಿರಲಿಲ್ಲ. ಈಗ ಅದರ ಕಡೆ ಗಮನಕೊಡಲಾಗಿದೆ. ಅದು ಆದಮೇಲೆ ಈ ವಿಚಾರ ಮಾಡುವುದು ಸೂಕ್ತವಾಗುತ್ತದೆ.

ಶ್ರೀ ವೈ. ಕೆ. ರಾಮಯ್ಯ.—ನಿಮ್ಮಲ್ಲಿ ಯಾರು ಸೀನಿಯರ್ ಇರುತ್ತಾರೋ ಅಂಥವರನ್ನು ಹಾಕಿ.

ಶ್ರೀ ವಿಶ್ವನಾಥ ರೆಡ್ಡಿ.—ತಮ್ಮ ಸಲಹೆಯನ್ನು ಗಣನೆಗೆ ತೆಗೆದುಕೊಳ್ಳುತ್ತೇವೆ. ಮಾನ್ಯ ಶಿವಮೂರ್ತಿಯವರು ತಿಳಿಸಿದ ವಿಚಾರದಲ್ಲಿ ಇಲಾಖಾ ಅಧಿಕಾರಿಗಳ ಜೊತೆ ಚರ್ಚೆ ಮಾಡಿ ಒಳ್ಳೆಯ ಸಸಿಗಳನ್ನು ಒದಗಿಸುವುದಕ್ಕೆ ವ್ಯವಸ್ಥೆ ಮಾಡಿಸುತ್ತೇನೆ. ಆಂಧ್ರದಿಂದ ಬರುವಂಥ ಕೀಳು ಮಟ್ಟದ ಸಸಿಗಳನ್ನು ತೆಗೆದುಕೊಳ್ಳದಂತೆ ರೈತರಿಗೆ ಸಲಹೆ ನೀಡಿ. ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎಂ. ಮಹದೇವ.—ನಂಜನಗೂಡಿನ ತಾಲ್ಲೂಕಿನಲ್ಲಿ ತೋಟಗಾರಿಕೆ ಇಲಾಖೆಗೆ ಕೊಟ್ಟಿರತಕ್ಕ ಜಮೀನು ಕಡಿಮೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ವಿಶ್ವನಾಥ ರೆಡ್ಡಿ.—ಈಗಾಲೇ ಸುಮಾರು ೭೦ ಎಕರೆ ಭೂಮಿ ತೆಗೆದುಕೊಂಡಿದ್ದೇವೆ ಆ ಜಮೀನಿನಲ್ಲಿ ರಸ ಬಾಳೆ ಬೆಳೆಯುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಕೆ. ಶಿವಮೂರ್ತಿ.—ಅಧ್ಯಕ್ಷರೆ, ನನ್ನ ಪ್ರಶ್ನೆಗೆ ಮಾನ್ಯ ಮಂತ್ರಿಗಳು ಸರಿಯಾಗಿ ಉತ್ತರ ಹೇಳಲಿಲ್ಲ.

ಉಪಾಧ್ಯಕ್ಷರು.—ತಾವು ಏನು ಸಲಹೆ ಕೊಟ್ಟಿದ್ದೀರಿ, ಅದರ ಬಗ್ಗೆ ಪರಿಶೀಲಿಸುತ್ತೇವೆಂದ ಮಾನ್ಯ ಮಂತ್ರಿಗಳು ತಿಳಿಸಿದ್ದಾರೆ ದಯಮಾಡಿ ಮಾನ್ಯ ಸದಸ್ಯರು ಕುಳಿತು ಕೊಳ್ಳಬೇಕು.

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್.—ಅಧ್ಯಕ್ಷರೆ, ಈ ತೋಟಗಾರಿಕೆ ಬಗ್ಗೆ ನಾನು ಜನರಲ್ ಆಗಿ ಹೇಳಿದ್ದೇನೆ. ಅದರ ಪ್ರಕಾರ ಎಲ್ಲಾ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತೇನೆ.

ಒಬ್ಬ ಸದಸ್ಯರು.—ಅಧ್ಯಕ್ಷರೆ, ರಾಯಚೂರು ವಿಭಾಗದ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಹೇಳಲಿಲ್ಲ.

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್.—ಅಧ್ಯಕ್ಷರೆ, ಈಗ ಅದು ನನ್ನ ಗಮನಕ್ಕೆ ಬಂದಿದೆ ಅದನ್ನು ಪರಿಶೀಲಿಸುತ್ತೇನೆ.

ಒಬ್ಬ ಮಾನ್ಯ ಸದಸ್ಯರು.—ಪ್ರತಿಯೊಂದು ತಾಲ್ಲೂಕಿನಲ್ಲಿ ಬೆಳೆಯುತಕ್ಕ ಹಣ್ಣುಗಳು ಅವರಿಗೆ ತಿನ್ನಲಿಕ್ಕೆ ಸಿಕ್ಕುವುದಿಲ್ಲ. ಆ ಬಗ್ಗೆ ಸರಿಯಾದ ವ್ಯವಸ್ಥೆ ಮಾಡಬೇಕು.

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್.—ಅಧ್ಯಕ್ಷರೆ, ಇನ್ನು ಮುಂದೆ ಆ ತಾಲ್ಲೂಕಿಗೆ ಬರತಕ್ಕ ಸಸಿಗಳನ್ನು ಅಲ್ಲೇ ತಯಾರು ಮಾಡಿಕೊಡತಕ್ಕದ್ದು ಮಾಡುತ್ತೇವೆ. ಇನ್ನು ತೋಟದ ಬೆಳೆಗಳು ನಮಗೆ ತಿನ್ನಲಿಕ್ಕೆ ಸಿಕ್ಕುವುದಿಲ್ಲ ಎಂದು ಹೇಳಿದ್ದಾರೆ. ಅದರ ಬಗ್ಗೆ ಗಣನೆಗೆ ತೆಗೆದುಕೊಂಡು ಆ ತಾಲ್ಲೂಕಿನ ಸುತ್ತಮುತ್ತ ಜನರಿಗೆ ಅದರ ಪ್ರಾಶಸ್ತ್ಯ ಸಿಕ್ಕಬೇಕು ಎನ್ನುವುದರ ಬಗ್ಗೆ ಸರ್ಕಾರ ಗಮನದಲ್ಲಿಟ್ಟುಕೊಳ್ಳುತ್ತದೆ.

ಒಬ್ಬ ಸದಸ್ಯರು.—ಬಾಗಲಕೋಟೆ ತಾಲ್ಲೂಕ್ ಆಫೀಸಿನ ಹತ್ತಿರ ಒಂದು ಎಕರೆ ಜಮೀನು ನೀರು ಇಲ್ಲದೆ ಒಣಗಿ ಹೋಗಿದೆ. ಅಲ್ಲಿ ಬೋರ್‌ವೆಲ್ ಹಾಕಿಸಿ ನೀರು ಒದಗಿಸುವ ವ್ಯವಸ್ಥೆ ಮಾಡುತ್ತೀರಾ ?

ಉಪಾಧ್ಯಕ್ಷರು.—ಮಾನ್ಯ ಸದಸ್ಯರು ಮಂತ್ರಿಗಳ ಆಫೀಸ್‌ಗೆ ಹೋಗಿ ತಿಳಿಸಿ, ಎಲ್ಲಾ ಮಾಡಿ ಕೊಡುತ್ತಾರೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ತುಮಕೂರು ಜಿಲ್ಲೆಯಲ್ಲಿ ೧೦ ಸಾವಿರ ತೆಂಗಿನ ಗಿಡಗಳನು ಹಾಕಿದ್ದಾರೆ. ಅಲ್ಲಿ ಬೆಳ್ಳಾರ ಫಾರಮ್ ಇದೆ ಈಗಾಗಲೇ ಅಲ್ಲಿ ೫ ಸಾವಿರ ಗಿಡ ಒಣಗಿದೆ. ಅಲ್ಲಿ ಪೂರ್ತಿ ಗಿಡಗಳು ಒಣಗಿ ಹೋಗುವುದಕ್ಕೆ ಮುಂಚೆ ಕ್ರಮ ತೆಗೆದುಕೊಂಡು ಆ ಒಂದು ಫಾರಮ್ ಅಭಿವೃದ್ಧಿ ಮಾಡಲಿಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್.—ಅಲ್ಲಿಗೆ ಸಸಿಗಳನ್ನು ಕೊಡಬೇಕೆಂದು ವಿಚಾರ ಬಂದಿಲ್ಲ. ಮಾನ್ಯ ಸದಸ್ಯರು ಸಂಬಂಧಪಟ್ಟ ಅಧಿಕಾರಿಗಳನ್ನು ನೋಡಲಿ, ಅವರು ಅಲಕ್ಷ್ಯ ಮಾಡಿದರೆ ನನ್ನ ಕಡೆ ವರದಿ ಕೊಡಲಿ ಆಗ ನಾನು ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ. ಇನ್ನು ಮಾನ್ಯ ಹುಚ್ಚಮಾಸ್ತಿಗೌಡರು, ಬೆಳ್ಳಾರ ಫಾರಮ್ ಬಗ್ಗೆ ಹೇಳಿದರು. ದುರ್ದೈವದಿಂದ ಹೋದ ಸಾರಿ ನೀರು ಆ ಒಂದು ಕಣಿವೆಯಲ್ಲಿ ಕಡಿಮೆಯಾದುದರಿಂದ ಕೆಲವು ಗಿಡಗಳು ಒಣಗಿ ಹೋಗಿವೆ. ಆ ಬಗ್ಗೆ ಸಾಕಷ್ಟು ಹೆಚ್ಚಿನ ಕಾರ್ಯಕ್ರಮ ತೆಗೆದುಕೊಳ್ಳಬೇಕಾಗಿದೆ ಅದನ್ನು ಪರಿಶೀಲಿಸುತ್ತಿದ್ದೇವೆ. ಅದು ಒಂದು ದೊಡ್ಡ ಫಾರಮ್ ಅದನ್ನು ಚೆನ್ನಾಗಿ ಬೆಳೆಸಬೇಕೆಂದು ಸರ್ಕಾರದ ದೃಷ್ಟಿಯಲ್ಲಿದೆ.

ಉಪಾಧ್ಯಕ್ಷರು.—ಈಗ ಪ್ರಶ್ನೋತ್ತರಗಳು.

ಶ್ರೀ ವೈ. ರಾಮಕೃಷ್ಣ.—ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಇನ್ನೂ ಅನಿಮಲ್ ಹಸ್‌ಬೆಂಡರಿ ಬಗ್ಗೆ ಉತ್ತರ ಕೊಟ್ಟಿಲ್ಲ.

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್.—ಸನ್ಮಾನ್ಯ ಸಭಾಧ್ಯಕ್ಷರೆ, ನಾನು ತೋಟಗಾರಿಕೆಯ ಬಗ್ಗೆ ೧೫ ನಿಮಿಷದಲ್ಲಿ ಮುಗಿಸಿದೆ, ಆದರೂ ಮಾನ್ಯ ಸದಸ್ಯರುಗಳ ಪ್ರಶ್ನೆಯಿಂದ ಹೆಚ್ಚು ಸಮಯ ಆಯಿತು. ಈಗ ತಮ್ಮ ಅಪ್ಪಣೆ ಪಡೆದು ಪಶುಸಂಗೋಪನ, ಡೈರಿ ಅಭಿವೃದ್ಧಿ ಬಗ್ಗೆ ಕೆಲವೊಂದು ವಿಚಾರ ತಿಳಿಸುತ್ತೇನೆ, ಮಾನ್ಯ ಸದಸ್ಯರು ಇದರ ಬಗ್ಗೆ ಸಾಕಷ್ಟು ಸಲಹೆಗಳನ್ನು ಕೊಟ್ಟಿದ್ದಾರೆ ಅವರಿಗೆ ನಾನು ಕೃತಜ್ಞನಾಗಿದ್ದೇನೆ. ಇನ್ನು ಮಾನ್ಯ ಸದಸ್ಯರಾದ ಎಸ್.ಕೆ. ಕಾಂತ ಅವರು ಡೈರಿ ಸಿಬ್ಬಂದಿಯ ಬಗ್ಗೆ ಹೇಳಿದ್ದಾರೆ, ಇದು ಕೇವಲ ಗುಲ್ಬರ್ಗಕ್ಕೆ ಮೀಸಲು ಅಲ್ಲ, ಈ ಪ್ರಶ್ನೆ ಎಲ್ಲಾ ಕಡೆ ಇದೆ, ಇವೆಲ್ಲವನ್ನೂ ಸರ್ಕಾರ ಗಣನೆಗೆ ತೆಗೆದುಕೊಳ್ಳುತ್ತದೆ. ಇನ್ನು ಮಾನ್ಯ ಸೋಮಪ್ಪನವರು ಇದೇ ಪ್ರಕಾರ ರಾಮಲಿಂಗಯ್ಯನವರು ಕೂಡ ಕೆ.ಡಿ.ಡಿ.ಸಿ.ಬಗ್ಗೆ ಹೇಳಿದ್ದಾರೆ. ಅವೆಲ್ಲವೂ ಕೂಡ ಸರ್ಕಾರದ ಪರಿಶೀಲನೆಯಲ್ಲಿದೆ. ಇದು ಕೇವಲ ನಮ್ಮ ಇಲಾಖೆಯಲ್ಲೇ ಇಲ್ಲ, ಎಷ್ಟೋ ಇಲಾಖೆಗೆ ಸಂಬಂಧಪಟ್ಟಿದೆ. ಅದನ್ನು ಕ್ರೋಢೀಕರಿಸಿ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದು ಕೊಳ್ಳುತ್ತೇವೆ. ಇನ್ನು ಸೋಮಪ್ಪನವರು, ಶಿವಮೂರ್ತಿಯವರು, ಮುನಿಯಪ್ಪನವರು ಹಾಲಿನ ಬೆಲೆಯ ಬಗ್ಗೆ ಹೇಳಿದ್ದಾರೆ. ಹಾಲಿನ ಉತ್ಪಾದನೆಗೆ ಸರಿಯಾದ ಬೆಲೆ ಸಿಕ್ಕುತ್ತಿಲ್ಲ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆ. ಈಗಾಗಲೇ ಕೆ.ಡಿ.ಡಿ.ಸಿ ಯಲ್ಲಿ ಒಂದು ಕಮಿಟಿ ರಚಿಸಿ, ಹಾಲು ಉತ್ಪಾದಕರಿಗೆ ಎನು ಖರ್ಚಿದೆ ಲೆಕ್ಕ ಹಾಕಿ ಏನು ಬೆಲೆ ಕೊಡಬೇಕು ಅದರ ಬಗ್ಗೆ ಒಂದು ವರದಿ ಕೊಡಲಿಕ್ಕೆ ಆ ಕಮಿಟಿಗೆ ಹೇಳಿದ್ದೇವೆ. ಆ ವರದಿ ಬಂದ ಕೂಡಲೇ ತೀವ್ರ ಕ್ರಮ ತೆಗೆದುಕೊಳ್ಳು ತ್ತೇವೆ. ಇನ್ನು ಮಾನ್ಯ ಸದಸ್ಯರಾದ ಹುಚ್ಚಮಾಸ್ತಿಗೌಡರು ಹಳ್ಳಿಕಾರ್ ಬ್ರೀಡ್‌ನ ಬಗ್ಗೆ ಕುಣಿಕೇನಹಳ್ಳಿಯಲ್ಲಿ ಫಾರಮ್ ಮಾಡಬೇಕೆಂದು ಹೇಳಿದ್ದಾರೆ. ಅದನ್ನು ಕಾರ್ಯಗತ ಮಾಡು ತ್ತಿದ್ದೇವೆ. ಅಲ್ಲಿ ಹಳ್ಳಿಕಾರ್ ತಳಿಗಳನ್ನು ಬೆಳೆಸಲಾಗುವುದು. ಇದೇ ಪ್ರಕಾರ ಹಳ್ಳಿಕಾರ, ದೇವಣಿ ಅಮೃತಮಹಲ್, ತಳಿಗಳನ್ನು ಬೆಳೆಸಲಿಕ್ಕೆ ಪ್ರಯತ್ನ ಮಾಡುತ್ತೇವೆ. ಇನ್ನು ಮಿಶ್ರತಳಿ ಮಾಡುವಾಗ ಪರದೇಶದಿಂದ ತಂದಂಥ ತಳಿಗಳಿಂದ ಯಾವ ಯಾವ ದನಗಳಿಗೆ ಸಂಪರ್ಕ ಮಾಡಿಸ ಬೇಕು, ಈ ಬಗ್ಗೆ ರೆಡ್‌ಡೇನ್ ಬೆರಸಿ ಹಾಲೆಸ್ಟಿನ್ ಜೊತೆ ಸಂಪರ್ಕ ಮಾಡಿಸಿದ್ದರ ಬಗ್ಗೆ ಪ್ರಯೋಗ ಮಾಡಬೇಕಾಗುತ್ತದೆ. ಅದಕ್ಕೆ ಸಾಕಷ್ಟು ದಿನ ಹಿಡಿಯುತ್ತದೆ. ಎಷ್ಟೇ ಸಮಯ ಆದರೂ ಕೂಡ ಸರ್ಕಾರ ಆ ಕಡೆ ಲಕ್ಷ್ಯ ಕೊಡುತ್ತದೆ. ಎಷ್ಟೇ ತಡ ಆಗರೂ ಕೂಡ ಕೆಲವೊಂದು ಫಾರಮ್‌ಗಳನ್ನು ಅದಕ್ಕಾಗಿ ಮೀಸಲಿಟ್ಟು ಪ್ರಯೋಗ ಮಾಡಿ ಕಂಡುಕೊಳ್ಳಬೇಕು ಎನ್ನುವುದು ಇದೆ. ಈ ಸೂಚನೆ ಯನ್ನು ಸಂಪೂರ್ಣವಾಗಿ ಪರಿಗಣಿಸುತ್ತೇವೆ. ಇನ್ನು ಕೆಲವೊಂದು ಪವರ್ ಬ್ರೀಡ್ ಏನಿದೆ, ರೇಸ್ ಹಾರ್ಸ್ ಪ್ರಕಾರ ಅವುಗಳನ್ನು ಕಾಪಾಡಿಕೊಂಡು ಹೋಗಬೇಕು ಎಂದು ಹೇಳಿದ್ದಾರೆ. ಇದು ಖರ್ಚಿನ ಮಾತು ಇದೆ. ಮಾನ್ಯ ಸದಸ್ಯರು ಬೆಂಬಲ ಕೊಟ್ಟರೆ ಈ ಬಗ್ಗೆ ಕಾರ್ಯಕ್ರಮ ಕೈಗೊಳ್ಳುತ್ತೇವೆಂದು ಹೇಳುತ್ತೇನೆ.

ಇನ್ನು ಮಾನ್ಯ ಸದಸ್ಯರಾದ ಹುಚ್ಚಪ್ಪನವರು ಮಾತನಾಡುತ್ತಾ ಷಿಪ್ ಬೋರ್ಡ್‌ನ ಬಗ್ಗೆ ಮಾತನಾಡುತ್ತಾ ಇದೊಂದು ಅಲಂಕಾರದ ಬೋರ್ಡ್ ಆಗಿದೆಯೆಂದು ವಾಸ್ತವಾಂಶವನ್ನೇ ಹೇಳಿದ್ದಾರೆ. ಇದು ಕೇವಲ ಒಂದೆರಡು ವರ್ಷದಿಂದ ಬಂದಿರುವುದಿಲ್ಲ. ಸುಮಾರು ೮–೧೦ ವರ್ಷ ದಿಂದಲೂ ಇದರ ಕೆಲಸ ಏನೆಂದರೆ ೩೦–೪೦ ಲಕ್ಷ ರೂಪಾಯಿಗಳನ್ನು ಖರ್ಚುಮಾಡುವುದೇ ಆಗಿದೆ ಈಗ ನಾವು ಇದಕ್ಕೆ ಒಂದು ಹೊಸ ವಾತಾವರಣವನ್ನು ನಿರ್ಮಾಣ ಮಾಡಿ ಉತ್ತಮ ರೀತಿಯಲ್ಲಿ ಕೆಲಸ ಮಾಡುವುದಕ್ಕೆ ವ್ಯವಸ್ಥೆ ಮಾಡೋಣ. ಈಗಿನ ಅಧ್ಯಕ್ಷರು ಬಹಳ ಉತ್ಸಾಹಶಾಲಿಗಳಾಗಿ ದ್ದಾರೆ, ನೀವು ಸ್ವಲ್ಪ ಮಟ್ಟಿಗಾದರೂ ಕೆಲಸವನ್ನು ತೆಗೆದುಕೊಳ್ಳಿ, ಆ ಕೆಲಸ ಲಾಭದಾಯಕವಾಗಿರ ಬೇಕು ರೈತರಿಗೆ ಕುರಿ ಸಾಕಾಣಿಕೆ ಮಾಡುವವರಿಗೆ ಲಾಭದಾಯಕವಾಗಿರಬೇಕೆಂದು ನಾವು ಈ ದಿಶೆ ಯಲ್ಲಿ ಪ್ರೋತ್ಸಾಹದಾಯಕವಾಗಿರತಕ್ಕ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು ಎಂದು ಹೇಳಿ ದ್ದೇವೆ.

ಇನ್ನು ಮಾನ್ಯ ಸದಸ್ಯರಾದ ರಾಮಕೃಷ್ಣರವರು ಮತ್ತಿತರ ಸದಸ್ಯರು ಅಮೃತಮಹಲ್ ಕಾವಲಿನ ಬಗ್ಗೆ ಸಾಕಷ್ಟು ಪ್ರಸ್ತಾಪ ಮಾಡಿದ್ದಾರೆ. ನಾನಾದರೂ ಮಾನ್ಯ ರಾಮಕೃಷ್ಣರವರನ್ನು ಕೇಳುತ್ತೇನೆ ಅವರು ೩ ವರ್ಷಕಾಲ ಮಂತ್ರಿಯಾಗಿದ್ದವರು. ಅವರು ೩ ವರ್ಷದ ಅವಧಿಯಲ್ಲಿ ಮಾಡದೇ ಇದ್ದ ಕೆಲಸವನ್ನು ನಾನು ಕೇವಲ ೨ ತಿಂಗಳಲ್ಲಿ ಹೇಗೆ ಮಾಡುವುದಕ್ಕೆ ಸಾಧ್ಯ? ಇದನ್ನು ಅವರು ತಿಳಿದುಕೊಳ್ಳಬೇಕು. ಅವರು ತಮ್ಮ ಅವಧಿಯಲ್ಲಿ ಮಾಡಿದ್ದಾದರೂ ಏನೆಂದರೆ, ಕೇವಲ ಒಂದು ಬಿಲ್ಲನ್ನು ಮಾತ್ರ ತಯಾರು ಮಾಡಿದ್ದಾರೆ. ಅದನ್ನು ಯಾವರೀತಿ ಕಾರ್ಯಗತ ಮಾಡ ಬೇಕೆಂದು ನಾವು ಯೋಚನೆ ಮಾಡುತ್ತಿದ್ದೇವೆ.

ಇನ್ನು ಮಾನ್ಯ ಸದಸ್ಯರಾದ ಬಿ.ಆರ್. ಪಾಟೀಲ್‌ರವರು ಮಾತನಾಡಿ ಗುಲ್ಬರ್ಗಾ ವಿಭಾಗದಲ್ಲಿ ಫ್ರೋಜನ್‌ಸೀಮೆನ್‌ನ್ನು ಶೇಖರಿಸಿಡುವ ವ್ಯವಸ್ಥೆ ಮಾಡಬೇಕೆಂದು ಹೇಳಿದ್ದಾರೆ. ಈಗಾಗಲೇ ನಮ್ಮ ಇಲಾಖೆಯು ವತಿಯಿಂದ ೧೨೦ ನೈಟ್ರೋಜನ್ ಟಿಟೋನಸ್ ತೆಗೆದುಕೊಳ್ಳಲಾಗಿದೆ. ಒಂದು ವಾಹನವನ್ನೂ ಕೊಟ್ಟಿದೆ. ೫೦ ಕೃತಕಗರ್ಭಧಾರಣಾ ಕೇಂದ್ರಗಳಲ್ಲಿ ಘನೀಕೃತ ವೀರ್ಯವನ್ನು ಒದಗಿಸುವ ವ್ಯವಸ್ಥೆಯನ್ನು ಮಾಡುತ್ತೇವೆ. ಇನ್ನೊಂದು ಸಂತೋಷದ ಸಂಗತಿ ಎಂದರೆ ಗುಲ್ಬರ್ಗಾ ಜಿಲ್ಲೆಯಲ್ಲಿ ಭಾರತೀಯ ಆಗ್ರೋ ಫೌಂಡೇಷನ್ ವತಿಯಿಂದ ೨೫ ಕೇಂದ್ರಗಳನ್ನು ತೆರೆಯಲಾಗಿದೆ. ಇದರಿಂದಾಗಿ ಇನ್ನು ಮುಂದೆ ಇಂಥ ತೊಂದರೆಗಳಾಗುವುದಿಲ್ಲ ಎಂದು ಭಾವಿಸಿದ್ದೇನೆ.

ಮಾನ್ಯ ಸದಸ್ಯರಾದ ಚನ್ನಪ್ಪನವರು ಪೌಲ್ಟ್ರಿ ಫಾರಂನ್ನು ಅಗ್ರಿಕಲ್ಚರಲ್ ಇಂಡಸ್ಟ್ರಿ ಎಂದು ಮಾಡಬೇಕೆಂದು ಸಲಹೆ ಕೊಟ್ಟಿದ್ದಾರೆ. ಇದು ಸರ್ಕಾರದ ಪರಿಶೀಲನೆಯಲ್ಲಿದೆ ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಇನ್ನು ಮಾನ್ಯ ಸದಸ್ಯರಾದ ಪಂಪಾಪತಿಯವರು ಡೈರಿಯ ವಿಚಾರದಲ್ಲಿ ಪ್ರಸ್ತಾಪ ಮಾಡಿದ್ದಾರೆ ಈಗಾಗಲೇ ಇಲಾಖೆಯ ವತಿಯಿಂದಲೇ ಇದರ ಮ್ಯಾನೇಜ್‌ಮೆಂಟ್ ನಡೆಯುತ್ತಿದೆ. ಮುಂದೆ ಆಪರೇಷನ್ ಫ್ಲಡ್ಸ್ ಯೋಜನೆ ಬಂದಾಗ ಅದನ್ನು ಸಂಪೂರ್ಣವಾಗಿ ನಮ್ಮ ವಶಕ್ಕೆ ತೆಗೆದುಕೊಳ್ಳುತ್ತೇವೆ ಎಂದು ಹೇಳಬಯಸುತ್ತೇನೆ, ಬಹುಶಃ ಮಾನ್ಯ ರಾಮಕೃಷ್ಣರವರ ಪ್ರಶ್ನೆಯೊಂದನ್ನು ಬಿಟ್ಟು ಉಳಿದ-ಎಲ್ಲಾ ಸದಸ್ಯರ ಪ್ರಶ್ನೆಗಳಿಗೂ ಉತ್ತರವನ್ನು ಕೊಟ್ಟಿದ್ದೇನೆಂದು ಭಾವಿಸಿದ್ದೇನೆ. ಮಾನ್ಯ ರಾಮಕೃಷ್ಣರವರು ಸುಮಾರು ೨೫ ಸಲಹೆಗಳನ್ನು ಏನು ಕೊಟ್ಟಿದ್ದಾರೆ, ಅವು ಬಹಳ ಸೂಕ್ತ ಸಲಹೆಗಳಾಗಿವೆ. ಅವರು ಹಿಂದೆ ಮಂತ್ರಿಗಳಾಗಿದ್ದವರು, ಆದ್ದರಿಂದ ಅವರ ಅನುಭವದಿಂದ ಈ ಸಲಹೆಗಳನ್ನು ಕೊಟ್ಟಿದ್ದಾರೆ. ಈ ಸಲಹೆಗಳನ್ನು ನಾನು ಪರಿಗಣನೆ ಮಾಡುತ್ತೇನೆಂದು ಹೇಳಿ ಅವರು ಕೇಳಿರತಕ್ಕ ಉಳಿದ ಕೆಲವು ಪ್ರಶ್ನೆಗಳಿಗೆ ನಾನು ಉತ್ತರವನ್ನು ಕೊಡಬಯಸುತ್ತೇನೆ.

ಶ್ರೀ ಎಸ್. ಸೂರ್ಯನಾರಾಯಣರಾವ್.—ಸ್ವಾಮಿ, ಲೋಡರ್ಸ್ ಮತ್ತು ಅನ್‌ಲೋಡರ್ಸ್ ಬೆಂಗಳೂರು ಡೈರಿಗೆ ಸಂಬಂಧಪಟ್ಟಂತೆ ಯಾರಿದ್ದಾರೆ ಅವರ ವಿಚಾರದಲ್ಲೂ ಸ್ವಲ್ಪ ಹೇಳಬೇಕು.

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್.—ಲೋಡರ್ಸ್ ವಿಷಯವನ್ನು ನಿನ್ನೆಯ ದಿವಸ ತಮ್ಮ ಭಾಷಣದಲ್ಲೇ ಹೇಳಿದ್ದೀರಿ.

ಶ್ರೀ ಎಸ್. ಸೂರ್ಯನಾರಾಯಣರಾವ್.—ನಾನು ಹೇಳಲಿಲ್ಲ.

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್.— ಹಾಗಾದರೆ, ಇದರ ಬಗ್ಗೆ ಹೇಳುವುದಾದರೆ ಈ ಲೋಡರ್ಸ್ ಮತ್ತು ಅನ್‌ಲೋಡರ್ಸ್ ಯಾರಿದ್ದಾರೆ ಇವರು ನಮ್ಮ ಸಿಬ್ಬಂದಿ ಅಲ್ಲ. ಈ ವಿಚಾರದಲ್ಲಿ ನಾವು ಮಾತನಾಡಿದ್ದೇವೆ. ತಾವೂ ಕೂಡ ಪುನಃ ಬಂದು ನನ್ನ ಹತ್ತಿರ ಮಾತನಾಡುತ್ತೇನೆಂದು ಹೇಳಿದಿರಿ, ಆದರೆ ತಾವು ಬರಲಿಲ್ಲ. ಈಗ ನಾವೇ ಇದರ ಬಗ್ಗೆ ಇನ್ನೂ ಸ್ವಲ್ಪ ಬೆಳಕನ್ನು ಚೆಲ್ಲಿ ನಮ್ಮ ಇಲಾಖೆಯ ವತಿಯಿಂದ ಏನು ಮಾಡುವುದಕ್ಕೆ ಸಾಧ್ಯವಿದೆ ಎಂಬುದನ್ನು ನೋಡಿ ಮಾಡುತ್ತೇವೆ.

ಇನ್ನು ''ಆಪರೇಷನ್ ಫ್ಲಡ್ ಟೂ'' ನಲ್ಲಿ ಹೇಳುವುದಾದರೆ ನಮ್ಮ ಕಡೆ ಡೈರಿ ಇಲ್ಲವೆಂದು ಬಹಳ ಜನ ಸದಸ್ಯರು ಹೇಳಿದರು. ಬೀದರ್ ಜಿಲ್ಲೆಯಲ್ಲಿ ಸಾಕಷ್ಟು ಹಾಲು ಮಹಾರಾಷ್ಟ್ರಕ್ಕೆ ಹೋಗುತ್ತಿದೆಯೆಂದು ಹೇಳಿದ್ದಾರೆ. ಹಾಲು ಉತ್ಪಾದನೆಯನ್ನು ಮಾಡುವ ಸಂದರ್ಭದಲ್ಲಿ ಅವರ ಹಾಲಿಗೆ ಗಿರಾಕಿಗಳು ಇಲ್ಲದಿದ್ದರೆ ರೈತರು ಕಂಗಾಲಾಗುತ್ತಾರೆಂಬುದನ್ನು ತಿಳಿದಿರುವುದರಿಂದ ಎಲ್ಲಾ ಕಡೆಯಲ್ಲೂ ಡೈರಿಗಳನ್ನು ವ್ಯವಸ್ಥೆ ಮಾಡುವುದು ಅವಶ್ಯಕವಿದೆ. ಆದರೆ ಈ ಡೈರಿಗಳು ಸ್ಥಾಪನೆ ಯಾದರೆ ಮನೆಯಲ್ಲಿ ಆಗತಕ್ಕ ಹಾಲನ್ನೆಲ್ಲಾ ತೆಗೆದುಕೊಂಡು ಹೋಗಿ ಹಾಕಿದರೆ ಖರ್ಚಿಗೆ ಕಾಸು ಬರುತ್ತದೆಂದು ಜನರು ಭಾವಿಸುವುದು ಸರಿಯಲ್ಲ. ಡೈರಿಗೆ ೧ ಲೀಟರ್‌ಗೆ ೧.೩೦ ರೂಪಾಯಿ ಖರ್ಚು ಬರುತ್ತದೆ. ಈ ದೃಷ್ಟಿಯಿಂದ ಎಲ್ಲೆಲ್ಲಿ ಹಾಲು ಸಿಕ್ಕುತ್ತದೆ ಅಲ್ಲೆಲ್ಲಾ ಸೂಕ್ತ ಕ್ರಮ ಕೈಗೊಂಡು ''ಆಪರೇಷನ್ ಫ್ಲಡ್ ಟೂ''ನ ಮುಖಾಂತರ ಇದರ ವ್ಯಾಪ್ತಿಯನ್ನು ಇಡೀ ರಾಜ್ಯಕ್ಕೇ ಹಬ್ಬಿಸುವ ಪ್ರಯತ್ನ ಮಾಡುತ್ತೇವೆ. ಈಗ ನಾಲ್ಕಾರು ಜಿಲ್ಲೆಗಳಿಗೆ ಇದರ ಉಪಯೋಗ ಕೆ.ಡಿ.ಡಿ.ಸಿ. ಯಿಂದ ಏನು ಸಿಕ್ಕುತ್ತಿದೆ ಈ ಉಪಯೋಗ ಎಲ್ಲಾ ಜಿಲ್ಲೆಗಳಲ್ಲೂ ಸಿಕ್ಕುವಂತೆ ಮಾಡುತ್ತೇವೆ.

ಇನ್ನು ಮಾನ್ಯ ರಾಮಕೃಷ್ಣರವರು ಮಾತನಾಡುತ್ತಾ, ಜಾಯಿಂಟ್ ಡೈರೆಕ್ಟರ್‌ಗಳನ್ನು ಏತಕ್ಕೆ ನೇಮಕ ಮಾಡುತ್ತಿಲ್ಲವೆಂದು ಕೇಳಿದರು. ನಾನಾದರೂ ಹೇಳುತ್ತೇನೆ. ಡೆಪ್ಯುಟಿ ಡೈರೆಕ್ಟರ್‌ಗಳನ್ನು ಪ್ರೊಮೋಟ್ ಮಾಡದೆ ಜಾಯಿಂಟ್ ಡೈರಕ್ಟರ್‌ಗಳನ್ನು ನೇಮಕ ಮಾಡುವುದು ಹೇಗೆ? ಈ ಪ್ರಶ್ನೆ ಹಲವಾರು ವರ್ಷದಿಂದ ಇದೆ. ಇದೊಂದು ಜಟಿಲವಾದ ಪ್ರಶ್ನೆಯಾದ್ದರಿಂದ ಡಿಪಾರ್ಟ್‌ಮೆಂಟಲ್ ಪ್ರೊಮೋಷನ್ ಕಮಿಟಿಯವರು ಏನು ವರದಿಯನ್ನು ಕೊಟ್ಟಿದ್ದಾರೆ ಅದರ ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇವೆ. ಇನ್ನು ಡೆಪ್ಯುಟಿ ಡೈರೆಕ್ಟರ್‌ಗಳಿಗೆ ಒ.ಪಿ.ಜಿ ಏತಕ್ಕೆ ಕೊಟ್ಟಿದ್ದೀರಿ ಎಂದು ಕೇಳಿದರು. ಇವತ್ತು ಈ ಒ.ಪಿ.ಜಿ. ಕೊಡದಿದ್ದರೆ ಲೋಕಸೇವಾ ಆಯೋಗದವರಿಗೆ ಕಳುಹಿಸಿಕೊಡಬೇಕಾಗುತ್ತದೆ. ಅವರು ಹತ್ತಾರು ವರ್ಷದ ರೆಕಾರ್ಡ್ಸ್‌ನ್ನು ತರಿಸಿಕೊಳ್ಳಬೇಕಾಗುತ್ತದೆ. ಇದನ್ನೆಲ್ಲಾ ಹುಡುಕುವುದರೊಳಗೆ ಹಲವಾರು ತಿಂಗಳು ಕಳೆಯುತ್ತದೆ. ಆದ್ದರಿಂದ ಅವರಿಗೆ ಒ.ಪಿ.ಜಿ. ಕೊಡಬೇಕೆಂದು ಯೋಚನೆ ಮಾಡಿದ್ದೇವೆ. ಈಗಾಗಲೇ ಅಸಿಸ್ಟೆಂಟ್ ಡೈರೆಕ್ಟರ್ ರವರೆಗೆ ಬಂದಿದೆ. ಮೊನ್ನೆ ಡೆಪ್ಯುಟಿ ಡೈರೆಕ್ಟರ್‌ರವರಿಗೆ ಓ.ಪಿ.ಜಿ. ಕೊಟ್ಟ ಮೇಲೆ ಕೆಲವರು ತಮ್ಮ ಅಧಿಕಾರಿಗಳಿಂದ ರೆಪ್ರೆಸೆಂಟೇಷನ್ ತಂದರು. ಅದು ಏನೆಂದರೆ ಸ್ವಾಮಿ, ನಮಗೆ ಒ.ಪಿ.ಜಿ. ಕೊಡದೇ ಇದ್ದರೆ ಚೆನ್ನಾಗಿತ್ತು ಎಂದು, ಅದಕ್ಕೆ ನಾನು ಹೇಳಿದೆ ಸಂಬಳ ಹೆಚ್ಚಿಗೆ ಸಿಕ್ಕದಿದ್ದರೂ ನಿಮಗೆ ಪೊಸಿಷನ್ ಹೆಚ್ಚಾಗಲಿ ಎಂದು ಕೊಡುತ್ತಿದ್ದೇನೆಂದು ಹೇಳಿದೆ. ಅನಂತರ ಎಲ್ಲರೂ ಸೇರಿ ನಮಗೆ ಒ.ಪಿ.ಡಿ. ಬೇಡ, ರೆಗ್ಯುಲರ್ ಪ್ರೊಮೋಷನ್ ಬಂದಾಗಲೇ ಕೊಡಿ ಎಂದು ಕೇಳಿದರು. ಅದನ್ನು ಮಾಡುತ್ತೇನೆಂದು ನಾನು ಹೇಳಿದ್ದೇನೆ, ನಾನು ಈ ಇಲಾಖೆಗೆ ಬಂದಮೇಲೆ ನನ್ನ ಇಲಾಖೆಯ ಎಲ್ಲಾ ಸಿಬ್ಬಂದಿ ವರ್ಗದವರನ್ನೂ ನನ್ನ ಅಣ್ಣ ತಮ್ಮಂದಿರಂತೆ ನೋಡಿಕೊಳ್ಳುತ್ತಿದ್ದೇನೆ. ನನ್ನ ಬಂದುಬಾಂಧವರಂತೆ ನೋಡಿಕೊಳ್ಳುತ್ತಿದ್ದೇನೆ. ಮಾನ್ಯ ಸದಸ್ಯರಾದ ರಾಮಕೃಷ್ಣರವರು ಒಂದು ಮಾತನ್ನು ಹೇಳಿದರು, ಅದು ಏನೆಂದರೆ ಅವರಲ್ಲಿ ಕಾನ್‌ಫಿಡೆನ್ಸ್ ಹುಟ್ಟಿಸಬೇಕೆಂಬುದು. ಆ ಪ್ರಯತ್ನವನ್ನೂ ನಾನು ಮಾಡುತ್ತೇನೆ ಆದರೆ ಯಾರೇ ಅಧಿಕಾರಿಗಳು ತಪ್ಪು ಮಾಡಿದರೂ ನಾವು ಸುಮ್ಮನೆ ಕೂತುಕೊಳ್ಳುವುದು ಇಲಾಖೆಯ ದೃಷ್ಟಿಯಿಂದ ಒಳ್ಳೆಯದಲ್ಲವೆಂದು ನಾನು ಹೇಳಬಯಸುತ್ತೇನೆ. ಒಂದು ವಿಚಾರ ತಮಗೂ ಗೊತ್ತಿರಬಹುದು, ರಾತ್ರಿ ೧೦ ಗಂಟೆಯವರೆಗೂ ನಮ್ಮ ಇಲಾಖೆಯ ಅಧಿಕಾರಿಗಳು ನನ್ನ ಮನೆಗೆ ಬರುತ್ತಲೇ ಇರುತ್ತಾರೆ. ಆದರೆ ಕೆಲವರು ಹೇಳಿದರು, ನಿಮ್ಮ ಅಧಿಕಾರಿಗಳು ನಿಮ್ಮ ಮನೆಯ ಹತ್ತಿರ ಬರುವುದು ಅಷ್ಟು ಚೆನ್ನಾಗಿರುವುದಿಲ್ಲ ಎಂದು. ಅದಕ್ಕೆ ನಾನು ಹೇಳಿದೆ, ಅವರು ಬರಲಿ, ಅವರಿಗೆ ಏನಾದರೂ ತೊಂದರೆಗಳಿದ್ದರೆ ಅವುಗಳನ್ನು ಹೋಗಲಾಡಿಸೋಣ, ಎಂದು ಹೇಳಿದೆ. ಆದರೆ ಅವರು ಏನಾದರೂ ತಪ್ಪು ಮಾಡಿ ನನ್ನ ಕೈಗೆ ಸಿಕ್ಕಿಬಿದ್ದರೆ ಅವರ ಬಗ್ಗೆ ತೀವ್ರವಾದ ಕ್ರಮವನ್ನು ಕೈಗೊಳ್ಳುತ್ತೇನೆಂದೂ ಹೇಳಿದ್ದೇನೆ. ಆದರೆ ಮಂತ್ರಿಗಳು ಏನು ಹೇಳಿದರೂ ಕೇಳುತ್ತಾರೆ, ನಮ್ಮನ್ನು ಏನೂ ಮಾಡುವುದಿಲ್ಲ ಎನ್ನುವ ಭಾವನೆ ಅವರಲ್ಲಿ ಬರಬಾರದು. ಅವರಿಗೆ ಶಿಕ್ಷೆ ಕೂಡ ಆಗುತ್ತದೆಂಬ ಹೆದರಿಕೆ ಇರಬೇಕು.

ಶ್ರೀ ಎಂ. ಮಹದೇವ್.—ಪಶು ಮಂತ್ರಿಗಳು ಪಶುವಿನಂತೆ ಇದ್ದಾರೆ.

ಶ್ರೀ ವಿಶ್ವನಾಥರೆಡ್ಡಿ.—ನಾನು ಆಮೇಲೆ ಹೇಳುತ್ತೇನೆ, ನಾನು ಪಶುವಾಗಿದ್ದೇನೋ ಅಥವಾ ಮನುಷ್ಯನಾಗಿದ್ದೇನೋ ಎಂಬುದನ್ನು ತಾವೇ ನೋಡಿ. ಒ.ಪಿ.ಜಿ. ಯನ್ನು ಕೊಟ್ಟಿದ್ದು ಯಾರೋ ಒಬ್ಬರಿಗೆ ಪ್ರೊಮೋಷನ್ ಕೊಡುವ ಸಲುವಾಗಿ ರಾಜಕೀಯ ಒತ್ತಡ ಬಂದಿದ್ದರಿಂದ ಕೊಟ್ಟಿದ್ದಾರೆಂದು ಮಾನ್ಯ ರಾಮಕೃಷ್ಣರವರು ಹೇಳಿದರು. ಅವರೂ ಕೂಡ ಹಿಂದೆ ಮಂತ್ರಿಯಾಗಿದ್ದರು. ಅವರಿಗೆ ಬೇಕಾದವರಿದ್ದಾರೆ, ಅವರು ಫೈಲುಗಳನ್ನೂ ಕೂಡ ಗುರುತು ಮಾಡಿಕೊಳ್ಳಬಹುದು. ಆದರೆ ನಾನು ಒಂದು ಮಾತನ್ನು ಹೇಳುತ್ತೇನೆ. ಇದು ಒಬ್ಬರ ಸಲುವಾಗಿ ಅಲ್ಲ. ೩-೪ ಜನರ ಹೆಸರು ಡಿಪಾರ್ಟ್‌ಮೆಂಟಲ್ ಪ್ರೊಮೋಷನ್ ಕಮಿಟಿಯಲ್ಲಿ ಇಲ್ಲದೇ ಇದ್ದಾಗ ಅವರ ಹೆಸರು ಏತಕ್ಕೆ ಇಲ್ಲ ಎಂದು ನೋಡುವ ಸಲುವಾಗಿ ಈ ರೀತಿ ಮಾಡಿದ್ದೇನೆ. ಆದರೆ ಕ್ಷುಲ್ಲಕ ಕಾರಣಕ್ಕಾಗಿ ಇದನ್ನು ಮಾಡಬಾರದೆಂದು ಯೋಚನೆ ಮಾಡಿದಾಗ ಇಂಥಾದ್ದರ ಬಗ್ಗೆ ಕ್ರಮ ತೆಗೆದುಕೊಳ್ಳುವುದು ಸರಿಯಾದ ಕ್ರಮವಲ್ಲವೆಂದು ಇಲಾಖೆಯ ಅಭಿಪ್ರಾಯ ಬಂದಿದ್ದರಿಂದ ಅದನ್ನು ಪುನಃ ಪ್ರೋಸಸ್ ಮಾಡಿದೇವೆಂದು ಹೇಳಿದರು. ಅಧಿಕಾರಿಗಳು ಬಂದು ತಮಗೆ ಏನೋ ಹೇಳುತ್ತಾರೆ. ಅವರು ನನ್ನ ಜೊತೆಯಲ್ಲೂ ವಾದ ಕೂಡ ಮಾಡಿದರು. ಏನು ಸ್ವಾಮಿ, ಒಬ್ಬರ ಸಲುವಾಗಿ ಮಾಡುತ್ತಿದ್ದೀರಿ ಎಂದು ಕೇಳಿದರು. ಅದಕ್ಕೆ ನಾನು ಅವರಿಗೆ ಹೇಳಿದೆ ಯಾರಾದರೂ ತಪ್ಪು ಅಭಿಪ್ರಾಯವನ್ನು ಕೊಟ್ಟಿದ್ದರೆ ಅದನ್ನು ಬಿಡಿ, ಒಬ್ಬರ ಸಲುವಾಗಿ ಅಥವಾ ರಾಜಕೀಯ ಪ್ರಭಾವಕ್ಕೆ ಒಳಗಾಗಿ ನಾನು ಈ ಕೆಲಸವನ್ನು ಮಾಡಿಲ್ಲ ಎಂದು ಮಾನ್ಯ ರಾಮಕೃಷ್ಣರವರಿಗೆ ಹೇಳಬಯಸುತ್ತೇನೆ.

ಇನ್ನು ಪಶು ಸಂಗೋಪನಾ ವೈದ್ಯರು ಲೋಕಸೇವಾ ಆಯೋಗದಲ್ಲಿ ಆಯ್ಕೆ ಆಗಿದ್ದಾರೆ. ಅವರನ್ನು ನೇಮಕ ಮಾಡುವುದಕ್ಕೆ ಏತಕ್ಕೆ ತಡವಾಗುತ್ತಿದೆ ಎಂದು ಮಾನ್ಯ ಸದಸ್ಯರು ಕೇಳಿದರು. ಅದಕ್ಕೆ ನಾನಾದರೂ ಹೇಳುವುದಿಷ್ಟೆ. ಈ ಇಲಾಖೆಯಲ್ಲಿ ಕನ್ನಡ ಪರೀಕ್ಷೆ ಒಂದು ಇದೆ. ಅದನ್ನು ಪಾಸ್ ಮಾಡಬೇಕು ಇದರಿಂದಾಗಿ ಅವರ ನೇಮಕಾತಿ ತಡವಾಗಿದೆ. ಅದಷ್ಟು ಬೇಗ ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ. ಮಾನ್ಯ ಸದಸ್ಯರಾದ ರಾಮಕೃಷ್ಣರವರು ನಿನ್ನೆ ಮಾತನಾಡುತ್ತಾ ನಮ್ಮ ಪಶುವೈದ್ಯ ಕಾಲೇಜಿನಲ್ಲಿ ಇನ್‌ಟೇಕ್ ಕೆಲಸವನ್ನು ಏತಕ್ಕೆ ಮಾಡಬಾರದೆಂದು ಕೇಳಿದ್ದರಿಂದ ನಾನು ಅವರಿಗೆ ಒಂದು ಮಾತನ್ನು ಹೇಳಬಯಸುತ್ತೇನೆ.

ನಮ್ಮ ಇಲಾಖೆಯಲ್ಲಿ ಡಾಕ್ಟರ್ಸ್, ವೆಟರ್ನರಿ ಕಾಂಪೌಂಡರ್ಸ್‌ನ್ನು ಬೇಕೆಂದು ಎಲ್ಲಾ ಮಾನ್ಯ ಸದಸ್ಯರು ಹೇಳಬಯಸಿದ್ದಾರೆ. ಒಂದು ಕಡೆ ಕೆಲಸ ಮಾಡುವವರು ಯಾರು ಇದ್ದಾರೋ ಅವರನ್ನು ಮತ್ತೊಂದು ಕಡೆ ವರ್ಗಮಾಡಿದರೆ ಕೆಲಸ ಮಾಡುವುದಿಲ್ಲ. ಇದು ಹತ್ತು ವರ್ಷಗಳಿಂದ ನಡೆದುಕೊಂಡು ಬಂದಿರುತ್ತದೆ. ಮಾನ್ಯ ವೈ. ರಾಮಕೃಷ್ಣರವರು ಮಂತ್ರಿಗಳಾಗಿದ್ದಾಗಿನಿಂದಲೂ ನಡೆದುಕೊಂಡು ಬಂದಿರತಕ್ಕಂಥ ವಿಷಯವಾಗಿದೆ. ದವಾಖಾನೆಯನ್ನು ಖಾಲಿ ಇಟ್ಟುಕೊಂಡೇ ಬಂದಿರುತ್ತಾರೆ. ಕಾಂಪೌಂಡರ್ ಇಲ್ಲದಿರುವ ಕಾರಣದಿಂದಾಗಿ ಡಾಕ್ಟರುಗಳೇ ಆ ಕೆಲಸವನ್ನು ಮಾಡುತ್ತಿರುತ್ತಾರೆ. ಇದೆಲ್ಲಾ ನಡೆದು ಬಂದಿದೆ. ಆದ್ದರಿಂದ ಸಾಧ್ಯವಾದಷ್ಟು ಅನುಕೂಲವಾಗಲಿ ಎನ್ನುವ ದೃಷ್ಟಿಯಿಂದ ಬಹುತೇಕ ಪೋಸ್ಟಿಂಗ್ ಮಾಡಲು ಕ್ರಮ ಕೈಗೊಳ್ಳುತ್ತೇವೆಂದು ಹೇಳುತ್ತೇನೆ.

ಇನ್ನು ಮದರ್ ಡೈರಿಯ ಬಗ್ಗೆ ಹೇಳಿದ್ದಾರೆ. ಮದರ್ ಡೈರಿಗೆ ಜಮೀನು ಸಮಯಕ್ಕೆ ಸರಿಯಾಗಿ ಸಿಕ್ಕಿರುವುದರಿಂದ ಈ ವರ್ಷವೇ ಪ್ರಾರಂಭವಾಗುವುದು ಇದೆ. ಇದು ೧೯೮೪ರ ಹೊತ್ತಿಗೆ ಪೂರ್ತಿಯಾಗತಕ್ಕಂಥ ಸಂದರ್ಭವಿರುತ್ತದೆ. ರಾಜನಕುಂಟೆಯಲ್ಲಿ ನಾವು ಈಗಾಗಲೇ ಕ್ಯಾಟಲ್ ಫೀಡಿಂಗ್ ಕಾರ್ಖಾನೆಯನ್ನು ಮಾಡಿ, ಅಲ್ಲಿ ದಿನಕ್ಕೆ ೧೦೦ ಟನ್ ಫೀಡ್ಸ್ ತಯಾರಾಗುತ್ತಿದೆ. ಅವರು ತಯಾರು ಮಾಡತಕ್ಕಂಥದ್ದಕ್ಕೆ ಬೆಲೆ ಒಂದು ಕೆ.ಜಿ.ಗೆ ೧-೬೦ ಪೈಸೆ ಬೆಲೆಯಾದರೂ ನಾವು ಒಕ್ಕಲಿಗರಿಗೆ ೧-೨೦ ಪೈಸೆ ೧-೩೦ ಪೈಸೆಗೆ ಕೊಡುತ್ತಿದ್ದೇವೆ.

ಇನ್ನು ನಿನ್ನೆ ಕೆಲವು ಮಾನ್ಯ ಸದಸ್ಯರು ಹಾಲಿಗ ಸಬ್‌ಸಿಡಿ ಏತಕ್ಕೆ ಕೊಡಬಾರದು ಎಂದು ಸೂಚಿಸಿದ್ದಾರೆ. ಸರ್ಕಾರ ಈಗಾಗಲೇ ಮುನ್ನೂರ ಮೂವತ್ತೈದು ಲಕ್ಷ ರೂಪಾಯಿಗಳಷ್ಟು ಸಬ್‌ಸಿಡಿಯನ್ನು ಕೆ.ಡಿ.ಡಿ.ಸಿ.ಗೆ ಕೊಡುತ್ತಿದ್ದಾರೆ ಇಷ್ಟೆಲ್ಲಾ ಕೊಟ್ಟಮೇಲೆ ೨-೧೦ ಪೈಸೆಗೆ ತೆಗೆದುಕೊಂಡು ೨-೮೦ ಪೈಸೆಗೆ ತಮಗೆ ಒದಗಿಸುತ್ತಿದ್ದೇವೆ. ಇಲ್ಲದಿದ್ದರೆ ಅದರ ಬೆಲೆ ಇನ್ನೂ ಜಾಸ್ತಿಯಾಗುತ್ತಿತ್ತು.

ಇನ್ನು ಗೆಜ್ಜಲಗೆರೆಯಲ್ಲಿ ಮಿಲ್ಕ್ ಪ್ರಾಡಕ್ಟ್‌ನ್ನು ಈಗಾಗಲೇ ತಯಾರು ಮಾಡಲು ಕಾರ್ಖಾನೆ ಪ್ರಾರಂಭವಾಗಿದೆ. ಎನ್.ಡಿ.ಡಿ.ಸಿ.ಯವರು ೧೯೮೩ನೇ ಅಕ್ಟೋಬರ್ ಎರಡನೆಯ ವಾರದಲ್ಲಿ ವರ್ಕ್ ಟ್ರಯಲ್ಸ್ ಮಾಡುವವರಿದ್ದಾರೆ. ಟ್ರಯಲ್ಸ್ ಮಾಡಿದನಂತರ ನಮಗೆ ಒಪ್ಪಿಸುತ್ತಾರೆ. ಆಗ ನಾವು ಅದನ್ನು ಅಭಿವೃದ್ಧಿ ಮಾಡಬೇಕಾಗುತ್ತದೆ. ಮತ್ತೆ ಎನ್.ಡಿ.ಡಿ.ಸಿ.ಯ ಬಗ್ಗೆ ಮಾನ್ಯ ರಾಮಕೃಷ್ಣರವರು ಒಂದು ಸಲಹೆಯನ್ನು ಕೊಟ್ಟರು. ಅದು ಏನೆಂದರೆ ಸುತ್ತ ಮುತ್ತಲ ಹಳ್ಳಿಗಳಿಂದ ಬರತಕ್ಕಂಥ ಹಾಲನ್ನು ಶೇಕರಣೆ ಮಾಡಿ ಮಿಲ್ಕ್ ಫುಡ್ ಪ್ರಾಡಕ್ಟ್ಸ್‌ನ್ನು ಏತಕ್ಕೆ ಮಾಡಬಾರದು ಎಂದು ಹೇಳಿರುತ್ತಾರೆ. ಮಿಲ್ಕ್ ಫುಡ್ ಪ್ರಾಡಕ್ಟ್‌ನ್ನು ತಯಾರು ಮಾಡತಕ್ಕಂಥ ಉದ್ದೇಶ ಏನು ಇದೆ ಅದು ಹಾಲು ಜಾಸ್ತಿ ಸಿಗುವುದರಿಂದ ಫ್ಲಡ್ ಸೀಸನ್‌ನಲ್ಲಿ ಎಲ್ಲಾ ಕಡೆ ಹಾಲು ಜಾಸ್ತಿ ಸಿಗುತ್ತದೆ. ಡೈರಿಯವರು ಜಾಸ್ತಿ ಖರೀದಿ ಮಾಡದೆ ಇರತಕ್ಕಂಥ ಪರಿಸ್ಥಿತಿ ಇರುತ್ತದೆ. ಅಂಥ ಪರಿಸ್ಥಿತಿಯಲ್ಲಿಯೂ ಒಕ್ಕಲಿಗರಿಗೆ, ಅನಾನುಕೂಲವಾಗಬಾರದು ಎನ್ನುವ ದೃಷ್ಟಿಯಿಂದ ಹಾಲನ್ನೆಲ್ಲ ತೆಗೆದುಕೊಂಡು ಮಿಲ್ಕ್ ಫುಡ್ ಪ್ರಾಡಕ್ಟ್‌ನ್ನು ಮಾಡಲು ನಾವು ಉದ್ದೇಶಿಸಿರುತ್ತೇವೆ. ಬೇರೆ ಬೇರೆ ಕಡೆಯಿಂದಲೂ ಹೆಚ್ಚಿನ ಪ್ರಮಾಣದಲ್ಲಿ ಹಾಲನ್ನು ತೆಗೆದುಕೊಂಡು ಮಾಡತಕ್ಕಂಥದ್ದಕ್ಕೂ ಅವಕಾಶ ಇರುತ್ತದೆ. ಆದ್ದರಿಂದ ಮಾನ್ಯ ಸದಸ್ಯರು ಹೇಳಿದಂತೆ ಸುತ್ತಮುತ್ತಲೂ ಬರತಕ್ಕಂಥ ಹಾಲನ್ನು ಖರೀದಿ ಮಾಡತಕ್ಕಂಥದ್ದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆಂದು ನಾನು ಹೇಳಬಯಸುತ್ತೇನೆ.

ಇನ್ನು ಕೊಯ್ಲು ಫಾರಮ್ ಬಗ್ಗೆ ಮಾನ್ಯ ಸದಸ್ಯರು ಹೇಳಿರುತ್ತಾರೆ. ನಾನು ಮಂಗಳೂರಿಗೆ ಹೋದಾಗ ಕೊಯ್ಲು ಫಾರಮ್‌ಗೆ ವಿಸಿಟ್ ಕೊಟ್ಟಿರುತ್ತೇನೆ. ಅದು ಸುಮಾರು ಎಂಟನೂರು ಎಕರೆ

ಇರಬಹುದು ಇದು ಬಹಳ ಸುಂದರವಾದ ಪ್ರದೇಶವಾಗಿರುತ್ತದೆ. ಅದು ಬಹಳ ನಷ್ಟದಿಂದ ನಡೆಯುತ್ತಿರುವುದು ಏತಕ್ಕೋ ಗೊತ್ತಿಲ್ಲ. ಅಲ್ಲಿ ಎಷ್ಟು ಹಸುಗಳಿವೆ ಎಂದರೆ ಸುಮಾರು ೨೫೦–೩೦೦ ಸಮೀಪ ಹಸುಗಳಿವೆ ಎಂದು ಹೇಳಿದರು. ಇಲ್ಲಿ ಎಷ್ಟು ಆಕಳು ಹಾಲನ್ನು ಕೊಡುತ್ತಿವೆ ಎಂದರೆ ೫೫ ಆಕಳು ಮಾತ್ರ ಹಾಲನ್ನು ಕೊಡುತ್ತಿವೆ ಎಂದು ಹೇಳಿದರು. ಇನ್ನೂ ೨೦೫ ಆಕಳು ಹಾಲನ್ನು ಕೊಡುತ್ತಿಲ್ಲ. ಅವು ಸರಾಸರಿ ೫ ಲೀಟರ್ ಹಾಲನ್ನು ಕೊಡುತ್ತಿವೆ ಎಂದು ಹೇಳಿದರು. ಮಿಶ್ರತಳಿ ಮಲೆನಾಡು ಗಿಡ್ಡ ಅಲ್ಲಿ ಬಹುತೇಕವಾಗಿ ಇರುತ್ತದೆ. ಅದು ಎರಡು ಹೊತ್ತಿಗೆ ೫ ಲೀಟರ್ ಹಾಲನ್ನು ಕೊಡುತ್ತವೆ ಎಂದು ಹೇಳತಕ್ಕಂಥದ್ದು ಅನುಮಾನಕ್ಕೆ ಬಂದಿದೆ. ನಿಜವಾಗಿಯೂ ಬೃಹದಾಕಾರವಾಗಿ ಹಿಂದೆ ನಡೆಯುತ್ತಿದ್ದ ಇದು ರೀಜನಲ್ ಡೈರಿಯಾಗಿದ್ದು ಈಗ ಈ ರೀತಿಯಾಗಿರುವುದನ್ನು ನಾವು ಒಪ್ಪುವುದಕ್ಕೆ ಆಗುವುದಿಲ್ಲವೆಂದು ಹೇಳಿ, ನಮ್ಮ ಕಡೆಯವರನ್ನು ಕಳುಹಿಸುತ್ತೇವೆಂದು ಹೇಳಿಬಂದಿರುತ್ತೇನೆ. ಏತಕ್ಕೆಂದರೆ ಇರುವ ಅನುಮಾನ ದೂರವಾಗಲಿ ಎನ್ನುವ ದೃಷ್ಟಿಯಿಂದಲೂ ಮತ್ತು ಫಾರಮ್‌ನಲ್ಲಿ ಏನು ದೋಷವಿದೆ ಎನ್ನುವುದನ್ನು ನಾವಾದರೂ ಕಂಡು ಹಿಡಿಯಬೇಕಲ್ಲ. ಅಧಿಕಾರಿಗಳಿಂದ ದೋಷವಿದೆಯೋ ಅಥವಾ ನಾವು ಮಾಡತಕ್ಕಂಥ ವಿಧಾನದಲ್ಲಿ ದೋಷವಿದೆಯೋ ಎನ್ನುವ ದೃಷ್ಟಿಯಿಂದ ಈ ರೀತಿ ಹೇಳಿರುತ್ತೇನೆ. ಅದಕ್ಕೆ ನನಗೆ ಮುಂಗೋಪಿ ಎನ್ನತಕ್ಕಂಥ ಬಿರುದನ್ನು ಕೂಡ ಕೊಟ್ಟಿದ್ದಾರೆ. ಬಹಳ ಸಂತೋಷ, ಅದನ್ನು ಸ್ವಾಗತಿಸುತ್ತೇನೆ.

ಇನ್ನು ಲಸಿಕೆ ಇಲಾಖೆಯಲ್ಲಿ ವ್ಯಾಕ್ಸಿನೇಷನ್ ತಯಾರು ಮಾಡುವ ಬಗ್ಗೆ ಬಹಳಷ್ಟು ಹೇಳಿದ್ದಾರೆ. ಈಗಾಗಲೇ ಇಲಾಖೆಗೆ ಬೇಕಾದಂಥ ೮೦ ಪರ್ಸೆಂಟ್ ಲಸಿಕೆಯನ್ನು ತಯಾರು ಮಾಡಿದ್ದಾರೆ. ಹೊಸದಾಗಿ ಔಷಧಿಯನ್ನು ತಯಾರು ಮಾಡಿಲ್ಲ. ತಯಾರಿಸಿದ ಮೇಲೆ ಸರಿಯಾಗಿ ಪೂರೈಕೆ ಮಾಡುತ್ತೇವೆ.

ಇನ್ನು ಔಷಧಿಗಳ ಖರ್ಚಿನ ಬಗ್ಗೆ ಹೇಳಿದ್ದಾರೆ. ಇಲ್ಲಿಯವರೆಗೆ ಇದರ ಬಗ್ಗೆ ಏನು ಮಾಡಿದ್ದೀರಿ ಎಂದು ಸಹ ಕೇಳಿದ್ದಾರೆ. ಸ್ವಾಮಿ ಈ ವರ್ಷ ಮಾರ್ಚ್‌ನಲ್ಲಿ ಎಲ್ಲಾ ಔಷಧಿಗಳನ್ನು ಖರೀದಿ ಮಾಡತಕ್ಕಂಥದ್ದನ್ನು ರದ್ದು ಮಾಡಿದ್ದೇವೆ. ಇದನ್ನು ತಪ್ಪು ಎಂದು ತಿಳಿದುಕೊಳ್ಳಬಾರದು. ಏತಕ್ಕೆಂದರೆ ನಾನು ಪ್ರವಾಸ ಹೋದಾಗ ಕುಣಿಗಲ್ ಡಿಸ್‌ಪೆನ್ಸರಿಯನ್ನು ನೋಡಿದೆ, ಔಷಧಿಗಳು ತುಂಬಿವೆ. ೧೯೮೧–೮೨ರಲ್ಲಿ ತೆಗೆದುಕೊಂಡು ಹೋಗಿರತಕ್ಕಂಥ ಔಷಧ ಕಸವಾಗಿ ಬಿದ್ದಿದೆ. ಅವಶ್ಯಕವಾಗಿ ಬೇಕಾದ ಔಷಧಿಗಳು ಇಲ್ಲ. ಅವರನ್ನು ಕೇಳಿದ್ದಕ್ಕೆ ಯಾವ ಯಾವುದೋ ಔಷಧಿಗಳನ್ನು ಕಳುಹಿಸಿಕೊಟ್ಟಿದ್ದಾರೆಂದು ಹೇಳಿದರು. ಅದಕ್ಕಾಗಿ ಒಂದು ಮಾತನ್ನು ಗಮನದಲ್ಲಿಟ್ಟುಕೊಳ್ಳಬೇಕೆಂದು ಇಲಾಖೆಯವರಿಗೆ ಹೇಳಿದ್ದೇನೆ. ಮುಂದೆ ಮೂರು ಮೂರು ತಿಂಗಳಿಗೆ ಒಮ್ಮೆ ನೀವು ಔಷಧಿಗಳನ್ನು ಆವಶ್ಯಕವಾಗಿ ಎಷ್ಟು ಬೇಕೋ ಅಷ್ಟನ್ನು ಮಾತ್ರ ಡಿಸ್ಪೆನ್ಸ್‌ರಿಗೆ ಕಳುಹಿಸಿಕೊಡಬೇಕೆಂದು ಹೇಳಿದ್ದೇನೆ.

ಇನ್ನು ಭಾರತೀಯ ವೆಟರ್ನರಿ ಕಾಲೇಜುಗಳ ಬಗ್ಗೆ ಹೇಳಿದ್ದಾರೆ. ಇದು ನನಗೆ ಸಂಬಂಧಿಸಿದುದಲ್ಲ. ಮಾನ್ಯ ಬಿ. ಎಲ್. ಗೌಡರು ಮೇಲ್ ಮನೆಯಲ್ಲಿ ಇದರ ಬಗ್ಗೆ ಉತ್ತರವನ್ನು ಕೊಟ್ಟಿದ್ದಾರೆ. ಕೆಳಮನೆಯಲ್ಲೂ ಕೂಡ ಅದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳುತ್ತೇವೆಂದು ಉತ್ತರವನ್ನು ಕೊಟ್ಟಿದ್ದಾರೆ.

ಶ್ರೀ ಎಂ. ಮಹದೇವ್.—ಮಾನ್ಯ ಸಚಿವರು ಕೆಳಮನೆಯಲ್ಲಿ ಉತ್ತರವನ್ನು ಕೊಟ್ಟಿದ್ದಾರೆಂದು ಹೇಳಿದರು ಇದಕ್ಕಿಂತ ಕೆಳಮನೆ ಯಾವುದು ಇದೆ ಎಂದು ಕೇಳುತ್ತೇನೆ. ಇನ್ನು ಬಾಪ್‌ಕೋ' ಬಗ್ಗೆ ವರದಿ ತಯಾರಾಗಿ ಈ ಕೊನೆಯ ಹಂತದಲ್ಲಿದೆ. ಇದು ಇಷ್ಟರಲ್ಲಿಯೇ ಕಾರ್ಯಗತವಾಗುತ್ತದೆ. ಇದರ ಎಲ್ಲಾ ವಿವರಗಳನ್ನು ಈಗ ಕೊಡುವ ಅವಶ್ಯಕತೆ ಇಲ್ಲ. ೧೯೭೫ರಲ್ಲಿ ಇದು ಸ್ಥಾಪನೆಯಾಯಿತು. ೧೯೭೭ರಲ್ಲಿ ಇದಕ್ಕೆ ಸಂಬಂಧಪಟ್ಟ ವರದಿ ತಯಾರಾದರೂ ಸಹ ೨–೩ ವರ್ಷಗಳ ಕಾಲ ಇದರ ಮುಂದಿನ ಕೆಲಸ ಸ್ಥಗಿತವಾಯಿತು. ೧೯೮೧ರಲ್ಲಿ ಮತ್ತೆ ಇದಕ್ಕೆ ಚಾಲನೆ ಬಂತು. ಇದು ೪ ಕೋಟಿ ೮ ಲಕ್ಷ ರೂಪಾಯಿಗಳ ಪ್ರಾಜೆಕ್ಟ್. ನಬಾರ್ಡ್ ಜೊತೆ ಇದೇ ಫೆಬ್ರುವರಿ ತಿಂಗಳಲ್ಲಿ ಈ ಪ್ರಾಜೆಕ್ಟ್ ವಿಚಾರದಲ್ಲಿ ಚರ್ಚೆ ನಡೆಯಿತು ಅನಂತರ ಅವರು ಕೇಳಿದಂಥ ಕ್ಲಾರಿಫಿಕೇಷನ್‌ಗಳಿಗೆ ನಮ್ಮ ಅಧಿಕಾರಿಗಳು ಇದೇ ಮಾರ್ಚಿ, ಏಪ್ರಿಲ್, ಮೇ, ಜೂನ್ ಮತ್ತು ಜುಲೈ ತಿಂಗಳಲ್ಲಿ ವಿವರಣೆ ಕೊಟ್ಟಿದ್ದಾರೆ. ಈಗ ಇದಕ್ಕೆ ಕ್ಲಿಯರೆನ್ಸ್ ಸಿಕ್ಕಿದೆ. ಆದ್ದರಿಂದ ಇದು ಇಷ್ಟರಲ್ಲಿಯೇ ಕಾರ್ಯಗತವಾಗುತ್ತದೆಂದು ಹೇಳುತ್ತೇನೆ.

ಶ್ರೀ ವೈ. ರಾಮಕೃಷ್ಣ.— ಯು.ಕೆ. ಯಿಂದ ಒಂದು ಟೀಮು ಇದರ ಬಗ್ಗೆ ಚರ್ಚೆ ಮಾಡಲು ಬಂದಿತ್ತು. ಆಗ ಇದರ ಜೊತೆಗೆ ನಮ್ಮ ಅಧಿಕಾರಿಗಳು ನಡೆಸಿದಂಥ ಮಾತುಕತೆಗಳು ಫಲಪ್ರದವಾಯಿತೇ ಹೇಗೆ? ಒಂದುವೇಳೆ ಫಲಪ್ರದವಾಗಿದ್ದರೆ ಇದನ್ನು ಯಾವಾಗ ಜಾರಿಗೆ ತರುತ್ತೀರಿ?

ಶ್ರೀ ವಿಶ್ವನಾಥರೆಡ್ಡಿ.— ಎಲ್ಲಾ ಮಾತುಕತೆಗಳು ನಡೆದ ಒಂದು ಪರಿಣಾಮವಾಗಿ ಇದು ಈ ಹಂತಕ್ಕೆ ಬಂದಿದೆ.

ಇನ್ನು ಮೊಬೈಲ್ ಯುನಿಟ್ಸ್ ಬಗ್ಗೆ ಹೇಳಿದ್ದಾರೆ. ಇವುಗಳನ್ನು ಕೇವಲ ನಮ್ಮ ಇಲಾಖೆಯಿಂದ ಒದಗಿಸಿಲ್ಲ. ಐ.ಆರ್.ಡಿ.ಪಿ., ಡಿ.ಪಿ.ಎ.ಪಿ. ಕಾಡಾ ಹೀಗೆ ನಾನಾ ಯೋಜನೆಗಳ ಕೆಳಗೆ ಮತ್ತು ನಾನಾ ಇಲಾಖೆಗಳ ಸಹಕಾರದಿಂದ ಇವುಗಳನ್ನು ಒದಗಿಸಲಾಗಿದೆ. ಈಗ ಒಟ್ಟು ೭೪ ಇವೆ. ಇವು ಬಹಳ ಲಾಭದಾಯಕ ಮತ್ತು ಇವುಗಳಿಂದ ಬಹಳ ಉಪಕಾರವಾಗುತ್ತಿದೆ ಎಂದು ನಮ್ಮ ಅನುಭವಕ್ಕೆ ಬಂದಿದೆ. ಆದ್ದರಿಂದ ನಮ್ಮ ಒಂದು ಸಂಪನ್ಮೂಲಗಳನ್ನು ಗಮನದಲ್ಲಿಟ್ಟುಕೊಂಡು ಮತ್ತು ಬೇರೆ ಇಲಾಖೆಗಳ ಸಹಾಯ ಪಡೆದುಕೊಂಡು ಇವುಗಳನ್ನು ಹೆಚ್ಚು ಮಾಡುತ್ತೇವೆ.

ಇನ್ನು ಡಾಕ್ಟರ್ಸ್ ಮತ್ತು ಔಷಧದ ಬಗ್ಗೆ ಹೇಳಿದ್ದಾರೆ. ಔಷಧದ ಬಗ್ಗೆ ಈಗಾಗಲೇ ಏನು ಆದೇಶ ಕೊಟ್ಟಿದ್ದೇವೆಂದರೆ, ಎಲ್ಲಾ ಆರ್.ವಿ.ಡಿ. ಗಳಲ್ಲಿ ಇರುವಂತಹ ಔಷಧದ ಬಗ್ಗೆ ಒಂದು ಓಪನ್-ಚಾರ್ಟ್ ಇಡಬೇಕು, ಇದರಿಂದ ಯಾವ ಔಷಧ ಇದೆ ಯಾವುದು ಇಲ್ಲಾ ಎಂಬುದು ಅಲ್ಲಿಗೆ ಬರುವವರಿಗೆ ತಿಳಿಯುತ್ತದೆ ಎಂದು ಆದೇಶ ಕೊಟ್ಟಿದ್ದೇವೆ. ಇದರ ಜೊತೆಗೆ ಅಲ್ಲಿ ಕೆಲಸ ಮಾಡುವ ಡಾಕ್ಟರ್ಸ್ ಎಲ್ಲಿಯಾದರೂ ಹೋಗಬೇಕಾದರೆ ಮೂವ್‌ಮೆಂಟ್ ರಿಜಿಸ್ಟರ್‌ನಲ್ಲಿ ಬರೆದು ಹೋಗಬೇಕೆಂದು ಆದೇಶ ಕೊಟ್ಟಿದ್ದೇವೆ. ಈಗ ಡಾಕ್ಟರ್‌ಗಳು ಬೆಂಗಳೂರಿಗೆ ಹೋಗಿದ್ದರೂ ಸಹ ಅಲ್ಲಿನ ಇತರೇ ಸಿಬ್ಬಂದಿ ವರ್ಗದವರು ಡಾಕ್ಟರ್‌ಗಳನ್ನು ಕೇಳಿಕೊಂಡು ಬಂದವರಿಗೆ ಟೂರ್ ಹೋಗಿದ್ದಾರೆ, ಹಳ್ಳಿಗಳ ಕಡೆ ಹೋಗಿದ್ದಾರೆ ಎಂದು ಹೇಳುತ್ತಾರೆ. ಆದಕಾರಣ ಅಲ್ಲಿನ ಡಾಕ್ಟರ್‌ಗಳಿಗೆ ನಿಮ್ಮ ಚಲನವಲನದ ಬಗ್ಗೆ ಒಂದು ಚಾರ್ಟ್ ಇಡಿ ಎಂದು ಆದೇಶ ಕೊಟ್ಟಿದ್ದೇವೆ. ಇದರಿಂದ ಅಧಿಕಾರಿಗಳಾಗಲೀ ಇಲ್ಲವೇ ಶಾಸಕರಾಗಲೀ ಸರ್‌ಪ್ರೈಸ್ ವಿಜಿಟ್ ಕೊಟ್ಟು ತನಿಖೆ ಮಾಡಲು ಅವಕಾಶವಾಗುತ್ತದೆ. ಅವರು ಎಲ್ಲಿಗೆ ಹೋಗಿದ್ದಾರೆಂದು ಪುಸ್ತಕದಲ್ಲಿ ಬರೆದಿರುತ್ತಾರೋ ಅಲ್ಲಿಗೆ ಹೋಗಿ ಅವರು ಅಲ್ಲಿ ಇದ್ದಾರೋ ಅಥವಾ ಇಲ್ಲವೋ ಎಂಬುದನ್ನು ನೋಡಲು ಇದರಿಂದ ಅವಕಾಶವಾಗುತ್ತದೆ. ಈ ಡಾಕ್ಟರ್ಸ್ ಬಗ್ಗೆ ಅನೇಕ ದೂರುಗಳು ಬಹಳಕಡೆಯಿಂದ ಬಂದಿದೆ. ೬ ರೂಪಾಯಿಗಳನ್ನು ಕೊಟ್ಟರೆ ಮಾತ್ರ ಇಂಜಕ್ಷನ್ ಕೊಡುತ್ತಾರೆ, ರೊಕ್ಕ ತೆಗೆದುಕೊಂಡು ಔಷಧ ಕೊಡುತ್ತಾರೆ, ರೊಕ್ಕ ಕೊಡದಿದ್ದರೆ ಏನೂ ಕೊಡುವುದಿಲ್ಲವೆಂದು ಜನರು ಹೇಳುತ್ತಿದ್ದಾರೆ. ಆದ್ದರಿಂದ ಇದನ್ನೆಲ್ಲಾ ತಪ್ಪಿಸಲು ಎಲ್ಲಾ ರೀತಿಯ ಉಸ್ತುವಾರಿ ಕ್ರಮಗಳನ್ನು ತೆಗೆದುಕೊಂಡಿದ್ದೇವೆ.

ಇನ್ನು ಮಾನ್ಯ ರಂಗನಾಥ್ ಅವರು ಬೂಸಾ ಬೆಲೆ ಬಹಳ ಜಾಸ್ತಿಯಾಗಿದೆ ಎಂದು ಹೇಳಿದರು. ಈ ವಿಚಾರದಲ್ಲಿ ನಾನು ಮಾನ್ಯ ಆಹಾರ ಮಂತ್ರಿಗಳ ಜೊತೆ ಮಾತನಾಡುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್.— ಅವರು ಜೋಳ, ರಾಗಿ ಮುಂತಾದ ಆಹಾರ ಧಾನ್ಯಗಳ ಬೆಲೆಯನ್ನೇ ಇಳಿಸಲಿಲ್ಲ, ಇನ್ನು ಬೂಸ ಬೆಲೆ ಎಲ್ಲಿ ಇಳಿಸುತ್ತಾರೆ? ಆದ್ದರಿಂದ ಇದು ನಿಮ್ಮ ಕೈಯಲ್ಲಿಯೇ ಆದರೆ ನೋಡಿ.

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್.— ಈಗ ನಾನು ಎಲ್ಲಾ ಮಾನ್ಯ ಸದಸ್ಯರ ಪ್ರಶ್ನೆಗಳಿಗೂ ಉತ್ತರ ಕೊಟ್ಟಂತೆ ಆಗಿವೆ ಇನ್ನು ಮಾನ್ಯ ರಾಮಕೃಷ್ಣ ಅವರು ಪ್ರಸ್ತಾಪ ಮಾಡಿರುವ ಒಂದೇ ಪ್ರಶ್ನೆ ಉಳಿದಿರುವುದು. ಕಳೆದ ಸಲ ೧೫೦ ಆರ್.ವಿ.ಡಿ. ಗಳನ್ನು ಹೊಸದಾಗಿ ಕೊಟ್ಟಿದ್ದೇವೆ ಮತ್ತು ೫೦ನ್ನು ಅಪ್-ಗ್ರೇಡ್ ಮಾಡಿದ್ದೇವೆ ಆದರೆ ನಮ್ಮ ಸರ್ಕಾರದವರು ರಾಜಕೀಯ ದೃಷ್ಟಿಯಿಂದ ಜಾರಿಗೆ ತರುತ್ತಿಲ್ಲವೆಂದು ಹೇಳಿದ್ದಾರೆ. ಆದರೆ ಇದರಲ್ಲಿ ಯಾವ ರಾಜಕೀಯ ಇದೆ ಎಂಬುದು ಗೊತ್ತಿಲ್ಲ.. ಏಕೆಂದರೆ, ೧೯೮೨ರಲ್ಲಿ ೧೭೪ ಡಾಕ್ಟರ್ಸ್ ಪೋಸ್ಟ್‌ಗಳು ಖಾಲಿ ಇದ್ದವು, ೭೭೧ ಲೈವ್-ಸ್ಟಾಕ್-ಮನ್‌ಗಳ ಪೋಸ್ಟ್‌ಗಳು ಖಾಲಿ ಇದ್ದವು, ೭೫೦ ಕಾಂಪೌಂಡರ್ಸ್ ಪೋಸ್ಟ್‌ಗಳು ಖಾಲಿ ಇದ್ದವು, ಇತರೇ ಕೇಡರ್‌ನ ೯೫ ಪೋಸ್ಟ್‌ಗಳು ಖಾಲಿ ಇದ್ದವು, ನಾಲ್ಕನೇ ದರ್ಜೆ ನೌಕರರಿಗೆ ಸಂಬಂಧಪಟ್ಟಂತೆ ೨೫೦ ಪೋಸ್ಟ್‌ಗಳು ಖಾಲಿ ಇದ್ದವು. ಇಷ್ಟೊಂದು ಪೋಸ್ಟ್‌ಗಳು ಖಾಲಿ ಇದ್ದದ್ದು ಮಾನ್ಯ ರಾಮಕೃಷ್ಣ ಅವರ ಗಮನಕ್ಕೆ ಬಂದಿತೋ ಅಥವಾ ಇಲ್ಲವೋ? ಇದೇ ಕಾರಣದಿಂದ ಕೆಲವು ಕಡೆಗಳಲ್ಲಿ ಆಸ್ಪತ್ರೆಗಳ ಬಾಗಿಲು ಮುಚ್ಚಿವೆ ಎಂಬತಕ್ಕಂಥ ದೂರುಗಳು ಬಂದಿವೆ. ಆದರೆ ಸಿಬ್ಬಂದಿಯೇ ಇಲ್ಲ, ನಾನು ಈ ದವಾಖಾನೆಗಳಿಗೆ ಯಾರನ್ನು ನೇಮಕ ಮಾಡುವುದು? ಈ ಪೋಸ್ಟ್‌ಗಳನ್ನು ಭರ್ತಿ ಮಾಡಲು ಶ್ರೀ ರಾಮಕೃಷ್ಣ ಅವರು

ಗಮನ ಕೊಡಬೇಕಾಗಿತ್ತು. ಆದ್ದರಿಂದ ಇದರ ಬಗ್ಗೆ ರಾಜಕೀಯ ನೀವು ಮಾಡಿದ್ದೀರಿ, ನಾವು ಮಾಡಿಲ್ಲ ವೆಂದು ಹೇಳುತ್ತೇನೆ. ಚುನಾವಣೆಯಲ್ಲಿ ಓಟು ಪಡೆಯಲು ಸಿಬ್ಬಂದಿವರ್ಗ ಇಲ್ಲದಿದ್ದರೂ ಸಹ ಹೊಸ ಆರ್.ವಿ.ಡಿ. ಗಳನ್ನು ಮಂಜೂರು ಮಾಡಿದಿರಿ. ಇಷ್ಟೆಲ್ಲಾ ತಮಗೆ ಗೊತ್ತಿದ್ದರೂ ಸಹ ಈಗ ಈ ದವಾಖಾನೆಗಳಲ್ಲಿ ಸಿಬ್ಬಂದಿ ವರ್ಗ ಇಲ್ಲವೆಂದು ಹೇಳುತ್ತಿದ್ದೀರಿ. ತಾವು ೧೯೮೦ರಲ್ಲಿ ಮಂತ್ರಿಯಾದ ಮೇಲೆ ೧೯೮೨ರವರೆಗೆ ಸಹ ಅನೇಕ ಪೋಸ್ಟ್‌ಗಳು ಖಾಲಿ ಇದ್ದವು. ಅವುಗಳ ವಿವರಗಳು ಈ ರೀತಿ ಇದೆ:—

ಇಸವಿ	ವೆಟರ್‌ನರಿ ಡಾಕ್ಟರ್‌ಗಳು	ಲೈವ್–ಸ್ಟಾಕ್‌ಮನ್‌ಗಳು	ಕಾಂಪೌಂಡರ್‌ಗಳು
೧೯೮೦	೧೨೫	೧೪೦	೫೧೬
೧೯೮೧	೧೩೦	೫೫೫	೫೨೦
೧೯೮೨	೧೭೯	೭೭೧	೭೨೦

ಇಷ್ಟೊಂದು ಪೋಸ್ಟ್‌ಗಳು ಖಾಲಿ ಇರುವಾಗ ಹೊಸ ದವಾಖಾನೆಗಳನ್ನು ಮಂಜೂರು ಮಾಡುವುದು ಯಾವರೀತಿ ಸರಿ? ಇದರಲ್ಲಿ ರಾಜಕೀಯ ಇಲ್ಲವೇ? ಈಗ ನಾವು ನಾಲ್ಕು ಲೈವ್–ಸ್ಟಾಕ್‌ಮನ್ ಟ್ರೈನಿಂಗ್ ಸೆಂಟರ್‌ಗಳನ್ನು ತೆಗೆದಿದ್ದೇವೆ. ಇವು ಸಾಲದು. ೮ರಿಂದ ೧೨ ಆದರೂ ತೆಗೆಯಬೇಕಾಗಿದೆ. ಆದರೆ ನಮ್ಮ ಸಂಪನ್ಮೂಲದ ಕೊರತೆಯಿಂದ ೪ ಮಾತ್ರ ತೆಗೆದಿದ್ದೇವೆ. ಈ ೪ ಸೆಂಟರ್‌ಗಳನ್ನು ತೆಗೆದಿದ್ದರೂ ಸಹ ಇನ್ನು ೫ ವರ್ಷಗಳವರೆಗೆ ಹೊಸ ಆರ್.ವಿ.ಡಿ. ಗಳನ್ನು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಏಕೆಂದರೆ, ಈಗ ಖಾಲಿ ಇರುವ ಅನೇಕ ಪೋಸ್ಟ್‌ಗಳಿಗೆ ಇಲ್ಲಿ ಟ್ರೈನಿಂಗ್ ಪಡೆದವರನ್ನು ನೇಮಕ ಮಾಡಬೇಕಾಗಿದೆ. ಹೆಚ್ಚು ಜನ ಕಾಂಪೌಂಡರ್‌ಗಳನ್ನು ಮತ್ತು ಲೈವ್–ಸ್ಟಾಕ್‌ಮನ್‌ಗಳನ್ನು ತಯಾರು ಮಾಡಬೇಕೆಂಬುದೇ ನಮ್ಮ ಗುರಿಯಾಗಿದೆ. ಈಗಿರುವಂತಹ ಕೊರತೆಯನ್ನು ನೀಗಿಸಲು ಸರ್ಕಾರ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ. ಸಿಬ್ಬಂದಿ ವರ್ಗ ದೊರೆತಂತೆ ಖಾಲಿ ಇರುವ ಜಾಗಗಳಿಗೆ ಭರ್ತಿ ಮಾಡಲಾಗುತ್ತದೆ ಮತ್ತು ಹೊಸ ಆರ್.ವಿ.ಡಿ. ಗಳಿಗೂ ಸಹ ಪೋಸ್ಟ್ ಮಾಡಲಾಗುತ್ತದೆ. ಇಷ್ಟು ಹೇಳಿ ನಾನು ಮಂಡನೆ ಮಾಡಿದಂಥ ಬೇಡಿಕೆಗಳನ್ನು ಒಪ್ಪಿಕೊಳ್ಳಬೇಕೆಂದು ತಮ್ಮ ಮೂಲಕ ಮಾನ್ಯ ಸದಸ್ಯರನ್ನು ಕೇಳಿಕೊಂಡು ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವೈ. ರಾಮಕೃಷ್ಣ.— ಮಾನ್ಯ ಮಂತ್ರಿಗಳು ಬಹಳ ಚೆನ್ನಾಗಿ ಉತ್ತರ ಕೊಟ್ಟರು. ಆದರೆ ಕಡೆಯ ಎರಡು ನಿಮಿಷಗಳಲ್ಲಿ ರಾಜಕೀಯ ಪ್ರಾರಂಭ ಮಾಡಿದರು. ಈಗ ಅವರೆದುರಿಗೇ ನಾನು ಛಾಲೆಂಜ್ ಮಾಡಿ ಹೇಳುತ್ತಿದ್ದೇನೆ, ಈ ೨೦೦ ಹೊಸ ಆರ್.ವಿ.ಡಿ. ಗಳು ಶ್ರೀ ದೇವರಾಜ ಅರಸ್ ಅವರ ಕಾಲದಲ್ಲಿ ಪ್ರಾರಂಭವಾಗಿದ್ದು. ಆಗ ಅವಶ್ಯಕತೆ ಇದೆ ಎಂದು ಅವರು ಪ್ರಾರಂಭ ಮಾಡಿದರು. ಇಲ್ಲಿ ಕೆಲಸ ಮಾಡಲು ಲೈವ್–ಸ್ಟಾಕ್‌ಮನ್‌ಗಳಿಲ್ಲ, ಕಾಂಪೌಂಡರ್‌ಗಳಿಲ್ಲವೆಂದು ತಿಳಿದ ಮೇಲೆ ಅರ್ಜಿಗಳನ್ನು ಕರೆಯಲಾಯಿತು, ಅನಂತರ ೩೭ ಸಾವಿರ ಅರ್ಜಿಗಳು ಬಂದವು. ಈ ಅರ್ಜಿಗಳ ಬಗ್ಗೆ ಏನು ಕ್ರಮ ತೆಗೆದುಕೊಳ್ಳಲಾಯಿತೆಂಬುದು ಇದುವರೆಗೆ ಗೊತ್ತಿಲ್ಲ, ನಮ್ಮ ಕಾಲದಲ್ಲಿ ಈ ಡಾಕ್ಟರ್ಸ್ ಸಂಬಳವನ್ನು ಜಾಸ್ತಿ ಮಾಡಲಾಯಿತು. ಖಾಲಿ ಇದ್ದಂಥ ೧೭೩ ಡಾಕ್ಟರ್ಸ್ ಪೋಸ್ಟ್‌ಗಳನ್ನು ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳಲಾಯಿತು. ಆದ್ದರಿಂದ ಮಾನ್ಯ ಮಂತ್ರಿಗಳು ಸತ್ಯಕ್ಕೆ ದೂರವಾದ ಮಾತನ್ನು ಹೇಳಿದ್ದಾರೆಂದು ನಾನು ಹೇಳುತ್ತೇನೆ.

ಮಾನ್ಯ ವಿರೋಧ ಪಕ್ಷದ ನಾಯಕರಾದ ಮೊಯಿಲಿಯವರು ಮಾಡಿರತಕ್ಕ ೧೯೮೧–೮೨ರ ಬಡ್ಜೆಟ್ ಭಾಷಣವನ್ನು ನಾನು ಆಗಲೇ ಹೇಳಿದ್ದೇನೆ. ಚುನಾವಣೆಗೆ ಹೋಗಬೇಕಾಗಿತ್ತು ಅದಕ್ಕೋಸ್ಕರ ಮಂಜೂರು ಮಾಡಬೇಕಾಗಿತ್ತು ಎನ್ನುವ ಮಾತನ್ನು ಮಾನ್ಯ ಮಂತ್ರಿಗಳು ಹೇಳಿದರು. I am prepared to resign if it is proved. Otherwise he will have to take back the challenge.

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್.—ಮಾನ್ಯ ಉಪಾಧ್ಯಕ್ಷರೇ, ನಾನು ಒಂದು ಮಾತು ಕೇಳುತ್ತೇನೆ. ಸಿಬ್ಬಂದಿ ಇಲ್ಲ ಎಂಬುದು ತಮಗೆ ಗೊತ್ತಿದೆ. ರೂರಲ್ ವೆಟರ್‌ನರಿ ಡಿಸ್‌ಪೆನ್ಸರಿ ಸ್ಯಾಂಕ್ಷನ್ ಮಾಡಿದ ಮೇಲೆ ಅದಕ್ಕೆ ಬೇಕಾದಂತಹ ವೆಟರ್‌ನರಿ ಡಾಕ್ಟರುಗಳು ಒಂದು ವರ್ಷದಿಂದ ಇಲ್ಲ. ಹೊಸದಾಗಿ ಆರ್.ವಿ.ಡಿ.ಗಳನ್ನು ತೆಗೆಯುತ್ತಾರೆ. ಸಿಬ್ಬಂದಿಯನ್ನು ಭರ್ತಿ ಮಾಡಲಿಕ್ಕೆ ಆಲೋಚನೆ ಮಾಡಿದ್ದೀರಾ ? ಆ ರೀತಿ ಆಲೋಚನೆ ಮಾಡಿದ್ದರೆ, ತಾವು ಮಾಡಿದ್ದು ಸೂಕ್ತವೆಂದು ನಾನು ಒಪ್ಪಿಕೊಳ್ಳುತ್ತೇನೆ.

ಶ್ರೀ ವೈ. ರಾಮಕೃಷ್ಣ.—೧೭೩ ಡಾಕ್ಟರುಗಳನ್ನು ಲೋಕಸೇವಾ ಆಯೋಗದವರು ನೇಮಕ ಮಾಡಿ ಎಷ್ಟು ತಿಂಗಳಾಯಿತು ? ಎಷ್ಟು ತಿಂಗಳುಗಳಿಂದ ತಮ್ಮಲ್ಲಿ ಇಟ್ಟುಕೊಂಡಿದ್ದೀರಿ? ಇವತ್ತು ನೀವು ಅಪಾಯಿಂಟ್‌ಮೆಂಟ್ ಮಾಡಿರತಕ್ಕದ್ದು ೨೩ ಡೆಪ್ಯುಟಿ ಡೈರೆಕ್ಟರುಗಳನ್ನು. ಅವರ ಹೆಸರು ಹೇಳಲಿಕ್ಕೆ ಸಿದ್ಧನಿದ್ದೇನೆ. ಆದರೆ ಸಂಸದೀಯ ಪದ್ಧತಿಗನುಗುಣವಾಗಿ ನಾನು ಆ ಹೆಸರುಗಳನ್ನು ಹೇಳುವುದಿಲ್ಲ. There is inordinate delay on the part of the Government to issue orders in respect of these doctors. ಪ್ರಮೋಷನ್ ಕಮಿಟಿ ಮಾಡಿಯೂ ಪ್ರಮೋಷನ್ ಸಿಗದಿರತಕ್ಕದ್ದು ದುರ್ದೈವವೆಂದು ನಾನು ತಿಳಿದುಕೊಂಡಿದ್ದೇನೆ. ಈಗಾಗಲೇ ೯ ತಿಂಗಳು ಡಿಲೇ ಮಾಡಿದ್ದೀರಿ. ೯ ದಿವಸ ಕೂಡ ಇಟ್ಟುಕೊಳ್ಳದೆ ಅವತ್ತೇ ಕಳುಹಿಸ ಬಹುದು ಬಹುಶಃ ಈ ಸರ್ಕಾರಕ್ಕೆ ಶಕ್ತಿಯಿಲ್ಲವೆಂದು ಕಾಣುತ್ತದೆ.

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್.—ಲೋಕಸೇವಾ ಆಯೋಗದಿಂದ ಬಂದಂತಹ ಹುದ್ದೆಗಳಿಗೆ ಇಂಟರ್‌ವ್ಯೂ ಆದದ್ದು ಜನವರಿ ಫೆಬ್ರುವರಿ ತಿಂಗಳಲ್ಲಿ ಆಗಿದೆ. ೧೭೩ ಡಾಕ್ಟರುಗಳನ್ನು ಬಿಡೋಣ. ರೂರಲ್ ವೆಟರ್‌ನರಿ ಡಿಸ್‌ಪೆನ್ಸರಿ ಕಾಂಪೌಂಡರ್ ಬಗ್ಗೆ ಏನು ಕ್ರಮ ಕೈಗೊಂಡಿದ್ದೀರಿ ? ೩೭೦೦೦ ಅರ್ಜಿಗಳನ್ನು ಏನು ಮಾಡಿದಿರಿ ? ನಮ್ಮ ಹತ್ತಿರ ಈಗ ಏತಕ್ಕೆ ಹೇಳುತ್ತೀರಿ ?

ಶ್ರೀ ವೈ. ರಾಮಕೃಷ್ಣ.—೩೭ ಸಾವಿರ ಅರ್ಜಿ ಏನಾಯಿತು ಅಂದರೆ, ತಾವು ಮಂತ್ರಿಗಳಾಗಿದ್ದು ನಾವು ಏನು ಹೇಳಬೇಕು ? What docs it show ?

(ಗೊಂದಲ)

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್.—ಮಾನ್ಯ ರಾಮಕೃಷ್ಣರವರೇ ನಾನು ಹೇಳುವುದನ್ನು ಕೇಳಿ, ಈ ೩೭ ಸಾವಿರ ಅರ್ಜಿಗಳು ಯಾವಾಗ ಬಂದುವು.

ಶ್ರೀ ವೈ. ರಾಮಕೃಷ್ಣ.—ನಿಮ್ಮ ಆಫೀಸ್‌ನಲ್ಲಿ ಕೇಳಿ ?

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್.—೧೯೮೦–೮೧ರಲ್ಲಿ ಮತ್ತು ೧೯೮೨ರಲ್ಲಿ ಅರ್ಜಿಗಳು ಬಂದಿವೆ. ೧೯೮೩ರಲ್ಲಿ ಬಂದಿರುವ ಅರ್ಜಿಗಳಿಗೆ ನಾವು ಜವಾಬ್ದಾರರು. ೧೯೮೦–೮೧ ಮತ್ತು ೧೯೮೨ರಲ್ಲಿ ಬಂದಿರುವ ಅರ್ಜಿಗಳನ್ನು ತಾವು ಏನು ಮಾಡಿದ್ದೀರಿ ? ಸಿಬ್ಬಂದಿ ಕೊರತೆ ಇದೆ ಎನ್ನುವುದು ತಿಳಿದಿದ್ದರೂ ಇದಕ್ಕೆ ಏನು ಉತ್ತರ ಕೊಡುತ್ತೀರಿ ?

ಶ್ರೀ ವೈ. ರಾಮಕೃಷ್ಣ.—೩೭೦೦೦ ಅರ್ಜಿಗಳು ಬಂದಿವೆ, ಪ್ರತಿಯೊಬ್ಬರೂ ಇಂಡಿಯನ್ ಪೋಸ್ಟಲ್ ಆರ್ಡರ್ ಕೊಟ್ಟಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಮಂತ್ರಿಗಳು ಒಂದು ನಿಮಿಷ ಈಲ್ಡ್ ಆಗುವು ದಾದರೆ...

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್.—ನಾನು ಈಲ್ಡ್ ಆಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ನಿಮ್ಮನ್ನು ಕಂಡರೆ ನನಗೆ ಮಹಾಗೌರವ. ಒಂದು ನಿಮಿಷ ತಾವು ಈಲ್ಡ್ ಆಗುವುದು ಆದರೆ...

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್.—ಹೊಸ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಆಪಾದನೆ ಮಾಡುತ್ತಿದ್ದಾರೆ. ನಾನು ತಿರುಗುಬಾಣ ಕೊಡುತ್ತಿದ್ದೇನೆ. ೧೯೮೦–೮೧ ಮತ್ತು ೧೯೮೨ರಲ್ಲಿ ತಾವು ಏನು ಮಾಡಿದ್ದೀರಿ ? ೧೯೮೩ರಲ್ಲಿ ನೀವು ಏನು ಮಾಡಿದ್ದೀರಿ ಅಂದರೆ ಸಧ್ಯದಲ್ಲಿ ಏನು ಮಾಡುವುದಕ್ಕಾಗುತ್ತದೆ ?

ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ನಾನು ಒಂದು ಕ್ರಿಯಾಲೋಪ ಎತ್ತುತ್ತೇನೆ.

SRI MANIK RAO PATIL.—Sir, the Hon'ble Minister is capable of replying to the points.

ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ನಮ್ಮ ನಾಯಕರಾದ ವೀರಪ್ಪಮೊಯಿಲಿಯವರು ಈ ವಿಚಾರ ದಲ್ಲಿ ಮಾತನಾಡಲಿಕ್ಕೆ ಎದ್ದು ನಿಂತಾಗ ಯಾರೇ ಮಂತ್ರಿಗಳಾಗಿರಲಿ ಯಾರಾದರೂ ವಿಷಯಗಳನ್ನು

ಹೇಳುತ್ತೇವೆ ಎಂದು ಹೇಳಿದಾಗ ಅದಕ್ಕೆ ಅವಕಾಶ ಮಾಡಿಕೊಡಬೇಕು. ಅದು ಒಂದು ಸಂಪ್ರದಾಯ. ಒಂದು ನಿಮಿಷ ಈಲ್ಡ್ ಆಗುತ್ತೀರಾ ಎಂದು ಕೇಳಿದರೆ ಮಂತ್ರಿಗಳು ನಾನು ಈಲ್ಡ್ ಆಗುವುದಿಲ್ಲ ವೆಂದು ಹೇಳುವುದು ಸಾಧುವಾದುದಲ್ಲ. ಮಾನ್ಯ ಮಂತ್ರಿಗಳು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟರೆ ಏನಾದರೂ ವಿಚಾರಗಳನ್ನು ಹೇಳುತ್ತಾರೆ.

ಶ್ರೀ ಜೆ.ಡಿ. ಸೋಮಪ್ಪ.—೩೭ ಸಾವಿರ ಅರ್ಜಿಗಳನ್ನು ಅವರು ಒಂದು ವರ್ಷ ಇಟ್ಟಿದ್ದರು. ನಾವು ೧೭೫೫ ಅರ್ಜಿಗಳನ್ನು ೫ ವರ್ಷ ಏತಕ್ಕೆ ಇಡಬಾರದೆಂದು ಅವರ ಭಾವನೆ ಇರಬೇಕು.

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್.—ಈ ಒಂದು ಸಂಪ್ರದಾಯವನ್ನು ಬಹುತೇಕ ನಾನು ರಾಜಕೀಯ ಜೀವನಕ್ಕೆ ಬಂದಾಗಿನಿಂದ ಕಲಿತಿದ್ದೇನೆ. ನಾನು ಎಂದೂ ಮಾತನಾಡಿಲ್ಲ. ನಾನು ವಿರೋಧ ಪಕ್ಷದ ನಾಯಕರಿಗೆ ಅಗೌರವ ಮಾಡುವ ದೃಷ್ಟಿಯಿಂದ ಹೇಳಿಲ್ಲ. ಮಾತನಾಡುವಾಗ ಸ್ವಲ್ಪ ಕೊಡಿ ಎಂದು ಹೇಳಿದ್ದೇನೆ, ಹೊರತಾಗಿ ಬೇರೆ ಯಾವುದೇ ಉದ್ದೇಶದಿಂದ ಆ ಮಾತು ಹೇಳಿಲ್ಲ. ಈ ಸಮಯ ಹೋದರೆ ಮತ್ತೆ ಅಭಿಪ್ರಾಯಗಳು ಬರುವುದಿಲ್ಲವೆಂದು ಹೇಳಿದ್ದೇನೆ ಅಷ್ಟೆ.

ಶ್ರೀ ಬಿ. ಗಂಗಣ್ಣ.—ಈ ಸರ್ಕಾರ ರಚನೆಯಾದ ಮೇಲೆ ಲೋಕಸೇವಾ ಆಯೋಗದವರು ವೆಟರ್‌ನರಿ ಡಾಕ್ಟರುಗಳಿಗೆ ಸಂದರ್ಶನ ಮಾಡುವಾಗ ಅಗತ್ಯಕ್ಕಿಂತ ಕಡಿಮೆ ಅಭ್ಯರ್ಥಿಗಳು ಅರ್ಜಿ ಹಾಕಿಕೊಂಡಿದ್ದರಿಂದ ತಡವಾಗಿದೆ ಎನ್ನುವುದು ಎಲ್ಲರಿಗೂ ಮನವರಿಕೆಯಾಗಿದೆ. ಈ ಪರಿಸ್ಥಿತಿ ಇರುವಾಗ, ಈ ಸರ್ಕಾರ ಸಿಬ್ಬಂದಿ ನೇಮಕ ಮಾಡುವುದಕ್ಕೆ ಶಕ್ತಿಯಿಲ್ಲ. ಆಗುವುದಿಲ್ಲವೆಂದು ಆರೋಪಣೆ ಮಾಡುವುದು ನ್ಯಾಯವಲ್ಲವೆಂದು ತಮ್ಮ ಮೂಲಕ ಇದರ ಬಗ್ಗೆ ಹೇಳಿದಂತಹ ಸದಸ್ಯರಿಗೆ ತಿಳಿಸುತ್ತೇನೆ.

ಉಪಾಧ್ಯಕ್ಷರು.—ತಾವು ಮಂತ್ರಿಗಳ ಪರವಾಗಿ ಮಾತನಾಡಬೇಕಾಗಿಲ್ಲ.

ಶ್ರೀ ಮಾಣಿಕ್‌ರಾವ್ ಪಾಟೀಲ್.—ನಮ್ಮ ರಾಷ್ಟ್ರದಲ್ಲಿರತಕ್ಕ ಪಶುಗಳ ಸಂಖ್ಯೆ ಇಡೀ ಪ್ರಪಂಚ ದಲ್ಲಿ ಎಲ್ಲಿಯೂ ಇಲ್ಲ. ದಿನೇ ದಿನೇ ಪಶುಸಂಖ್ಯೆ ಜಾಸ್ತಿಯಾಗುತ್ತಿದೆ. ಎಲ್ಲಿ ಹೋದರೂ ಸಾವಿರಾರು ದನಕರುಗಳು ನಮ್ಮ ಕಣ್ಣಿಗೆ ಕಾಣಿಸುತ್ತವೆ. ಸರ್ಕಾರದ ವತಿಯಿಂದ ಅನ್‌ಎಕಾನಾಮಿಕ್ ಕ್ಯಾಟಲ್ ಪಾಪ್ಯುಲೇಷನ್ ಬಗ್ಗೆ ಏನಾದರೂ ನಿರ್ದಿಷ್ಟವಾದ ಕಾರ್ಯಕ್ರಮ ಹಾಕಿಕೊಂಡಿದ್ದೀರಾ ? ಇದರ ಬಗ್ಗೆ ಯೋಚನೆ ಮಾಡುತ್ತಿದ್ದೀರಾ ?

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್.—ಮಾನ್ಯ ಮಾಣಿಕ್‌ರಾವ್‌ರವರು ಹೇಳಿರತಕ್ಕ ಸಲಹೆ ವಿಚಾರ ಮಾಡತಕ್ಕದ್ದಾಗಿದೆ. ಈ ದೇಶದಲ್ಲಿ ಪ್ರಾಣಿಗಳನ್ನು ಕೊಲ್ಲಬಾರದು ಎನ್ನುವ ಜನ ಒಂದೆಡೆ, ಇನ್ನೊಂದೆಡೆ ಕೊಲ್ಲುವವರು. ಇಂತಹ ಸಮಯದಲ್ಲಿ ಯಾವುದಾದರೂ ಕಟ್ಟುನಿಟ್ಟಾದ ನಿಲುವು ತೆಗೆದುಕೊಳ್ಳಲಿಕ್ಕೆ ದುಸ್ತರವಾದ ಪರಿಸ್ಥಿತಿ ಇರುವುದರಿಂದ ಏನು ಮಾಡುವುದಕ್ಕೆ ಆಗುವುದಿಲ್ಲ. ನಾನು ಮಂತ್ರಿಯಾಗಿ ೮–೯ ತಿಂಗಳುಗಳಾಯಿತು. ೧೦ ವರ್ಷದ ತನಕ ವಿಚಾರಮಾಡಲಿಕ್ಕೆ ತಾವು ಏನು ಸೂಚನೆ ಕೊಡಲಿಲ್ಲ ನಾವು ಇದನ್ನು ವಿಚಾರ ಮಾಡುತ್ತೇವೆ.

ಶ್ರೀ ಮಾಣಿಕ್‌ರಾವ್ ಪಾಟೀಲ್.—ತಮ್ಮಲ್ಲಿ ತಾಕತ್ತು ಶಕ್ತಿಯಿಲ್ಲ, ಲಾಂಗ್ ರೇಂಜ್ ಪಾಲಿಸಿ ಒಂದನ್ನು ಎದುರು ಇಟ್ಟುಕೊಂಡು ತಾವು ಏನು ಕಾರ್ಯಕ್ರಮ ಇಟ್ಟುಕೊಂಡಿದ್ದೀರಿ?

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್.—ಒಳ್ಳೆಯ ಸಲಹೆಗಳ ಬಗ್ಗೆ ಸಮಾಲೋಚಿಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳ ಬಗ್ಗೆ ನನಗೆ ಅಪಾರ ವಾದಂಥ ಗೌರವ ಇದೆ. ತಾವು ಈ ತರಹ ಮಾತನಾಡಿದರೆ ನಮ್ಮ ಗೌರವವನ್ನು ನಾವು ಸ್ವಲ್ಪ ಕಡಿಮೆ ಮಾಡಬೇಕಾಗುತ್ತದೆ.

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕೂಡ ಅದೇ ರೀತಿಯ ಗಡ್ಡ ಬಿಟ್ಟರೆ ನಾವು ಕೂಡ ಅವರ ಬಗ್ಗೆ ಅಪಾರ ಗೌರವವನ್ನು ಇಟ್ಟುಕೊಳ್ಳುತ್ತೇವೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ನನಗೆ ಮುಖ್ಯಮಂತ್ರಿಗಳನ್ನು ನೋಡಿದರೆ ವಿಶ್ವಾಮಿತ್ರನ ನೆನಪು ಬರುತ್ತದೆ. ನಾನು ಚಿಕ್ಕವನಿದ್ದಾಗ ವಿಶ್ವಾಮಿತ್ರನ ಚಿತ್ರವನ್ನು ನೋಡಿದ್ದೆ.

ಶ್ರೀ ಕೆ.ಹೆಚ್. ರಂಗನಾಥ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಯಾವ ವಿಶ್ವಾಮಿತ್ರನ ಚಿತ್ರವನ್ನು ನೋಡಿದ್ದರು ?

ಶ್ರೀ ಎಸ್. ಬಂಗಾರಪ್ಪ.—ಅದು ಯಾವುದೇ ಇರಲಿ. ಮಾನ್ಯ ಮಂತ್ರಿಗಳು ತುಂಬಾ ಒಳ್ಳೆಯವರು. ಅವರ ಬಗ್ಗೆ ನಾನು ಅಪಾರ ಗೌರವವುಳ್ಳವನಾಗಿದ್ದೇನೆ. ಆದರೆ ಮಾನ್ಯ ಮಂತ್ರಿಗಳು ಮಾತನಾಡುವಾಗ ಹೇಳಿದರು, ಹಿಂದಿನವರು ಎಷ್ಟು ಅರ್ಜಿಗಳನ್ನು ಕರೆದಿದ್ದರು ? ಮತ್ತೆ ಸುಮಾರು ೩೦ ಅಥವಾ ೪೦ ಸಾವಿರ ಅರ್ಜಿಗಳು ಬಂದಿದ್ದವೇ ಅಥವಾ ಇಲ್ಲವೇ ಎಂದು ನಮ್ಮನ್ನೇ ಪ್ರಶ್ನೆಯನ್ನು ಕೇಳುತ್ತಾರೆ. ಇದು ಸರಿಯೇ ? ಆ ಅರ್ಜಿಗಳು ಎಷ್ಟು ಬಂದಿದ್ದವು ಎಂಬುದು ಸರ್ಕಾರಕ್ಕೆ ಗೊತ್ತಾಗದಿದ್ದರೆ ಬೇರೆಯವರಿಗೆ ಹೇಗೆ ಗೊತ್ತಾಗುವುದು ? ಆ ಪ್ರಶ್ನೆಯನ್ನು ತಾವು ಮಾನ್ಯ ಸದಸ್ಯರಾದಂಥ ರಾಮಕೃಷ್ಣರನ್ನು ಕೇಳುವುದಕ್ಕೆ ಬರುವುದಿಲ್ಲ. ಆದ್ದರಿಂದ ನಾನು ಮಾನ್ಯ ಮಂತ್ರಿಗಳಲ್ಲಿ ಅರಿಕೆ ಮಾಡಿಕೊಳ್ಳುವುದೇನೆಂದರೆ ಆ ಅರ್ಜಿಗಳು ಹಾಲಿ ಈಗ ಇವೆಯೋ ಅಥವಾ ಇಲ್ಲವೇ ? ಒಂದು ವೇಳೆ ಆ ಅರ್ಜಿಗಳು ಇದ್ದರೆ ಆ ಬಗ್ಗೆ ಸರ್ಕಾರದವರು ಏನು ಕ್ರಮ ತೆಗೆದುಕೊಂಡಿದ್ದೀರಿ ? ಇದರ ಬಗ್ಗೆ ಮಾನ್ಯ ಮಂತ್ರಿಗಳಿಗೆ ಏನಾದರೂ ಮಾಹಿತಿ ಗೊತ್ತಿದೆಯೇ ?

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್.—ಈಗ ಮಾನ್ಯ ಸದಸ್ಯರು ಸುಮಾರು ೩೭ ಸಾವಿರ ಅರ್ಜಿಗಳು ಬಂದಿವೆಯೆಂದು ಏನು ಹೇಳುತ್ತಿದ್ದಾರೆ ಅದರ ಬಗ್ಗೆ ನನಗೇನೂ ಗೊತ್ತಿಲ್ಲ. ಮತ್ತು ಸದ್ಯದ ಪರಿಸ್ಥಿತಿಯಲ್ಲಿ ಆ ಬಗ್ಗೆ ನನ್ನ ಹತ್ತಿರ ಮಾಹಿತಿ ಕೂಡ ಇಲ್ಲ. ಆದರೆ ಲೀವ್ ಸ್ಟಾಕ್ ಇನ್ಸ್‌ಪೆಕ್ಟರ್ಸ್‌ಗೆ ಅರ್ಜಿಗಳು ಕರೆದಿದ್ದಾರೆ ಎಂಬುದು ಮಾತ್ರ ನನಗೆ ಗೊತ್ತಿತ್ತು. ಆದರೆ ಆ ಬಗ್ಗೆ ಅಂಕಿಅಂಶಗಳು ಈಗ ನನ್ನ ಹತ್ತಿರ ಇಲ್ಲ. ಈಗ ಹೊಸ ನೇಮಕಾತಿ ಸಮಿತಿ ರಚನೆಯಾಗಿದೆ. ಅವರು ಆ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುತ್ತಾರೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಅರ್ಜಿಗಳನ್ನು ಕರೆದಿದ್ದರೆ ಅರ್ಜಿಗಳು ಇಲಾಖೆಯಲ್ಲಿ ಇರುತ್ತವೆ. ಆದರೆ ನನ್ನ ಹತ್ತಿರ ಇಲ್ಲದೇ ಇರತಕ್ಕಂಥ ಮಾಹಿತಿಯನ್ನು ನಾನು ಈ ಸದನಕ್ಕೆ ಕೊಡುವುದಕ್ಕೆ ಇಚ್ಛೆ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳಿಗೆ ಯಾವ ಬಗ್ಗೆ ಕೂಡ ಮಾಹಿತಿ ಇಲ್ಲ. ಆದ್ದರಿಂದ ಅವರು ಸರ್ಕಾರದಲ್ಲಿ ಏನು ಕೆಲಸ ಮಾಡುತ್ತಾರೋ ನನಗಂತೂ ಗೊತ್ತಾಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳನ್ನು ನಾನು ಕೇಳುವುದೇನೆಂದರೆ ಆ ಅರ್ಜಿಗಳು ಹಾಲಿ ಈಗ ಇವೆಯೋ ? ಅಥವಾ ಇಲ್ಲವೇ ಎಂದು. ಇದು ನಮಗೆ ಸ್ಪಷ್ಟವಾಗಬೇಕು. ಒಂದು ವೇಳೆ ಇದ್ದರೆ ಆ ಬಗ್ಗೆ ಸರ್ಕಾರದವರು ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳುತ್ತಾರೆಯೋ ?

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್.—ಮಾನ್ಯ ಅಧ್ಯಕ್ಷರೇ ಈಗ ಹೊಸದಾಗಿ ನೇಮಕಾತಿ ಸಮಿತಿಗಳನ್ನು ರಚನೆ ಮಾಡಿದ್ದಾರೆ. ಆದ್ದರಿಂದ ಅವರು ಮತ್ತೆ ಹೊಸದಾಗಿ ಅರ್ಜಿಗಳನ್ನು ಕರೆಯಬೇಕಾಗುತ್ತದೆ. ಆದರೆ ಮಾನ್ಯ ಅಧ್ಯಕ್ಷರೇ, ನನಗೆ ಈಗ ಬಂದ ಸುದ್ದಿಯ ಪ್ರಕಾರ ಅರ್ಜಿಗಳು ಇವೆಯಂತೆ. ಅದನ್ನು ನಮ್ಮ ಅಧಿಕಾರಿಗಳು ಈಗ ತಿಳಿಸಿದರು. ಮಾನ್ಯ ಅಧ್ಯಕ್ಷರೇ, ನಾನು ಹೇಳತಕ್ಕಂಥ ಮಾತನ್ನು ಮಾನ್ಯ ಸದಸ್ಯರು ಅರ್ಥಮಾಡಿಕೊಳ್ಳಬೇಕು. ಹೊಸ ನೇಮಕಾತಿ ಸಮಿತಿಗಳು ರಚನೆಯಾಗಿವೆ. ಅವರು ಅರ್ಜಿಗಳನ್ನು ಕರೆದು ಸೆಲೆಕ್ಟ್ ಮಾಡಿಕೊಳ್ಳುತ್ತಾರೆ. ಆದರೆ ನಾನು ಮಾನ್ಯ ವೈ. ರಾಮಕೃಷ್ಣರವರನ್ನು ಕೇಳುವುದೇನೆಂದರೆ ಅವರು ಮಂತ್ರಿಗಳಾಗಿದ್ದಾಗ ಏತಕ್ಕೆ ಈ ಕೆಲಸವನ್ನು ಮಾಡಲಿಲ್ಲ, ೧೯೮೦–೮೧ನೇ ಸಾಲಿನಲ್ಲಿ ಮತ್ತು ೧೯೮೧–೮೨ನೇ ಸಾಲಿನ ವರೆಗೂ ಏತಕ್ಕೆ ಅವರು ಇದರ ಬಗ್ಗೆ ಕಾಳಜಿ ವಹಿಸಲಿಲ್ಲ ?

ಶ್ರೀ ವೈ. ರಾಮಕೃಷ್ಣ.—ತಾವು ರಾಜಕೀಯವಾಗಿ ೨೦೦ ಆರ್‌ವಿಡಿ ಗಳನ್ನು ಕಡೆಗಾಣಿಸಿದ್ದೀರಿ...

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಪ್ರತಿ ಸಲ ರಾಜಕೀಯವೆಂದು ಹೇಳುತ್ತಾರೆ. ಆದರೆ ಅಂತಹ ರಾಜಕೀಯವನ್ನು ನಾನು ಮಾಡುವವನಲ್ಲ. ಅವರು ತಮ್ಮ ಅಭಿಪ್ರಾಯಗಳನ್ನು ಮತ್ತು ಸಲಹೆಗಳನ್ನು ಸಹ ಕೊಟ್ಟಿದ್ದಾರೆ. ನಾನು ಅವರು ಕೊಟ್ಟಂತಹ ಸಲಹೆಗಳನ್ನು ಮತ್ತು ಸೂಚನೆಗಳನ್ನು ಸ್ವಾಗತಿಸುತ್ತೇನೆ. ಅವರು ನನಗೆ ನಮ್ಮ ಅಣ್ಣನ ರೂಪದಲ್ಲಿದ್ದು ನನಗೆ ಸಲಹೆಗಳನ್ನು ಕೊಟ್ಟಿದ್ದಾರೆ. ಆದ್ದರಿಂದ ನಾನು ಅವುಗಳನ್ನು

ಸ್ವೀಕಾರ ಮಾಡುತ್ತೇನೆ. ಆದರೆ ಅವರು ಮಾತನಾಡುವಾಗ ರಾಜಕೀಯವೆಂದು ಹೇಳಿದ್ದನ್ನು ಮಾತ್ರ ನಾನು ಒಪ್ಪಿಕೊಳ್ಳುವುದಿಲ್ಲ. ಅಂತಹ ರಾಜಕೀಯ ನಾನು ಮಾಡುವುದಿಲ್ಲ. ಆ ಒಂದು ಶಬ್ದಕ್ಕೆ ನಾನು ಇವತ್ತು ಮಾನ್ಯ ಸದಸ್ಯರಿಗೆ ಉತ್ತರ ಕೊಡಬೇಕಾಗಿದೆ. ೧೯೮೨ರವರೆಗೆ ತಾವು ಏತಕ್ಕೆ ಆರ್‌ಡಿಗಳನ್ನು ಸ್ಯಾಂಕ್ಷನ್ ಮಾಡಲಿಲ್ಲ. ನಾವು ರಾಜಕೀಯವನ್ನು ಮಾಡುತ್ತೇವೆಯೋ ಅಥವಾ ನೀವು ರಾಜಕೀಯವನ್ನು ಮಾಡಿದ್ದೀರೋ ?

ಶ್ರೀ ಎಂ. ವೀರಪ್ಪ ಮೊಯಿಲಿ.—ಈಗ ಮಾನ್ಯ ಸಚಿವರು ಉತ್ತರ ಕೊಡುವಾಗ ಹೇಳಿದರು ಹೊಸ ನೇಮಕಾತಿ ಸಮಿತಿಗಳು ರಚನೆಯಾಗಿವೆ. ಆದರೂ ಕೂಡ ಇಲಾಖೆಯಲ್ಲಿ ಏನೇನು ನಡೆಯುತ್ತಿದೆ ಎನ್ನುವ ಬಗ್ಗೆ ಮಾನ್ಯ ಸಚಿವರಿಗೆ ಪೂರ್ಣ ಪರಿಜ್ಞಾನವಿರಬೇಕು. ಈಗ ೩೭ ಸಾವಿರ ಅರ್ಜಿಗಳು ಬಂದಿವೆಯೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಆದರೆ ಆ ಅರ್ಜಿಗಳನ್ನು ಕರೆದಿರುವ ದಿನಾಂಕ ಯಾವುದು ? ಯಾವಾಗ ಅಡ್ವರ್‌ಟೈಜ್ ಮಾಡಿದರು ? ಆ ಅರ್ಜಿಗಳನ್ನು ಸ್ಕ್ರುಟಿನಿ ಮಾಡಿದ್ದೀರಾ ? ಇಲ್ಲವೇ ಎಂಬುದನ್ನು ತಿಳಿಸಬೇಕು. ಆ ಅರ್ಜಿಗಳಲ್ಲಿ ಈಗಾಗಲೇ ಯಾರಿಗಾದರೂ ಇಂಟರ್‌ವ್ಯೂ ಕಳುಹಿಸಿದ್ದೀರಾ ? ಆ ಅರ್ಜಿಗಳು ಯಾವ ಸ್ಟೇಜ್‌ನಲ್ಲಿವೆ ? ಅದು ಏನೂ ಮಾಡದಿದ್ದರೆ ತಾವು ೩೭ ಸಾವಿರ ಜನರ ಕೈಯಿಂದ ಅರ್ಜಿಗಳನ್ನು ತೆಗೆದುಕೊಂಡು ಆ ಅರ್ಜಿಗಳನ್ನು ಏನು ಮಾಡುತ್ತೀರಿ ? ಆ ಅರ್ಜಿಗಳನ್ನು ಈಗ ಕಡೆಗಾಣಿಸಿ ಮತ್ತೆ ಹೊಸ ಅರ್ಜಿಗಳನು ಕರೆದರೆ ಅದು ರಾಜಕೀಯವಾಗುವುದಿಲ್ಲವೇ ?

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್.—ಸ್ವಾಮಿ, ೩೭ ಸಾವಿರ ಅರ್ಜಿಗಳ ಪ್ರಶ್ನೆ ಉದ್ಭವವಾಗಿರುವುದು ಈಗ ತಾವು ಹೇಳಿದ ಮೇಲೆ ತಾವು ಈಗ ಪ್ರಶ್ನೆ ಕೇಳಿದ್ದೀರಿ. ಇಷ್ಟು ವರ್ಷ ತಾವು ಏಕೆ ಸುಮ್ಮನೆ ಕೇಳುತಿದ್ದೀರಿ ಎಂಬುದನ್ನು ನಾನು ಕೇಳುತ್ತೇನೆ. ಇನ್ನೂ ಬೇರೆ ಮಾಹಿತಿಯನ್ನು ಕೇಳಿದ್ದೀರಿ.

ಶ್ರೀ ವೀರಪ್ಪ ಮೋಯಿಲಿ.—ಉತ್ತರ ಕೊಡುವಾಗ ಮಾಹಿತಿ ಕೊಡದೆ ಇದ್ದರೆ ಹೇಗೆ ? ಜವಾಬ್ದಾರಿಯಿಂದ ಮಂತ್ರಿಯವರು ಉತ್ತರವನ್ನು ಕೊಡಬೇಕಾಗುತ್ತವೆ.

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್.—ತಮಗೆ ಇದರ ಬಗ್ಗೆ ಹೆಚ್ಚಿನ ಮಾಹಿತಿ ಬೇಕಾಗಿದ್ದರೆ ಬೇರೇ ಒಂದು ಚರ್ಚೆಯನ್ನು ಇಟ್ಟುಕೊಳ್ಳೋಣ, ಇದರ ಬಗ್ಗೆ ಆಗ ಕೂಲಂಕಷವಾಗಿ ಚರ್ಚೆ ಮಾಡಬಹುದು.

ಶ್ರೀ ಧರ್ಮಸಿಂಗ್.—ಶ್ರೀ ರಾಮಕೃಷ್ಣರವರು ನೇರವಾದ ಪ್ರಶ್ನೆಯನ್ನು ಕೇಳಿದ್ದಾರೆ. ತಾವು ಕ್ಯಾಬಿನೇಟ್ ದರ್ಜೆಯ ಮಂತ್ರಿಯಾಗಿರುವುದರಿಂದ ಎಷ್ಟು ಅರ್ಜಿಗಳು ಬಂದಿವೆ ಎಂಬ ಮಾಹಿತಿ ಇಲ್ಲದೆ ಉತ್ತರ ಕೊಟ್ಟರೆ ಹೇಗೆ ? ತಾವು ಸ್ಪಷ್ಟವಾಗಿ ಉತ್ತರ ಕೊಡಬೇಕು.

ಶ್ರೀ ವೈ. ರಾಮಕೃಷ್ಣ.—ಅಧ್ಯಕ್ಷರೇ, ಈಗ ಮತ್ತೊಂದು ಪ್ರಶ್ನೆ. ಕಳೆದ ವರ್ಷ ರಾಜ್ಯದಲ್ಲಿ ಅನೇಕ ಕಡೆ ಕುರಿಗಳು ಸತ್ತವು. ಅನೇಕ ಕಡೆ ಪತ್ರಿಕೆಗಳಲ್ಲಿ ದೊಡ್ಡ ದೊಡ್ಡದಾಗಿ ಆ ಫೋಟೋಗಳು ಬಂದಿವೆ, ಎಲ್ಲೆಲ್ಲೂ ಸತ್ತಂಥ ಕುರಿಗಳಿಗೆ ಪರಿಹಾರ ಕೊಡಬೇಕೆಂದು ಒಂದು ದೊಡ್ಡ ಆಂದೋಲನವೇ ನಡೆಯಿತು. ಅದನ್ನು ಮನಗಂಡು ಆಗಿನ ಸರ್ಕಾರ ೧೦ ಲಕ್ಷ ರೂಪಾಯಿಗಳ ಪರಿಹಾರವನ್ನು ಅವರಿಗೆ ಒದಗಿಸವುದಕ್ಕೆ ಮಂಜೂರಾತಿ ನೀಡಿತ್ತು. ಮೊದಲನೆಯ ಕಂತಾಗಿ ೫ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿತ್ತು. ಇದಕ್ಕೆ ಒಂದು ಕಮಿಟಿ ಕಾನ್‌ಸ್ಟಿಟ್ಯೂಟ್ ಮಾಡಿದ್ದಾರೆ. ಆದರೆ ಇದುವರೆಗೂ ಅವರಿಗೆ ಪರಿಹಾರ ಕೊಡದೆ, ಅವರು ಈ ಹಣವನ್ನು ತೆಗೆದುಕೊಳ್ಳುವುದಕ್ಕಾಗಿ ಸಂಬಂಧಪಟ್ಟ ಕಚೇರಿಗಳಿಗೆ ದಿನವೂ ಅಲೆಯುವ ಪ್ರಸಂಗ ಬಂದಿದೆ. ಅವರಿಗೆ ಹಣ ಕೊಡತಕ್ಕಂಥ ಏರ್ಪಾಡನ್ನು ಇದುವರೆಗೂ ಮಾಡುವುದಕ್ಕೆ ಆಗಿಲ್ಲ. ಇದರ ಬಗ್ಗೆ ಏನು ಕಾರ್ಯಕ್ರಮ ನೀವು ತೆಗೆದುಕೊಂಡಿದ್ದೀರಿ ?

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್.—ಈಗ ಇದರ ಹಗ್ಗೆ ಯಾವ ಯಾವ ಜಿಲ್ಲೆಗಳಿಂದ ವರದಿ ಬಂದಿದೆ ಆ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಎಷ್ಟು ದುಡ್ಡು ಕೇಳಿದ್ದಾರೋ ಅಷ್ಟು ದುಡ್ಡು ಕೊಟ್ಟಿದ್ದೇವೆ ಇನ್ನೂ ಹೆಚ್ಚಿನ ಮಾಹಿತಿ ಬೇಕಾಗಿದ್ದರೆ ತಮಗೆ ಒದಗಿಸಿಕೊಡುತ್ತೇನೆ. ಇನ್ನು ಈ ಅರ್ಜಿಗಳ ಬಗ್ಗೆ ಮಾನ್ಯ ಧರ್ಮಸಿಂಗ್‌ರವರು ಹೇಳಿದ್ದಾರೆ. ನನ್ನ ವರದಿ ಪ್ರಕಾರ ಅಪ್ಲಿಕೇಷನ್ ೧೯೮೦–೮೧, ೮೨, ೮೩ ರಲ್ಲಿ ಬಂದಿಲ್ಲ. ೭೮–೭೯ ರಲ್ಲಿ ಬಂದಂಥ ಅರ್ಜಿಗಳು. ಅವು ೧೯೭೮–೭೯ ರಲ್ಲಿ ಅವುಗಳ ಹಾಗೇ ೫

ವರ್ಷಗಳು ಕೊಳೆಯುತ್ತಿದ್ದವು. ಈಗ ರಿಕ್ರೂಟ್‌ಮೆಂಟ್ ಕಮಿಟಿಯಾದ ಮೇಲೆ ನಾವು ಅವುಗಳನ್ನು ಪರಿಶೀಲಿಸುತ್ತಿದ್ದೇವೆ. ಮತ್ತು ಹೊಸ ಅರ್ಜಿಗಳನ್ನು ಸಹ ಪರಿಶೀಲಿಸುತ್ತೇವೆ ಎನ್ನುವ ಮಾತನು ಹೇಳುತ್ತೇನೆ.

ಡಾ|| ವಿ. ಎಸ್. ಆಚಾರ್ಯ.—ಸನ್ಮಾನ್ಯ ಅಧ್ಯಕ್ಷರೇ. ಸಚಿವರು ತಮ್ಮ ಇಲಾಖೆಯ್ನು ಬೇಡಿಕೆಯು ಬಗ್ಗೆ ನಡೆದ ಚರ್ಚೆಗೆ ಉತ್ತರ ಕೊಡುತ್ತಿದ್ದಾರೆ. ಇದಕ್ಕೆ ಸವಾಲು ಮತ್ತು ಮರು ಸವಾಲು ಹಾಕುವುದರಿಂದ ಹೆಚ್ಚೇನು ಒಳ್ಳೆಯ ಫಲಿತಾಂಶ ಬರುವುದಿಲ್ಲ. ನಮ್ಮ ರಾಜ್ಯದಲ್ಲಿ ನಮ್ಮ ಸಚಿವರು ಪ್ರಯಾಣ ಮಾಡಿದ್ದಾರೆ ರಾಜ್ಯಾದ್ಯಂತ ಸಂಚಾರ ಮಾಡಿ ಗ್ರಾಮಾಂತರ ಪ್ರದೇಶಗಳನ್ನು ನೋಡಿದ್ದಾರೆ. ಇವೊತ್ತು ಗ್ರಾಮೀಣ ಪಶುವೈದ್ಯ ಶಾಲೆಗಳಲ್ಲಿ ಹೆಚ್ಚಿನ ಕಡೆಗಳಲ್ಲಿ ವೈದ್ಯರುಗಳು, ಕಾಪಾಂಡರುಗಳು ಇಲ್ಲದಿರತಕ್ಕಂಥ ಸ್ಪಷ್ಟವಾದ ಮತ್ತು ಗಂಭೀರವಾದ ಪರಿಸ್ಥಿತಿಯನ್ನು ಅವರು ಕಂಡಿದ್ದಾರೆ. ಅನೇಕ ಕಡೆ ಮೊಬೈಲ್ ಆಸ್ಪತ್ರೆಗಳು ಮತ್ತು ಇತರೆ ಆಸ್ಪತ್ರೆಗಳಲ್ಲಿ ಡಾಕ್ಟರ್ ಮತ್ತು ಕಾಪಾಂಡರ್‌ಗಳು ಇಲ್ಲದೆ ಆಸ್ಪತ್ರೆಗಳ ಬಾಗಿಲುಗಳನ್ನು ತೆಗೆಯುತ್ತಿಲ್ಲ. ಈಗ ಸುಮಾರು ೫೫ ಸಾವಿರ ಸಿಬ್ಬಂದಿ ನೇಮಕ ವಾಗಬೇಕಾಗಿದೆ. ಈ ಸರ್ಕಾರ ಬಂದ ಮೇಲೆ ಕೂಡ ಈ ಆಸ್ಪತ್ರೆಗಳ ಬಾಗಿಲುಗಳು ತೆಗೆಯುವುದಕ್ಕೆ ಪ್ರಾರಂಭ ಮಾಡಿಲ್ಲ. ನಿಮ್ಮ ಈ ನೇಮಕಾತಿ ಸಮಿತಿಗಳು ಎಷ್ಟು ಸಲ ಸಿಟಿಂಗ್ ಮಾಡಿವೆ. ಅವುಗಳನ್ನು ನೇಮಕ ಮಾಡಿದ ಮೇಲೆ ಒಂದು ಸಲವೂ ಸೇರಿಲ್ಲವೆನ್ನುವ ಮಾಹಿತಿ ನನ್ನ ಬಳಿ ಇದೆ. ಇವೊತ್ತು ೩೭ ಸಾವಿರ ಅರ್ಜಿಗಳ ಬಗ್ಗೆ ಏಕೆ ತಲೆ ಕೆಡಿಸಿಕೊಳ್ಳುತ್ತಿದ್ದೀರಿ. ಈಗ ಯಾವ ನೇಮಕಾತಿ ಸಮಿತಿಗಳು ಇವೆ ಅವುಗಳನ್ನು ಕೂಡಲೇ ಸೇರಿಸಿ ಯಾವ ಯಾವ ಹುದ್ದೆಗಳಿಗೆ ನೇಮಕ ಮಾಡಬಹುದೋ ಅವುಗಳನ್ನು ತಕ್ಷಣ ಮಾಡಬೇಕು. ಅದೇ ರೀತಿ ಕಾಪಾಂಡರ್ ಟ್ರೈನಿಂಗ್ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತಿದ್ದೇವೆಂದು ಭರವಸೆ ಕೊಟ್ಟಿದ್ದಾರೆ. ಆದ್ದರಿಂದ ಅವರಿಗೆ ತರಬೇತಿ ಕೊಡುವ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ? ಈ ದೃಷ್ಟಿಯಿಂದ ಪ್ರಾಮಾಣಿಕವಾದ ಉತ್ತರವನ್ನು ತಾವು ಹೇಳಬೇಕು. ಹಾಗೆಯೇ ನಮ್ಮ ರಾಜ್ಯದಲ್ಲಿರತಕ್ಕಂಥ ಪಶುವೈದ್ಯ ಶಾಲೆಗಳು ಪುನಃ ಕೆಲಸಮಾಡುವುದಕ್ಕೆ ಯಾವ ಹೊತ್ತಿನಿಂದ ಪ್ರಾರಂಭ ಮಾಡುತ್ತಿವೆ ? ಮೊಬೈಲ್ ಆಸ್ಪತ್ರೆಗಳಿಗೆ ಲಕ್ಷಗಟ್ಟಲೇ ಹಣವನ್ನು ಹಿಂದಿನ ಸರ್ಕಾರ ಖರ್ಚು ಮಾಡಿ ಹಾಗೆಯೇ ಬಿಟ್ಟಿದೆ. ಅದನ್ನೂ ಸಹ ಚಲಾವಣೆ ಮಾಡುವುದಕ್ಕೆ ಯಾವಾಗ ಕ್ರಮ ಕೈಗೊಳ್ಳುತ್ತೀರಿ ಎಂಬು ದರ ಬಗ್ಗೆ ಉತ್ತರ ಕೊಡಬೇಕು ?

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್.—ಮಾನ್ಯ ಅಧ್ಯಕ್ಷರೇ, 'ವೆಟರ್ನರಿ ಲೈವ್-ಸ್ಟಾಕ್ ಮೆನ್' ಅವರಿಗೆ ಟ್ರೈನಿಂಗ್ ಕೊಡಬೇಕಾದರೆ ಸಾವಿರಾರು ಜನರಿಗೆ ಒಮ್ಮೇಲೆ ಕೊಡುವುದಕ್ಕೆ ಆಗುವುದಿಲ್ಲ ಒಂದೊಂದು ಟ್ರೈನಿಂಗ್ ಸೆಂಟರ್‌ನಲ್ಲಿ ೫೦ ಜನರಿಗಿಂತ ಹೆಚ್ಚು ಜನರಿಗೆ ಟ್ರೈನಿಂಗ್ ಕೊಡುವುದಕ್ಕಾಗುವುದಿಲ್ಲ ಎರಡನೆಯದು. ಕಾಪಾಂಡರ್‌ಗಳಿಗೆ ಒಂದೊಂದರಲ್ಲಿ ೨೦ ಜನರಿಗಿಂತ ಹೆಚ್ಚು ಜನರಿಗೆ ಟ್ರೈನಿಂಗ್ ಕೊಡುವುದಕ್ಕಾಗುದಿಲ್ಲ ಈಗ ಸರ್ಕಾರ ೪ ಲೈವ್-ಸ್ಟಾಕ್-ಇನ್ಸ್‌ಪೆಕ್ಟರ್ ಟ್ರೈನಿಂಗ್ ಸೆಂಟರ್ ತೆಗೆದಿದೆ, ಇನ್ನೂ ಹೆಚ್ಚು ತೆಗೆಯಬೇಕು ಎನ್ನುವ ಆಸೆ ನನ್ನದು. ಆದರೆ ಅದಕ್ಕೆ ಬೇಕಾಗಿರತಕ್ಕಂಥ ಸಂಪನ್ಮೂಲಗಳ ವ್ಯವಸ್ಥೆಯೂ ಕೂಡ ಆಗಬೇಕು. ಇದೆ ಪ್ರಕಾರವಿದ್ದರೆ. ಇನ್ನು ೫ ವರ್ಷವಾದಲ್ಲಿ ಅವರನ್ನು ತುಂಬುವುದಕ್ಕೆ ಸಾಧ್ಯವಾಗುವುದಿಲ್ಲ. ಈ ಒಂದು ಟ್ರೈನಿಂಗ್ ಕೊಡಬೇಕಾದರೆ, ಎಲ್ಲೆಲ್ಲಿ ದೊಡ್ಡ ಆಸ್ಪತ್ರೆಗಳು ಇರುತ್ತವೆ ಅಂತಹ ಕಡೆ ಕೊಡಬೇಕಾಗುತ್ತದೆ. ನೇಮಕಾತಿ ಸಮಿತಿ ಒಂದೇಸಾರಿ, ಅಂದರೆ ಹೋದ ತಿಂಗಳು ೧೫ನೇ ತಾರೀಖು ಕೂಡಿದೆ. ಇನ್ನು ಒಂದೆರಡು ತಿಂಗಳಲ್ಲಿ ಈ 'ಲೈವ್.ಸ್ಟಾಕ್ ಮೆನ್' ಗಳನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ. ಇನ್ನು ಈ ಕಾಪಾಂಡರ್‌ಗಳನ್ನು ಅದಷ್ಟು ತೀವ್ರವಾಗಿ ಹೆಚ್ಚಿನ ಸಂಖ್ಯೆಯಲ್ಲಿ ಮಾಡಬೇಕೆಂಬ ಆಲೋಚನೆಯಲ್ಲಿದ್ದೇವೆ. ಇದರ ಬಗ್ಗೆ ಸರ್ಕಾರ ತೀವ್ರವಾಗಿ ಅಸಕ್ತಿಯನ್ನು ಹೊಂದಿದೆಯೆಂದು ನಾನು ಹೇಳಬಯಸುತ್ತೇನೆ.

ಶ್ರೀ ಬಿ. ಸೋಮಶೇಖರ.—೭೭೮-೭೯ರಲ್ಲಿ ೩೭ ಸಾವಿರ ಅರ್ಜಿಗಳನ್ನು ಕರೆದಿದ್ದೇವೆ ಎಂದು ಮಂತ್ರಿಗಳು ಹೇಳಿದ್ದಾರೆ. ಆದರೆ ನೇಮಕಾತಿ ಸಮಿತಿಗಳನ್ನು ಕಳೆದ ೫ ವರ್ಷಗಳಿಂದಲೂ ಮಾಡಿಲ್ಲ. ಆದರೆ ನಮ್ಮ ಸರ್ಕಾರ ಬಂದು ೯ ತಿಂಗಳಾಯಿತು ನೇಮಕಾತಿ ಸಮಿತಿ ಮಾಡಿ ಒಂದು ಬೈಠಕ್‌ನ್ನು ಮಾಡಿದೆ. ವಿರೋಧಪಕ್ಷದ ನಾಯಕರು, ಮತ್ತು ಶ್ರೀ ರಾಮಕೃಷ್ಣರವರು ಹೇಳುತ್ತಿದ್ದಾರೆ, ಇದರಲ್ಲಿ ರಾಜಕೀಯ ಮಾಡಿದ್ದೇವೆಂದು ಇದು ಯಾವ ರೀತಿಯ ರಾಜಕೀಯ ಆಗುತ್ತದೆ ?

ಶ್ರೀ ವೈ. ರಾಮಕೃಷ್ಣ—ಸ್ವಾಮಿ, ನಾನು ೧೯೮೧ರಲ್ಲಿ ಮಂತ್ರಿಯಾಗಿದ್ದೆ. ಇವರು ಹೇಳುವುದರಲ್ಲಿ ಏನು ಅರ್ಥವಿದೆ ?

ಶ್ರೀ ಮಾಣಿಕ್‌ರಾವ್ ಪಾಟೀಲ್.—ಮಾನ್ಯ ಸದಸ್ಯರು ಹೇಳುತ್ತಿರುವುದು ನಮ್ಮ ಸಂಪ್ರದಾಯಗಳಿಗೆ ವಿರುದ್ಧವಾಗಿದೆ. ಈ ತರಹ ಹೇಳುವುದು ಸರಿಯಲ್ಲ.

ಶ್ರೀ ಕೆ. ಎಚ್. ರಂಗನಾಥ್—ನಮ್ಮ ಕೃಷಿ ವಿಶ್ವವಿದ್ಯಾಲಯ ೧೯೬೫ರಲ್ಲಿ ಪ್ರಾರಂಭವಾಗಿದೆ. ಅಲ್ಲಿಂದ ಸುಮಾರು ೭೪ರವರೆಗೂ ವೆಟರ್ನರಿ ಕಾಲೇಜಿನಲ್ಲಿ ತೆಗೆದುಕೊಳ್ಳುತ್ತಿದ್ದಂಥ ಸಂಖ್ಯೆ ೬೦ ಇದ್ದದ್ದು ನಂತರ ೮೦ ಆಯಿತು ಈಗ ೧೦೦ ಆಗಿದೆ. ಈಗ ಬಹುಮಟ್ಟಿಗೆ ನಮಗೆ ೬೦೦–೭೦೦ರ ವರೆಗೆ ಡಾಕ್ಟರ್ಸ್ ಬೇಕಾಗುತ್ತಾರೆ. ಮತ್ತು ಅದೇ ರೀತಿ ಲೈವ್ ಸ್ಟಾಕ್‌ಮನ್, ಕಾಪೌಂಡ್‌ರ್ಸ್ ಕೂಡ ಬೇಕಾಗುತ್ತಾರೆಂದು ಮಾನ್ಯ ಶ್ರೀ ದೇವರಾಜ್ ಅರಸ್‌ರವರ ಕಾಲದಲ್ಲಿಯೂ ಇದರ ಬಗ್ಗೆ ವಿಚಾರ ಮಾಡಿ ಟ್ರೈನಿಂಗ್ ಕೊಡತಕ್ಕ ವ್ಯವಸ್ಥೆ ಮಾಡಬೇಕೆಂದು ಇತ್ತು. ಅದನ್ನು ಹೆಚ್ಚಿನ ಸಂಖ್ಯೆಯಲ್ಲಿ ಮಾಡಬೇಕು. ಈಗ ೧೦೦–೧೨೦ ಸೀಟ್ಸ್ ಇದ್ದರೂ ಅವರು ಡಾಕ್ಟರ್‌ಗಳಾಗಿ ಬರಬೇಕಾದರೆ ಇನ್ನು ೫ ವರ್ಷ ಬೇಕಾಗುತ್ತದೆ.

ಐದು ವರ್ಷಗಳವರೆಗೆ ನಾವು ಕಾಯಬೇಕು. ಅಲ್ಲಿಯವರೆಗೆ ಡಾಕ್ಟರ್‌ಗಳು ಇಲ್ಲದೇ ಇರತಕ್ಕ ಪರಿಸ್ಥಿತಿ ಬರುತ್ತದೆ. ನಾಲ್ಕು ಸೆಂಟರ್‌ಗಳಲ್ಲಿ ಕೇವಲ ೫೦ ಜನರಿಗೆ ತರಬೇತಿ ಕೊಡುವ ವ್ಯವಸ್ಥೆ ಇದೆ ಎಂದು ಹೇಳುತ್ತೀರಿ. ಅದು ಸರಿಯಲ್ಲ. ಒಂದು ಯೋಜನೆಯನ್ನು ಹಾಕಿಕೊಂಡು ಹತ್ತು ವರ್ಷಗಳಲ್ಲಿ ಏನು ವ್ಯವಸ್ಥೆ ಆಗಬೇಕು ಎಂಬುದನ್ನು ಗಮನದಲ್ಲಿಟ್ಟುಕೊಂಡು ಹೆಚ್ಚು ಟ್ರೈನಿಂಗ್ ಸೆಂಟರ್‌ಗಳನ್ನು ತೆಗೆಯಬೇಕೆಂದು ವಿಚಾರವಿದೆಯೆಂದು ತಾವು ಹೇಳಿರುವುದು ಸ್ವಾಗತಾರ್ಹವಾದ ವಿಚಾರ. ಇದನ್ನು ತಾವು ಹೆಚ್ಚು ಮಾಡಬೇಕಾಗುತ್ತದೆ. ನೀವು 'ಆಪರೇಷನ್ ಫ್ಲಡ್ ಎರಡು' ಬರುತ್ತದೆಂದು ಹೇಳಿದಿರಿ. ಇದಕ್ಕೆಲ್ಲಾ ಜನರು ಬೇಕಾಗುತ್ತಾರೆ. ಇಲ್ಲದೇ ಹೋದರೆ ತೊಂದರೆಯಾಗುತ್ತದೆ. ಈಗ ಬ್ಯಾಂಕ್‌ಗಳವರು ಕೃಷಿ ವಿಶ್ವವಿದ್ಯಾನಿಲಯ ಪದವೀಧರರನ್ನು, ಪಶುವೈದ್ಯ ಪದವೀಧರರನ್ನು, ಮೀನುಗಾರಿಕೆಯಲ್ಲಿ ತರಬೇತಿ ಪಡೆದವರನ್ನು ಸಾಲ ಕೊಡಲು ಅನುಕೂಲವಾಗುವಂತೆ ಇವರುಗಳನ್ನು ತಮ್ಮಲ್ಲಿ ನೇಮಕ ಮಾಡಿಕೊಳ್ಳುತ್ತಿದ್ದಾರೆ. ಹೆಚ್ಚು ಸಂಬಳ ದೊರೆಯುವುದರಿಂದ ಅಲ್ಲಿ ಆಕರ್ಷಣೆ ಜಾಸ್ತಿ ಇರುವುದರಿಂದ ಅವರು ಅಲ್ಲಿಗೆ ಹೊರಟುಹೋಗುತ್ತಾರೆ. ಆದರೆ ಅವರು ಡಾಕ್ಟರ್ ಆಗಿ ಸೇರುವುದಾದರೆ ನಿವೃತ್ತಿಯಾಗುವವರೆಗೂ ಹಾಗೆಯೇ ಇರಬೇಕಾಗುತ್ತದೆ. ಕಾಂಪೌಂಡರ್ ಆಗಿ ಸೇರಿದವನು ಕಂಪೌಡರ್ ಆಗಿಯೇ ನಿವೃತ್ತಿಯಾಗುತ್ತಾನೆ. ಲೈವ್ ಸ್ಟಾಕ್‌ಮನ್ ಆಗಿ ಸೇರಿಕೊಂಡವನು ಹಾಗೆಯೇ ನಿವೃತ್ತಿಯಾಗುತ್ತಾನೆ. ಇಲ್ಲಿ ಬಡ್ತಿ ಅವಕಾಶಗಳು ಬೇರೆ ಇಲ್ಲ. ಇದನ್ನು ಸಮಗ್ರವಾಗಿ ವಿಚಾರ ಮಾಡುವುದಾದರೆ ಒಂದು ವ್ಯವಸ್ಥಿತವಾದಂತಹ ಪ್ಲಾನ್ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೀರೋ ಹೇಗೆ?

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್.—ಮಾನ್ಯ ರಂಗನಾಥ್‌ರವರು ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ಲೈವ್ ಸ್ಟಾಕ್ ಇನ್‌ಸ್ಪೆಕ್ಟರ್ ಮತ್ತು ಕಂಪೌಂಡರ್‌ಗಳ ಕೊರತೆ ಇದೆ. ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವುದಕ್ಕೆ ನಾನು ಸಂಪೂರ್ಣ ಪ್ರಯತ್ನ ಮಾಡುತ್ತೇನೆ ಎನ್ನತಕ್ಕಂಥ ಆಶ್ವಾಸನೆಯನ್ನು ಶ್ರೀ ರಂಗನಾಥ್ ಅವರಿಗೆ ಕೊಡುತ್ತೇನೆ. ಅವರು ರಾಜಕೀಯವನ್ನು ಬೆರಸದೇ ಒಳ್ಳೆಯ ಸಲಹೆಯನ್ನು ಕೊಟ್ಟಿರುವುದಕ್ಕೆ ಸಂತೋಷ ಪಡುತ್ತೇನೆ.

ಒಬ್ಬ ಮಾನ್ಯ ಸದಸ್ಯರು.—ಗ್ರಾಮಾಂತರ ಪ್ರದೇಶಗಳಲ್ಲಿ ವೈದ್ಯಕೀಯ ಪಶು ಆಸ್ಪತ್ರೆಗಳು ರಿಪೇರಿ ಮಾಡದೆ ಬಿದ್ದುಹೋಗಿವೆ. ಇದನ್ನು ಸರಿಮಾಡಲು ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್.—ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳೋಣ. ಇದರ ಬಗ್ಗೆ ಪಿ. ಡಬ್ಲ್ಯೂಡಿ. ಇಲಾಖೆಗೆ ತಿಳಿಸಲಾಗುವುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈಗಾಗಲೇ ಮಾನ್ಯ ಮಂತ್ರಿಗಳು ಹೇಳಿದರು ಅನೇಕ ಕಡೆ ವೈದ್ಯರ ಕೊರತೆ ಇದೆ, ಹೊಸ ಆಸ್ಪತ್ರೆಗಳನ್ನು ಕಟ್ಟತಕ್ಕಂಥ ವ್ಯವಸ್ಥೆ ಮಾಡಬೇಕಾಗಿದೆ ಎಂದು ಹೇಳಿದರು. ನನ್ನ ಸಲಹೆ ಏನೆಂದರೆ ಉತ್ತರ ಕರ್ನಾಟಕದಲ್ಲಿ ಇನ್ನೊಂದು ಪಶುವೈದ್ಯ ಕಾಲೇಜನ್ನು ಪ್ರಾರಂಭಮಾಡಿ ೧೦೦–೧೨೦ ಜನರನ್ನು ತರಬೇತಿ ಮಾಡಲು ವ್ಯವಸ್ಥೆ ಮಾಡಬಹುದು. ಇದನ್ನು ಮಾಡುತ್ತೀರೋ ಹೇಗೆ?

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್.—ಮಾನ್ಯ ಸದಸ್ಯರು ಕೊಟ್ಟ ಸಲಹೆ ಬಹಳ ಯೋಗ್ಯವಾಗಿದೆ: ಇದು ಕೃಷಿ ಮಂತ್ರಿಗಳಿಗೆ, ಕೃಷಿ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಪಶುವೈದ್ಯ ಕಾಲೇಜನ್ನು ತಾವೇ ಪ್ರಾರಂಭಮಾಡಬಹುದು. ಇದು ಕೃಷಿ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬಂದರೂ ಕೂಡ ಕೃಷಿ ಮಂತ್ರಿಗಳು ಇದನ್ನು ಬೇಡ ಎಂದು ಹೇಳುವುದಿಲ್ಲ. ಏಕೆಂದರೆ ತಾವಿಬ್ಬರೂ ಒಂದೇ ಪ್ರದೇಶದಿಂದ ಬಂದಿರುವರಾಗಿದ್ದೀರಿ.

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್.—ನಾನು ಹೊಸದಾಗಿ ಮಂತ್ರಿಯಾಗಿ ಒಂಬತ್ತು ತಿಂಗಳು ಆಗಿದೆ. ಅಷ್ಟೆ. ಇನ್ನೊಬ್ಬರ ಖಾತೆಯ ಕೆಲಸವನ್ನು ನಾನು ತೆಗೆದುಕೊಳ್ಳುವುದಕ್ಕೆ ಬರುತ್ತದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಬರುವಂತಿದ್ದರೆ ನಾನು ಖಂಡಿತವಾಗಿಯೂ ಪ್ರಯತ್ನ ಮಾಡುತ್ತೇನೆ.

ಶ್ರೀ ಬಿ. ಆರ್. ಯಾವಗಲ್.—ಪಶುಗಳಿಗೆ ತಾಯಿಬೇನೆ ಬಂದಾಗ ಒಂದು ಪಶುಗೆ ನಾಲ್ಕು ರೂಪಾಯಿಯಂತೆ ಶುಲ್ಕ ವಸೂಲು ಮಾಡುತ್ತಾರೆ. ಈ ಪದ್ಧತಿಯನ್ನು ನಿಲ್ಲಿಸುತ್ತೀರಾ? ನಮ್ಮ ಪ್ರದೇಶದಲ್ಲಿ ಪಶುವೈದ್ಯಶಾಲೆಗಳಿಗೆ ಟಿ.ಡಿ.ಬಿ.ಯವರು ಹಣ ಕೊಡಬೇಕು ಮತ್ತು ಹಳ್ಳಿಗಾಡುಗಳಲ್ಲಿ ಪಂಚಾಯತಿಯವರು ಕಟ್ಟಡವನ್ನು ಒದಗಿಸಿಕೊಡಬೇಕು. ಈ ಪದ್ಧತಿಯನ್ನು ನಿಲ್ಲಿಸುತ್ತೀರಾ?

ಒಬ್ಬರು ಮಾನ್ಯ ಸದಸ್ಯರು.—ಅನೇಕ ಕಡೆ ದನದ ದವಾಖಾನೆಗಳು ಬಾಡಿಗೆ ಮನೆಯಲ್ಲಿ ನಡೆಸಲ್ಪಡುತ್ತಿವೆ. ಸಿಬ್ಬಂಧಿಯವರಿಗೆ ಟಿ.ಡಿ.ಬಿ.ಯವರೇ ಪಗಾರ ಕೊಡಬೇಕಾಗುತ್ತದೆ. ಇವರಿಗೆ ಸರ್ಕಾರದವರೇ ಏಕೆ ಪಗಾರ ಕೊಡಬಾರದು? ಎಂದು ನಾನು ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ.

ಶ್ರೀ ಜೆ. ಡಿ. ಸೋಮಪ್ಪ.—ಮಾನ್ಯ ಅಧ್ಯಕ್ಷರೇ, ನಮ್ಮ ಪಶುವೈದ್ಯ ಇಲಾಖೆಯ ಮಂತ್ರಿಗಳು ಇಷ್ಟೊಂದು ವೇಗದಲ್ಲಿ ಉತ್ತರಗಳನ್ನು ಕೊಡುತ್ತಿರುವುದು ನನಗೆ ಬಹಳ ಸಂತೋಷವನ್ನು ಉಂಟುಮಾಡಿದೆ. ಆದರೆ ಇದೇ ರೀತಿಯಲ್ಲಿ ಕೆಲಸಗಳು ಆಗಬೇಕಾದದ್ದು ಬಹಳ ಮುಖ್ಯ. ಈಗ ಹಾಲಿನ ದರ ಏರಿಸುವುದಕ್ಕೆ ಒಂದು ಕಮಿಟಿಯನ್ನು ಮಾಡಿದ್ದೇವೆ ಎಂದು ಹೇಳಿದ್ದೀರಿ. ಎಷ್ಟು ದಿವಸಗಳಲ್ಲಿ ಈ ಕಮಿಟಿ ಅಸ್ತಿತ್ವಕ್ಕೆ ಬರುತ್ತದೆ? ಇದನ್ನು ಈ ವರ್ಷದಲ್ಲೇ ಮಾಡುತ್ತೀರೋ ಹೇಗೆ? ಎರಡನೆಯದು, ಮಂತ್ರಿಗಳು ರಾಜಿನಾಮೆ ಕೊಡಲಿ ಎಂದು ಒಬ್ಬರು ಮಾನ್ಯ ಸದಸ್ಯರು ಹೇಳಿದರು. ನಾನು ಹೇಳುವುದೇನೆಂದರೆ ಪಾಪ, ಅವರು ಮಂತ್ರಿಯಾಗುವುದಕ್ಕೆ ಗಡ್ಡ ಬೆಳೆಸಿದ್ದಾರೆ. ಅವರು ರಾಜೀನಾಮೆ ಕೊಡುವುದು ಬೇಡ. ಕೆಲಸವನ್ನು ಹೇಳಿದ ರೀತಿಯಲ್ಲಿ ಸರಿಯಾಗಿ ಮಾಡಿದರೆ ಸಾಕು.

ಶ್ರೀ ಬಿ. ಎಸ್. ಯಡಿಯೂರಪ್ಪ.—ಶಿಕಾರಿಪುರದಲ್ಲಿ ಸಂಚಾರಿ ಆಸ್ಪತ್ರೆಗೆ ಒಂದು ವ್ಯಾನ್‌ನ್ನು ಕೊಟ್ಟು ಎರಡು ತಿಂಗಳಾಗಿದೆ. ಅದು ಕೆಟ್ಟು ಹೋಗಿದೆ. ನಾನು ವೈದ್ಯರನ್ನು ಎರಡು ಸಾರಿ ಕರೆಯಿಸಿ ಮಾತನಾಡಿದೆ. ಅದನ್ನು ಸರಿಪಡಿಸಲು ಖರ್ಚು ಮಾಡಿಸತಕ್ಕಂಥ ಅಧಿಕಾರ ಅವರಿಗೆ ಇಲ್ಲ.

ಉಪಾಧ್ಯಕ್ಷರು.—ಇದರ ಬಗ್ಗೆ ನೀವು ವೈಯುಕ್ತಿಕವಾಗಿ ಹೋಗಿ ಕೇಳಿದರೆ ಮಂತ್ರಿಗಳು ಮಾಡಿಸಿಕೊಡುವುದಿಲ್ಲವೆ?

ಶ್ರೀ ಬಿ. ಎಸ್. ಯಡಿಯೂರಪ್ಪ.—ಎಲ್ಲಾ ಕಡೆಯಲ್ಲೂ ಆಸ್ಪತ್ರೆಗಳ ಪರಿಸ್ಥಿತಿ ಕೂಡ ಹೀಗೆಯೇ ಆಗಿದೆ. ದಯಮಾಡಿ ವೈದ್ಯರಿಗೆ ಒಂದು ಐದುನೂರು ಅಥವಾ ಸಾವಿರ ರೂಪಾಯಿಗಳನ್ನು ಖರ್ಚು ಮಾಡುವ ಅಧಿಕಾರ ಕೊಟ್ಟರೆ ಅವರೇ ವ್ಯಾನ್‌ನ್ನು ರಿಪೇರಿ ಮಾಡಿಸಿಕೊಳ್ಳುತ್ತಾರೆ. ವಿನಾಕಾರಣ ಅನುಮತಿಗಾಗಿ ಕಾಯುವುದು ತಪ್ಪುತ್ತದೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಈ ವರ್ಷ ಶೀಪ್‌ಬೋರ್ಡ್‌ಗೆ ಕೇವಲ ೩೭ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಿ. ಇದು ಏನೂ ಸಾಲದು. ಈ ಹಣ ಸಿಬ್ಬಂದಿಯವರ ಸಂಬಳ, ಟಿ. ಎ., ಡಿ ಎ.ಗೇ ಖರ್ಚಾಗುತ್ತದೆ, ಯೋಜನೆಗಳು ಕಾರ್ಯರೂಪಕ್ಕೆ ಬರಬೇಕಾದರೆ, ನಾಲ್ಕು ಜನರಿಗೆ ಉಪಯೋಗ ಆಗಬೇಕಾದರೆ ಹೆಚ್ಚಿನ ಹಣ ಕೊಡುವುದಕ್ಕೆ ತಾವು ವ್ಯವಸ್ಥೆ ಮಾಡುತ್ತೀರಾ?

ಶ್ರೀ ಬಿ. ಎಸ್. ಯಡಿಯೂರಪ್ಪ.—ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ನಾನು ಕೇಳಿದ ಪ್ರಶ್ನೆಗೆ ಉತ್ತರ ಹೇಳಿಬಿಡಲಿ. ಇಲ್ಲದಿದ್ದರೆ ಮಾಮೂಲಿನಂತೆ ಪರಿಶೀಲಿಸಲಾಗುವುದು ಎಂದು ಅವರು ಹೇಳಿಬಿಡುತ್ತಾರೆ.

ಉಪಾಧ್ಯಕ್ಷರು.—ಎಲ್ಲಾ ಪ್ರಶ್ನೆಗಳಿಗೂ ಅವರು ಕೊನೆಯಲ್ಲಿ ಉತ್ತರ ಕೊಡುತ್ತಾರೆ. ಅವಸರ ಮಾಡಬೇಡಿ.

ಶ್ರೀ ಬಿ. ಬೈರಪ್ಪಾಜಿ.—ಅನೇಕ ಪಶುವೈದ್ಯ ಆಸ್ಪತ್ರೆಗಳನ್ನು ಕೆಲವರು ದಾನವಾಗಿ ಕಟ್ಟಿಸಿ ಕೊಟ್ಟಿರುವುದು ಇದೆ. ನಮ್ಮ ತಾಲೂಕಿನಲ್ಲಿ ಐದು ಆಸ್ಪತ್ರೆಗಳನ್ನು ದಾನವಾಗಿ ಕಟ್ಟಿಸಿಕೊಟ್ಟಿದ್ದಾರೆ. ಇವುಗಳನ್ನು ನಿಮ್ಮ ಇಲಾಖೆಗೆ ತೆಗೆದುಕೊಳ್ಳದೇ ರಿಪೇರಿ ಆಗದೇ, ಇವತ್ತು ಅನೇಕ ಕಟ್ಟಡಗಳು ಬೀಳ ತಕ್ಕಂಥ ಪರಿಸ್ಥಿತಿ ಇದೆ. ಉದಾಹರಣೆಗೆ ಮಾಯಸಂದ್ರದಲ್ಲಿ ಐವತ್ತು ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ಹದಿನೈದು ವರ್ಷಗಳ ಹಿಂದೆ ಒಂದು ಆಸ್ಪತ್ರೆಯನ್ನು ಕಟ್ಟಿಸಿಕೊಟ್ಟಿದ್ದಾರೆ, ಈ ಕಟ್ಟಡ ವನ್ನು ಇವತ್ತಿಗೂ ಕೂಡ ರಿಪೇರಿ ಮಾಡಿಲ್ಲ. ಇಂಥಾದ್ದು ಬಹಳ ಇವೆ. ಇವುಗಳನ್ನು ಇಲಾಖೆ ಯಾವರೇ ವಹಿಸಿಕೊಂಡು, ಪಿ.ಡಬ್ಲ್ಯೂ.ಡಿ. ಯವರಿಗೆ ಹಣ ಕೊಟ್ಟು ಇವುಗಳನ್ನು ರಿಪೇರಿ ಮಾಡ ತಕ್ಕಂಥ ವ್ಯವಸ್ಥೆಯನ್ನು ಈ ವರ್ಷದಲ್ಲೇ ಏನಾದರೂ ಮಾಡುವುದಕ್ಕೆ ಪ್ರಯತ್ನ ಪಡುತ್ತೀರೋ?

ಶ್ರೀ ಮಲ್ಲಪ್ಪ.—ಮಾನ್ಯ ಅಧ್ಯಕ್ಷರೇ, ಪಶುವೈದ್ಯಶಾಲೆಗಳನ್ನು ಕಟ್ಟುವಾಗ ಸರ್ಕಾರ ಒಂದು ಷರತ್ತನ್ನು ಹಾಕುತ್ತದೆ. ಪಂಚಾಯತಿಯವರು ಕೂಡ ಹಣ ಕೊಡಬೇಕು. ಕೆಲವು ಪಂಚಾಯತಿ ಗಳು ಆರ್ಥಿಕವಾಗಿ ಅನುಕೂಲವಾಗಿಲ್ಲದಿರುವಾಗ, ಸರ್ಕಾರದವರು ನೇರವಾಗಿ ಪಶುವೈದ್ಯ ಶಾಲೆ ಗಳನ್ನು ಕಟ್ಟಲಿಕ್ಕೆ ಪ್ರಯತ್ನ ಮಾಡುತ್ತಾರೆಯೇ?

ಶ್ರೀ ಎನ್. ಜಿ. ನಾಯಕ.—ಅಧ್ಯಕ್ಷರೇ, ನಮ್ಮ ಚಿತ್ರದುರ್ಗ ಜಿಲ್ಲೆಯಲ್ಲಿ ಅಮೃತಮಹಲ್ ಕಾವಲುಗಳು ಜಾಸ್ತಿ ಇವೆ. ಅಲ್ಲಿ ದನಗಳ ಸಂಖ್ಯೆ ಹಿಂದೆ ಜಾಸ್ತಿ ಇದ್ದದ್ದು ಈಗ ಕಡಿಮೆಯಾಗಿದೆ. ದನಗಳನ್ನು ಕಳ್ಳತನದಿಂದ ಮಾರಿಕೊಳ್ಳುತ್ತಿದ್ದಾರೆ.

ಎರಡನೆಯದಾಗಿ, ಎಲ್ಲಾ ಕಡೆ ಈ ಅಮೃತ್ ಮಹಲ್ ಕಾಂಪಸ್‌ನಲ್ಲಿರತಕ್ಕಂತಹ ಎಷ್ಟೋ ಮರ ಗಳನ್ನು ಹಾಳು ಮಾಡಿದ್ದಾರೆ. ಆದ್ದರಿಂದ ಈ ಬಗ್ಗೆ ಸೂಕ್ತ ಕ್ರಮ ಕೈಗೊಂಡು ಅಮೃತ್ ಮಹಲ್ ಕಾವಲನ್ನು ರಕ್ಷಣೆ ಮಾಡುವುದಕ್ಕೆ ಸರ್ಕಾರ ಯೋಚನೆ ಮಾಡುತ್ತದೆಯೇ ?

ಶ್ರೀ ವಿಶ್ವನಾಥ ರೆಡ್ಡಿ ಮುದ್ನಾಳ್.—ಹಲವಾರು ಪ್ರಶ್ನೆಗಳನ್ನು ಮಾನ್ಯ ಸದಸ್ಯರು ಕೇಳಿ ದ್ದಾರೆ.

ಒಬ್ಬ ಮಾನ್ಯ ಸದಸ್ಯರು.—ಬಡವರಿಗೆ ಬ್ಯಾಂಕಿನ ಮೂಲಕ ಕುರಿಗಳನ್ನು, ಎಮ್ಮೆಗಳನ್ನು ದನ ಗಳನ್ನು ಕೊಡುತ್ತಿದ್ದಾರೆ. ಅವುಗಳಿಗೆ ರೋಗ ಬಂದರೆ ಹಳ್ಳಿಗಳಲ್ಲಿ ನೋಡಿಕೊಳ್ಳುವುದಕ್ಕೆ ದನದ ಆಸ್ಪತ್ರೆಗಳು ಇರುವುದಿಲ್ಲ. ಆದ್ದರಿಂದ ಅವರು ತಾಲ್ಲೂಕು ಮಟ್ಟದಲ್ಲಿರುವ ಪಶುವೈದ್ಯಶಾಲೆಗೆ ಬರ ಬೇಕಾಗುತ್ತದೆ. ಇದರಿಂದ ಬಹಳಷ್ಟು ತೊಂದರೆಯಾಗುತ್ತಿದೆ. ಸರ್ಕಾರ ಏನಾದರೂ ಕ್ರಮ ಕೈ ಗೊಳ್ಳುತ್ತದೆಯೇ ಎಂದು ಕೇಳುತ್ತಿದ್ದೇನೆ.

ಶ್ರೀ ಎಚ್. ಜಿ. ಗೋವಿಂದೇ ಗೌಡ.—ಕಳೆದ ಸಾರಿ ಕೊಪ್ಪ ತಾಲ್ಲೂಕಿನ ಮೇಗೂರ್ ಎಂಬ ಹಳ್ಳಿಯಲ್ಲಿ ಆರ್.ವಿ.ಡಿ.ಯನ್ನು ಮಂಜೂರು ಮಾಡಿದ್ದೇವೆಂದು ಹೇಳಿ ಅಲ್ಲಿ ಕಟ್ಟಡವನ್ನೂ ಕೂಡ ಇದಕ್ಕಾಗಿ ಕಟ್ಟಿದ್ದಾರೆ, ಆದರೆ ಮಾನ್ಯ ಸಚಿವರು ಉತ್ತರ ಕೊಡುತ್ತಾ ಈ ಸಾಲಿನಲ್ಲಿ ಹೊಸದಾಗಿ ಆರ್.ವಿ.ಡಿ.ಗಳನ್ನು ಕೊಡುವುದಿಲ್ಲ ಎಂದು ಹೇಳಿದ್ದಾರೆ. ಹಾಗಾದರೆ ಕಟ್ಟಿರತಕ್ಕಂತಹ ಕಟ್ಟಡದ ಪರಿಸ್ಥಿತಿ ಏನು ? ಎಂಬ ಶಂಕೆ ನನಗೆ ಪ್ರಾರಂಭವಾಗಿದೆ. ಇದರ ಬಗ್ಗೆ ಮಾನ್ಯ ಸಚಿವರು ಉತ್ತರ ಹೇಳಬೇಕು.

ಶ್ರೀ ಮಲ್ಲಾರಗೌಡ ಎಸ್. ಪಾಟೀಲ್.—ಮಾನ್ಯ ಮುಖ್ಯಮಂತ್ರಿಗಳೂ ಸಭೆಯಲ್ಲಿ ಇರುವುದ ರಿಂದ ನಾನು ಒಂದು ಪ್ರಶ್ನೆಯನ್ನು ಕೇಳುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳು ಸಂಕೇಶ್ವರಕ್ಕೆ ಬಂದಿದ್ದಾಗ ಅಲ್ಲಿಗೆ ಒಂದು ಪಶು ವೈದ್ಯಕೀಯ ಕಾಲೇಜು ಬೇಕೆಂದು ಮನವಿಯನ್ನು ಕೊಟ್ಟಿದ್ದರು. ಅದನ್ನು ತೆಗೆಯುತ್ತೇವೆಂಬ ಭರವಸೆಯನ್ನೂ ಅಲ್ಲಿಯ ಜನತೆಗೆ ಕೊಟ್ಟಿದ್ದಾರೆ. ಮಾನ್ಯ ಮಂತ್ರಿಗಳು ಅದರ ಬಗ್ಗೆ ಏನು ಕ್ರಮ ಕೈಗೊಳ್ಳುತ್ತಾರೆ ?

ಶ್ರೀ ಎಸ್. ಪಿ. ಗಂಗಾಧರಪ್ಪ.—ಬ್ಯಾಂಕುಗಳಿಂದ ಸಾಲವನ್ನು ತೆಗೆದುಕೊಂಡು ಹಸುಗಳು ಹಾಗೂ ಎಮ್ಮೆಗಳನ್ನು ತೆಗೆದುಕೊಂಡಿದ್ದಾರೆ. ಆದರೆ ಅವುಗಳಿಗೆ ಕೃತಕ ಗರ್ಭಧಾರಣೆಯನ್ನು ಮಾಡಿದರೂ ಕೂಡ ಬಹಳಷ್ಟು ಕಡೆ ಫಲಕಾರಿಯಾಗಿಲ್ಲದಿರುವುದರಿಂದ, ಪ್ರತಿಯೊಂದು ಪಶು ವೈದ್ಯ ಶಾಲೆಗಳಲ್ಲಿ ಬೀಜದ ಹೋರಿಗಳು ಹಾಗೂ ಬೀಜದ ಕೋಣಗಳನ್ನು ಇಡುವಂತಹ ವ್ಯವಸ್ಥೆ ಮಾಡು ತ್ತೀರಾ ?

ಒಬ್ಬ ಮಾನ್ಯ ಸದಸ್ಯರು.—ನಮ್ಮ ರಾಜ್ಯದಲ್ಲಿ ಅಮೃತ್ ಮಹಲ್ ತಳಿಯು ದಿನೇ ದಿನೇ ಕಡಿಮೆಯಾಗುತ್ತಿದೆ. ಆದ್ದರಿಂದ ಈ ತಳಿಯ ವೃದ್ಧಿಗಾಗಿ, ಪ್ರತಿಯೊಂದು ಆರ್.ವಿ.ಡಿ.ಯಲ್ಲಿ ಅಮೃತ್ ಮಹಲ್ ತಳಿಯ ಬೀಜದ ಹೋರಿಗಳನ್ನು ಇಡುವಂತಹ ವ್ಯವಸ್ಥೆಯನ್ನು ಮಾಡುತ್ತೀರಾ ?

ಶ್ರೀ ವಿಶ್ವನಾಥ ರೆಡ್ಡಿ ಮುದ್ನಾಳ್.—ಮಾನ್ಯ ಸದಸ್ಯರಾದ ಎಡಿಯೂರಪ್ಪನವರ ಪ್ರಶ್ನೆ ನಿಜವಾಗಿಯೂ ಪರಿಶೀಲನೆ ಮಾಡಬೇಕಾದದ್ದೆ. ಅದೇ ರೀತಿ ಶ್ರೀ ಯಾವಗಲ್‌ರವರು ಆರ್.ವಿ.ಡಿ.ಯಲ್ಲಿ ಒಂದು ಇಂಜೆಕ್ಷನ್‌ಗೆ ೪ ರೂಪಾಯಿಗಳನ್ನು ತೆಗೆದುಕೊಳ್ಳುತ್ತಿದ್ದಾರೆಂದು ಹೇಳಿದರು. ಅದರ ಬೆಲೆ ಒಂದು ಡೋಸ್‌ಗೆ ೩–೬೦ ಪೈಸೆ, ಅದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಹಣವನ್ನು ತೆಗೆದುಕೊಂಡಿದ್ದರ ಬಗ್ಗೆ ಪರಿಶೀಲನೆ ಮಾಡಿ, ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಇಲಾಖೆಯ ಅಧಿಕಾರಿಗಳ ಜೊತೆಯಲ್ಲಿ ಸಮಾಲೋಚಿಸುತ್ತೇನೆ.

ಮತ್ತೆ ಕಟ್ಟಡಗಳನ್ನು ಕಟ್ಟುವ ಬಗ್ಗೆ ಹಾಗೂ ಕಟ್ಟಿರತಕ್ಕಂತಹ ಕಟ್ಟಡಗಳನ್ನು ರಿಪೇರಿ ಮಾಡುವ ಬಗ್ಗೆ ಮಾನ್ಯ ಸದಸ್ಯರನೇಕರು ಹೇಳಿದ್ದಾರೆ. ಯಾವ ಯಾವುದನ್ನು ಲೋಕೋಪಯೋಗಿ ಇಲಾಖೆಯವರು ರಿಪೇರಿ ಮಾಡುವುದಕ್ಕೆ ತೆಗೆದುಕೊಂಡಿದ್ದಾರೋ ಅವರು ಅದನ್ನು ರಿಪೇರಿ ಮಾಡುತ್ತಾರೆ. ಆದರೆ ದಾನವಾಗಿ ಕಟ್ಟಿರತಕ್ಕಂತಹ ಕಟ್ಟಡಗಳು ಏನಿವೆ, ಅವು ಸ್ಪೆಸಿಫಿಕೇಷನ್ ಪ್ರಕಾರ ಇಲ್ಲದಿರುವ ಪ್ರಯುಕ್ತ ಲೋಕೋಪಯೋಗಿ ಇಲಾಖೆಗೆ ಅವುಗಳನ್ನು ವಹಿಸಿಕೊಡುವುದಕ್ಕೆ ಸಾಧ್ಯವಾಗಿಲ್ಲ. ಆದರೂ ಕೂಡ ಇಲಾಖೆಯವರು ಆ ಕಟ್ಟಡಗಳ ಬಗ್ಗೆ ಜಾಗ್ರತೆಯನ್ನು ವಹಿಸಬೇಕಾಗಿದೆ. ಇದು ಇದು ಇಲಾಖೆಯವರ ಕರ್ತವ್ಯ ಕೂಡ ಹೌದು. ಆದ್ದರಿಂದ ಆ ಬಗ್ಗೆ ನಾನು ಸಾಧ್ಯವಾದಮಟ್ಟಿಗೆ ರಿಪೇರಿ ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಒಬ್ಬ ಮಾನ್ಯ ಸದಸ್ಯರು.—ಕೋಳಿ ಫಾರಂ ಬಗ್ಗೆ ಸರ್ಕಾರ ಹೆಚ್ಚಿನ ಆಸಕ್ತಿಯನ್ನು ವಹಿಸಬೇಕು.

ಒಬ್ಬ ಮಾನ್ಯ ಸದಸ್ಯರು.—ಅಮೃತ್ ಮಹಲ್ ತಳಿಯ ಬೀಜದ ಹೋರಿಗಳನ್ನು ಆರ್.ವಿ.ಡಿ.ಯಲ್ಲಿ ಇರುವಂತಹ ವ್ಯವಸ್ಥೆಯನ್ನು ಮಾಡಬೇಕು.

ಶ್ರೀ ವಿಶ್ವನಾಥ ರೆಡ್ಡಿ ಮುದ್ನಾಳ್.—ಅದರ ಬಗ್ಗೆ ಕೂಡ ನಾನು ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ. ಜೊತೆಗೆ ತಮ್ಮ ಮೂಲಕ ಮಾನ್ಯ ಸದಸ್ಯರಲ್ಲಿ ವಿನಂತಿಮಾಕೊಳ್ಳುವುದೇನೆಂದರೆ, ತಮ್ಮ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಯಾವುದಾದರೂ ತೊಂದರೆಗಳು ಇದ್ದರೆ ತಾವುವೈಯಕ್ತಿಕವಾಗಿ ನನಗೆಳ ತಿಳಿಸಿದರೆ ಇಲಾಖೆಯವರಿಂದ ಉತ್ತರವನ್ನು ತರಿಸಿ ಅದನ್ನು ಪರಿಹಾರ ಮಾಡುವುದಕ್ಕೆ ಅನುಕೂಲವಾಗುತ್ತದೆ.

ಉಪಾಧ್ಯಕ್ಷರು.— ''೩೧–೩–೧೯೮೪ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಅಭಿಯಾಚನೆ ಕ್ರಮಾಂಕ ೨ ಮತ್ತು ೪ನೇ ಸಂಖ್ಯೆಯ ಬೇಡಿಕೆಗಳಿಗೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗನ್ನು ಸೇರಿ ಬೇಡಿಕೆಗಗೆ ಪಟ್ಟಿಯಲ್ಲಿ ನಮೂದಿಸಿದ ಮೊಬಲಗನ್ನು ಸೇರಿ ಬೇಡಿಕೆಗಳ ಪಟ್ಟಿಯಲ್ಲಿ ಈ ನಮೂದಿಸಿದ ಮೊಬಲಿಗು ಮೀರಿದ ಮೊತ್ತವನ್ನು ಮಂಜೂರು ಮಾಡಬೇಕೆಂದು ಪ್ರಸ್ತಾಪವನ್ನು ಸಭೆಯ ಮತಕ್ಕೆ ಹಾಕುತ್ತೇನೆ.''

ಪ್ರಸ್ತಾಪವು ಅಂಗೀಕರಿಸಲ್ಪಟ್ಟಿತು

(ಅಧ್ಯಕ್ಷರ ಆಜ್ಞೆಯ ಮೇರೆಗೆ ಮಂಜೂರಾದ ಬೇಡಿಕೆಗಳ ಪಟ್ಟಿಯನ್ನು ಈ ಕೆಳಗೆ ನಮೂದಿಸಲಾಗಿದೆ.)

ಅಭಿಯಾಚನೆ ಕ್ರಮಾಂಕ : ೨ ತೋಟಗಾರಿಕೆ

೩೧ನೇ ಮಾರ್ಚಿ ೧೯೮೪ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ತೋಟಗಾರಿಕೆಗೆ ಸಂದಾಯವಾಗುವಲ್ಲಿ ಬರತಕ್ಕಂತಹ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೭,೭೫,೯೪,೦೦೦ ರೂಗಳಿಗಿಂತ ಮೀರದ ಮೊತ್ತವನ್ನು ಲೇಖಾನು ದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಲಾಗಿದೆ.

ಅಭಿಯಾಚನೆ ಕ್ರಮಾಂಕ ; ೪ ವಿಮಾನುಗಾರಿಕೆ

೩೧ನೇ ಮಾರ್ಚ್ ೧೯೮೪ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಿಮಾನುಗಾರಿಕೆಗೆ ಸಂದಾಯ ಮಾಡುವಲ್ಲಿ ಬರತಕ್ಕಂತಹ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೩,೭೧,೪೬,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧,೬೫,೭೯,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನು ದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

ಚುಕ್ಕೆಗುರಂತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು

ಕರ್ನಾಟಕ ೨ನೇ ಹಿಂದುಳಿದ ವರ್ಗಗಳ ಆಯೋಗದಲ್ಲಿ ಸದಸ್ಯರಾಗಿರುವ ಸರ್ಕಾರಿ ನೌಕರರ ಬಗ್ಗೆ

೨೦೧ (ಲ) ಶ್ರೀ ಬಿ.ಜಿ. ಬಣಕಾರ್ (ಹಿರೇಕೇರೂರು) ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಯಾರಾದರೂ ಸರ್ಕಾರಿ ನೌಕರರು ಹಿಂದುಳಿದ ವರ್ಗಗಳ ಆಯೋಗದ ಸದಸ್ಯರನ್ನಾಗಿ ನೇಮಿಸಲಾಗಿದೆಯೆ,

ಆ) ಹಾಗಿದ್ದರೆ, ಯಾರಾದರೂ ಸರ್ಕಾರಿ ನೌಕರರು ಹೀಗೆ ಸದಸ್ಯರಾಗಲು ಅವಕಾಶ ನೀಡಲಾಗಿದೆಯೇ,

ಇ) ಸರ್ಕಾರವು ಅಂತಹ ಸರ್ಕಾರಿ ಅಧಿಕಾರಿಗಳಿಗೆ, ಸರ್ಕಾರಿ ಹುದ್ದೆಗೆ ಅಥವಾ ಸಂಸ್ಥೆಯ ಬೋರ್ಡ್ ಆಫ್ ಮ್ಯಾನೇಜ್‌ಮೆಂಟಿನ ಸದಸ್ಯತ್ವಕ್ಕೆ ರಾಜಿನಾಮೆ ನೀಡುವಂತೆ ನಿರ್ದೇಶನ ನೀಡುತ್ತದೆಯೇ?

ಶ್ರೀಮತಿ ಚಂದ್ರಪ್ರಭಾ ಅರಸ್ (ಮಾನ್ಯ ಸಮಾಜ ಕಲ್ಯಾಣ ಮತ್ತು ರೇಷ್ಮೆ ಮಂತ್ರಿಯವರು).—

ಉತ್ತರ.—

ಅ) ಹೌದು

ಆ) ಹೌದು

ಇ) ಇಲ್ಲ

ಶ್ರೀ ಬಿ.ಜಿ. ಬಣಕಾರ್.—ಈ ಸಮಿತಿಯಲ್ಲಿ ಯಾರಾದರು ಇದ್ದಾರೆ? ಈ ಸಮಿತಿಯ ಟರ್ಮ್ಸ್ ಆಫ್ ರೆಫೆರೆನ್ಸ್ ಏನು?

ಶ್ರೀಮತಿ ಚಂದ್ರಪ್ರಭಾ ಅರಸ್.—ಈ ಆಯೋಗವನ್ನು ಹಿಂದುಳಿದ ವರ್ಗಗಳ ಆಯೋಗ ಎಂದು ರಚನೆ ಮಾಡಿದ್ದೇವೆ. ಇದರಲ್ಲಿರತಕ್ಕಂತಹ ಅಧ್ಯಕ್ಷರು ಮತ್ತು ಸದಸ್ಯರುಗಳ ಹೆಸರುಗಳು ಇಂತಿವೆ–

೧ ಶ್ರೀ ಟಿ. ವೆಂಕಟಸ್ವಾಮಿ ...ಅಧ್ಯಕ್ಷರು

೨ ಡಾ।। ಎಸ್. ಭೀಮಪ್ಪ ...ಸದಸ್ಯರು

೩ ಡಾ।। ಕೆ.ಹೆಚ್. ಚೆಲುವರಾಜ್

೪ ಶ್ರೀ ಎಂ.ವಿ. ಸೂರಾಚಾರ್

೫ ಶ್ರೀ ವಿದ್ಯಾಧರ್ ಗುರುಜಿ

೬ ಪ್ರೊ।। ಜಾನ್ ಬಿ. ಕುಟಿನ್ನ

೭ ಡಾ।। ಅಮ್ಮೆಂಬಾಳ ಬಾಳಪ್ಪ